ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 28 ಶನಿವಾರ 2023

ಸಂಪುಟ: 43 | ಸಂಚಿಕೆ: 280 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರಿನ 'ಪದ್ಮ' ಪುರಸ್ಕೃತರಿಗೆ ಸಿಎಂ ಬಸವರಾಜ ಬೊಮ್ಮಾಯಿ ಅಭಿನಂದನೆ ■ಪುಟ-2

ಕಾಂಗ್ರೆಸ್ ಅಧಿಕಾರಕ್ಕೇರಿದ ದಿನವೇ 10 ಕೆ.ಜಿ. ಅಕ್ಕಿ, ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್, ಮನೆ ಯಜಮಾನಿಗೆ 2 ಸಾವಿರ ಘೋಷಣೆ

–ಮಾಜಿ ಸಿಎಂ ಸಿದ್ದರಾಮಯ್ಯ ಭರವಸೆ

ಮಂಡ್ಯ, ಜ.27(ಮೋಹನ್‌ರಾಜ್)– ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ದಿನವೇ ನಾವು ಘೋಷಿಸಿರುವ 3 ಮಹತ್ವದ ಯೋಜನೆಗಳಾದ ಅನ್ನಭಾಗ್ಯ ಅಕ್ಕಿಯನ್ನು 7ರಿಂದ 10 ಕೆಜಿಗೆ ಏರಿಸುವುದು. ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಹಾಗೂ ಪ್ರತಿ ಮನೆಯ ಯಜಮಾನಿಗೆ ಮಾಸಿಕ 2 ಸಾವಿರ ನೀಡುವ ಯೋಜನೆಯನ್ನು ಈಡೇರಿಸಲಿದ್ದೇವೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪಕ್ಷದ ಬಹು ನಿರೀಕ್ಷಿತ ಪ್ರಜಾಧ್ವನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಘೋಷಿಸಿದ್ದ ಪ್ರತಿ ಮನೆಯ ಸದಸ್ಯರೊಬ್ಬರಿಗೆ ತಲಾ 7 ಕೆಜಿ ಅಕ್ಕಿ ನೀಡುವ ಅನ್ನಭಾಗ್ಯ ಯೋಜನೆಯನ್ನು ಬಿಜೆಪಿ ಸರ್ಕಾರ 5 ಕೆಜಿಗೆ ಇಳಿಸಿದೆ. ಈ ನಿಟ್ಟಿನಲ್ಲಿ ಜನರಿಗೆ ಅನುಕೂಲವಾಗುವ ಯೋಜನೆಗಳನ್ನು ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ರೂಪಿಸಲು ನಿರ್ಧರಿಸಿದ್ದು, ನಮ್ಮ ಭರವಸೆಗಳನ್ನು ನೋಡಿ ಬಿಜೆಪಿ–ಜೆಡಿಎಸ್‌ಗೆ ಭ್ರಮ ನಿರಸನವಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಎಂದೂ ಕೊಟ್ಟ ಮಾತು ತಪ್ಪಿಲ್ಲ. ಒಂದು ವೇಳೆ ನಾವು ಕೊಟ್ಟ ಮಾತಿನಂತೆ ನಡೆದುಕೊಳ್ಳದಿದ್ದರೆ ರಾಜಕೀಯದಲ್ಲೇ ಇರುವುದಿಲ್ಲ ಎಂದ ಅವರು, ವರ್ಷಕ್ಕೆ ಮೂರೂವರೆ ಲಕ್ಷ ಟನ್ ಕಬ್ಬು ಬೆಳೆಯುವ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ಕೇಳುವವರೇ ದಿಕ್ಕಿಲ್ಲ. ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣ ಮಾಡಲು ಬಿಜೆಪಿ ಸರ್ಕಾರ ಮುಂದಾಗಿತ್ತು. ಮುರುಗೇಶ್ ನಿರಾಣಿ ಕಾರ್ಖಾನೆಯನ್ನು ಕೊಂಡುಕೊಳ್ಳಲು ಹೊಂಚು ಹಾಕಿದ್ದರು. ಈ ಭಾಗದ ರೈತರ ಜೊತೆಗೆ ನಾವು ಸಹ ಹೋರಾಟ ಮಾಡಿದ ಫಲ ಕಾರ್ಖಾನೆ ಸರ್ಕಾರಿ ಸ್ವಾಮ್ಯದಲ್ಲೇ ಉಳಿದಿದೆ ಎಂದರು. ಮೈಷುಗರ್ ಸರ್ಕಾರಿ ಸ್ವಾಮ್ಯದಲ್ಲೇ ಉಳಿದರೂ ಕಬ್ಬು ಅರೆಯಲು ಸಾಧ್ಯವಾಗುತ್ತಿಲ್ಲ. ಕಾರ್ಖಾನೆಯನ್ನು ನಂಬಿ ಕಬ್ಬು ಬೆಳೆದ ರೈತರು ಅಕ್ಕಪಕ್ಕದ ಕಾರ್ಖಾನೆಗಳಿಗೆ ಕಡಿಮೆ ಬೆಲೆಗೆ ಕಬ್ಬು ಸರಬರಾಜು ಮಾಡುವಂತಾಗಿದೆ. ಹಿಂದೆ ಅಧಿಕಾರದಲ್ಲಿದ್ದ ಕುಮಾರಸ್ವಾಮಿ ಅವಧಿಯಲ್ಲೇ ಕಾರ್ಖಾನೆ ಅಧಃಪತನವಾಗಿದ್ದು, ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ಮೈಷುಗರ್ ಅನ್ನು ಅತ್ಯಾಧುನೀಕರಣ ಮಾಡಿ, ▶9ನೇ ಪುಟಕ್ಕೆ



ಮಂಡ್ಯ ಜನ ನನಗೆ ಒಂದೇ ಒಂದು ಅವಕಾಶ ಕೊಡಿ: ಡಿಕೆಶಿ



ಮಂಡ್ಯ, ಜ.27(ಮೋಹನ್‌ರಾಜ್)–ನಮ್ಮ ಸಮುದಾಯದ ದೇವೇಗೌಡರು ಪ್ರಧಾನಿಯಾಗುವಾಗ ಕಾಂಗ್ರೆಸ್ ಪಕ್ಷ ಅವರಿಗೆ ಸಹಾಯ ಮಾಡಿದೆ. ಅವರ ಪುತ್ರ ಹೆಚ್.ಡಿ.ಕುಮಾರಸ್ವಾಮಿ 2ನೇ ಬಾರಿ ಸಿಎಂ ಆಗುವಾಗ ಭಿನ್ನಾಭಿಪ್ರಾಯ ಮರೆತು ಪಕ್ಷದ ಅಣತಿಯಂತೆ ಮಂಡ್ಯ ಜಿಲ್ಲೆ ಜನರಿಗಾಗಿ ಹೆಚ್‌ಡಿಕೆ ಪರ ನಾನು ದುಡಿದಿದ್ದೇನೆ. 2019ರ ಲೋಕಸಭಾ ಚುನಾವಣೆಯಲ್ಲಿ ಅವರ ಪುತ್ರ ನಿಖಿಲ್ ಗೆಲ್ಲಬೇಕೆಂದು ಶಕ್ತಿಮೀರಿ ಹೋರಾಡಿದ್ದೇನೆ. ಇದೀಗ ನಿಮ್ಮ ಮನೆ ಮಗನಾಗಿ, ದೊಡ್ಡಾಲಹಳ್ಳಿ ಕೆಂಪೇಗೌಡರ ಮಗನಾಗಿ, ಕೆಪಿಸಿಸಿ ಅಧ್ಯಕ್ಷನಾಗಿ ಕೇಳುತ್ತಿದ್ದೇನೆ ಮಂಡ್ಯ ಜಿಲ್ಲೆಯ ಜನ ▶9ನೇ ಪುಟಕ್ಕೆ

ಬಿಜೆಪಿಯಲ್ಲಿ ಆಂತರಿಕ ಭಿನ್ನಮತ

ದೆಹಲಿಯಲ್ಲಿ ಕುಳಿತ ನಾಯಕನಿಂದ ರಾಜ್ಯದಲ್ಲಿ ಕಿರಿಯರ ಎತ್ತಿಕಟ್ಟುವ ಕೆಲಸ!

- ಹಿರಿಯರು ಸಂಪುಟ ಸೇರಲು ಅಡ್ಡಗಾಲು
- ಮಂಡ್ಯ ಉಸ್ತುವಾರಿ ಗೊಂದಲಕ್ಕೂ ಕಾರಣ ನಾಂದಿ

ಬೆಂಗಳೂರು, ಜ.27(ಕೆಎಂಶಿ)– ದೆಹಲಿಯಲ್ಲಿ ಕುಳಿತಿರುವ ರಾಜ್ಯದ ಹಿರಿಯ ನಾಯಕರೊಬ್ಬರು ರಾಜ್ಯ ಬಿಜೆಪಿಯಲ್ಲಿ ಕಿರಿಯರಿಗೆ ಬೆಂಬಲ ನೀಡಿ ಭಿನ್ನಮತಕ್ಕೆ ನೀರೆರೆಯುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟ ವಿಸ್ತರಿಸಿ ಕೆಲವು ಹಿರಿಯ ಶಾಸಕರನ್ನು ಸೇರಿಸಿಕೊಳ್ಳಲು ಮಾಡಿದ್ದ ತೀರ್ಮಾನಕ್ಕೂ ಈ ನಾಯಕ, ದೆಹಲಿ ವರಿಷ್ಠರ ಮೂಲಕ ಅಡ್ಡಿಪಡಿಸುತ್ತಿದ್ದಾರೆ.

ಇದೆಲ್ಲದಕ್ಕೂ ಮೇಲಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಬದಲಾವಣೆ ಕಿರಿಯರಿಗೆ ತೀವ್ರ ಇರಿಸು ಮುರಿಸು ಉಂಟು ಮಾಡಿದೆ. ಅಬಕಾರಿ ಸಚಿವ ಗೋಪಾಲಯ್ಯ ಅವರನ್ನು ಜಿಲ್ಲಾ ಉಸ್ತುವಾರಿಯಿಂದ ಬಿಡುಗಡೆ ಮಾಡಿ, ಕಂದಾಯ ಸಚಿವ ಆರ್.ಅಶೋಕ್ ಅವರಿಗೆ ವಹಿಸಿರುವುದು ಕಿರಿಯರು ಮತ್ತು ದೆಹಲಿ ನಾಯಕರಿಗೆ ಸಹಿಸದಂತಾಗಿದೆ.



ಸಂಪುಟದಲ್ಲಿ ಇರುವ ಪ್ರಭಾವಿ ಸಚಿವರು ಹಾಗೂ ವಿಧಾನಪರಿಷತ್‌ನ ಸದಸ್ಯರೊಬ್ಬರು ಬದಲಾವಣೆ ವಿರುದ್ಧ ಸಿಡಿದೆದ್ದು, ಅಶೋಕ್ ವಿರುದ್ಧ ಕಾರ್ಯಕರ್ತರನ್ನು ಎತ್ತಿಕಟ್ಟಿದ್ದಾರೆ.

ಜಿಲ್ಲಾ ಉಸ್ತುವಾರಿ ಹೊಣೆ ವಹಿಸಿದ ನಂತರ ಭೇಟಿ ನೀಡಿದ ಮೊದಲ ದಿನವೇ ಅಶೋಕ್‌ಗೆ ತೀವ್ರ ಮುಜುಗರ ಮತ್ತು ಅಪಮಾನ ಮಾಡಿದ್ದಾರೆ. ಜಿಲ್ಲೆಯಿಂದ ಹಿಂದಿರುಗಿ ಎಂದು ಮಂಡ್ಯದಾದ್ಯಂತ ಭಿತ್ತಿಪತ್ರ ಅಂಟಿಸಿರುವುದಲ್ಲದೆ, ಅವರ ವಿರುದ್ಧ ಹಲವು ಪ್ರತಿಭಟನೆಗಳು ನಡೆದಿವೆ. ಮೂಲತಃ ಆರ್‌ಎಸ್‌ಎಸ್‌ನ ಅಶೋಕ್ ವಿರುದ್ಧವೇ ಹೊರಗಿನಿಂದ ಬಂದವರು ಪ್ರಚೋದನೆ ನೀಡಿದ್ದಾರೆ.

ಅಶೋಕ್ ಮತ್ತು ಕೆಲವು ಹಿರಿಯರು ಹೊಂದಾಣಿಕೆ ರಾಜಕೀಯ ಮಾಡಿಕೊಂಡು ಚುನಾವಣೆಯಲ್ಲಿ ಅಧಿಕೃತ ಅಭ್ಯರ್ಥಿಗಳನ್ನು ಪರಾಭವಗೊಳಿಸುತ್ತಿದ್ದಾರೆಂದು ಇದೇ ಗುಂಪು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ದೂರು ನೀಡಿದೆ.

ಈ ದೂರಿನ ಆಧಾರದ ಮೇಲೆ ಅಮಿತ್ ಶಾ ಕಳೆದ ಬಾರಿ ರಾಜ್ಯ ಪ್ರವಾಸದ ಸಂದರ್ಭದಲ್ಲಿ ಸಚಿವ ವಿ.ಸೋಮಣ್ಣ ಅವರ ನಿವಾಸದಲ್ಲಿ ಸಂಘಟನಾ ಹಾಗೂ ಪಕ್ಷದ ಕಾರ್ಯದರ್ಶಿಗಳ ಜತೆ ಸಭೆ ನಡೆಸಿದ್ದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ


ಮಂಡ್ಯ ಬೈಪಾಸ್ ಸಂಚಾರಕ್ಕೆ ಮುಕ್ತ

- ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂಗೆ ಎನ್‌ಹೆಚ್‌ಎಐ ಪ್ರಸ್ತಾವನೆ
- ವೇಗ ನಿಯಂತ್ರಣ ಹಾಗೂ ಅಪಘಾತ ತಡೆಗೆ ಪ್ರತೀ 600 ಮೀ.ಗೊಂದು ಸಿಸಿ ಕ್ಯಾಮರಾ

■ಎಸ್.ಟಿ.ರವಿಕುಮಾರ್

ಮೈಸೂರು, ಜ. 27– ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿ–275ರ ಮಂಡ್ಯ ಬೈಪಾಸ್ ಈಗ ವಾಹನ ಸಂಚಾರಕ್ಕೆ ಮುಕ್ತವಾಗಿದೆ. ಈ ಯೋಜನೆ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಂಸದ ಪ್ರತಾಪ್ ಸಿಂಹ, ಟ್ವೀಟ್ ಮಾಡಿ ಇದನ್ನು ದೃಢಪಡಿಸಿದ್ದಾರೆ. ಬೈಪಾಸ್ ಮುಕ್ತಗೊಳಿಸಿರುವುದರಿಂದ ಮಂಡ್ಯ ನಗರದಲ್ಲಿನ ದಟ್ಟ ಸಂಚಾರ ಸಮಸ್ಯೆ ಇಲ್ಲದಂತಾಗಿದೆ. ಯಾವುದೇ ಅಡೆ–ತಡೆಯಿಲ್ಲದೇ ಮೈಸೂರು–ಬೆಂಗಳೂರು ನಡುವೆ ವಾಹನಗಳು ಸುಗಮವಾಗಿ ಸಂಚರಿಸುವಂತಾಗಿದೆ.

ಚನ್ನಪಟ್ಟಣ ಮತ್ತು ರಾಮನಗರ ಬೈಪಾಸ್ ಈಗಾಗಲೇ ಮುಕ್ತ ಆಗಿರುವುದರಿಂದ ಫೆಬ್ರವರಿ 27ರೊಳಗಾಗಿ ಎಕ್ಸ್‌ಪ್ರೆಸ್ ವೇ ಕಾಮಗಾರಿ ಪೂರ್ಣಗೊಳಿಸಲು ಹೆದ್ದಾರಿ ಪ್ರಾಧಿಕಾರವು ಉದ್ದೇಶಿಸಿದ್ದು, ಮಾರ್ಚ್ ಮೊದಲ ವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ದಶಪಥ ಹೆದ್ದಾರಿಯನ್ನು ಉದ್ಘಾಟಿಸುವ ಸಾಧ್ಯತೆ ಇದೆ. ಮಂಡ್ಯ ಬೈಪಾಸ್ ಮುಕ್ತವಾಗಿರುವುದರಿಂದ ಸುರಕ್ಷತೆಯಿಂದ ▶9ನೇ ಪುಟಕ್ಕೆ



ಸಂಸದ ಪ್ರತಾಪ್‌ಸಿಂಹ ಟ್ವೀಟ್ ಮಾಡಿರುವ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಮಂಡ್ಯ ಬೈಪಾಸ್‌ನ ವಿಹಂಗಮ ನೋಟ.

ಮೈಸೂರಿನ 'ಪದ್ಮ' ಪುರಸ್ಕೃತರಿಗೆ ಸಿಎಂ ಬಸವರಾಜ ಬೊಮ್ಮಾಯಿ ಅಭಿನಂದನೆ

ಮೈಸೂರು, ಜ.27(ಆರ್‌ಕೆ)– ಹಿರಿಯ ಸಾಹಿತಿ, ಲೇಖಕ ಎಸ್.ಎಲ್.ಭೈರಪ್ಪ ಸೇರಿದಂತೆ ಮೈಸೂರಿನ ಮೂವರು 'ಪದ್ಮ' ಪ್ರಶಸ್ತಿ ಪುರಸ್ಕೃತರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ಆತ್ಮೀಯವಾಗಿ ಅಭಿನಂದಿಸಿದರು.

ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿಗಳು, ಮಂಡಕಳ್ಳಿಯಿಂದ ನೇರವಾಗಿ ಕುವೆಂಪುನಗರದ ಎಸ್.ಎಲ್.ಭೈರಪ್ಪ ನಿವಾಸಕ್ಕೆ ತೆರಳಿ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಅವರನ್ನು ಪುಷ್ಪಗುಚ್ಛ ನೀಡಿ, ಶುಭ ಕೋರಿದರಲ್ಲದೆ, ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಫಲತಾಂಬೂಲ ನೀಡಿ ಸನ್ಮಾನಿಸಿದರು. ನಂತರ ಟಿ.ಕೆ. ಲೇಔಟ್‌ನಲ್ಲಿರುವ ಡಾ. ಖಾದರ್ ವಲ್ಲಿ ದುಡೇಕುಲ ನಿವಾಸಕ್ಕೆ ತೆರಳಿದ ಮುಖ್ಯಮಂತ್ರಿಗಳು, ಪದ್ಮಶ್ರೀ ಪ್ರಶಸ್ತಿ ವಿಜೇತ ಅವರನ್ನು ಸನ್ಮಾನಿಸಿ, ಶುಭ ಕೋರಿದರು.. ಬಳಿಕ ಗಂಗೋತ್ರಿ ಬಡಾವಣೆಯಲ್ಲಿರುವ ಪದ್ಮಶ್ರೀ ಪುರಸ್ಕೃತರಾದ ಪುರಾತತ್ವ ಇಲಾಖೆಯ ನಿವೃತ್ತ ಸೂಪರಿಂಟೆಂಡಿಂಗ್ ಎಸ್. ಸುಬ್ಬರಾಮನ್ ಅವರನ್ನೂ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಸಚಿವರಾದ ಆರ್.ಅಶೋಕ್, ಗೋವಿಂದ ಕಾರಜೋಳ, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಹೇಮಂತ್‌ಕುಮಾರ್ ಗೌಡ, ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಇತರರು ಉಪಸ್ಥಿತರಿದ್ದರು.


ಎಸ್.ಎಲ್.ಭೈರಪ್ಪ


ಡಾ. ಖಾದರ್ ವಲ್ಲಿ ದುಡೇಕುಲ


ಎಸ್. ಸುಬ್ಬರಾಮನ್

ಮೋದಿ ಇಲ್ಲದಿದ್ದರೆ ನನಗೆ ಈ ಪ್ರಶಸ್ತಿ ದೊರೆಯುತ್ತಿರಲಿಲ್ಲ: ಎಸ್.ಎಲ್.ಭೈರಪ್ಪ

ಮೈಸೂರು, ಜ.27– ನಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಲ್ಲ. ಯಾವುದೇ ರಾಜಕೀಯ ಸಂಬಂಧ ಹೊಂದಿಲ್ಲದಿದ್ದರೂ ನಾನು ರಾಜಕೀಯದ ಬಗ್ಗೆ, ಇತಿಹಾಸ ಪುಸ್ತಕಗಳನ್ನು ಓದಿದ್ದೇನೆ. ನನಗೆ ಈ ಪ್ರಶಸ್ತಿ ನೀಡಿದ್ದಕ್ಕಾಗಿ ನಾನು ಮೋದಿ ಸರ್ಕಾರವನ್ನು ಹೊಗಳುವುದಿಲ್ಲ. ನನ್ನ ಕಾರ್ಯಗಳನ್ನು ಗುರುತಿಸಿ ಪ್ರಧಾನಿ ನರೇಂದ್ರ ಮೋದಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ. ಇಲ್ಲದಿದ್ದರೆ ನನಗೆ ಅದು ದೊರೆಯುತ್ತಿರಲಿಲ್ಲ. ಈ ಸರ್ಕಾರದಲ್ಲಿ ನನಗೆ ಪ್ರಶಸ್ತಿ ದೊರೆತಿರುವುದಕ್ಕೆ ನನಗೆ ಖುಷಿಯಾಗಿದೆ ಎಂದು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕವಿ ಕುಮಾರವ್ಯಾಸ 500 ವರ್ಷಗಳ ಹಿಂದೆ ನಿಧನರಾಗಿದ್ದರೂ ಇಂದಿಗೂ ಓದುವ ಅವರ 'ಭಾರತ'ದ ಉದಾಹರಣೆಯನ್ನು ಉಲ್ಲೇಖಿಸಿದರು. ಕುಮಾರವ್ಯಾಸರ ಕೃತಿಗಳನ್ನು ಇಂದಿಗೂ ಓದಲಾಗುತ್ತದೆ ಮತ್ತು ಪ್ರತಿಕ್ರಿಯಿಸಲಾಗುತ್ತದೆ. ಅದು ಉತ್ತಮ ಸಾಹಿತ್ಯದ ನಿಜವಾದ ಅರ್ಹತೆಯಾಗಿದೆ. ನನ್ನ ಸಾಹಿತ್ಯ ಕೃತಿಗಳ ಯೋಗ್ಯತೆಯನ್ನು ಸಂತತಿಯೇ ನಿರ್ಧರಿಸುತ್ತದೆ ಎಂದು ಹೇಳಿದರು.

ಮೋದಿ 2029ರವರೆಗೂ ನಿವೃತ್ತರಾಗಬಾರದು:

> **"ಲೇಖಕ ಸತ್ತೇ ಸಾಯುತ್ತಾನೆ. ಆದರೆ ಅವನು ಬರೆದ ಪುಸ್ತಕ ಎಷ್ಟು ದಿನ ಪ್ರಸ್ತುತ ಇರುತ್ತದೋ ಅಲ್ಲಿಯವರೆಗೆ ಲೇಖಕ ಸದಾ ಜೀವಂತವಾಗಿರುತ್ತಾನೆ. ನನ್ನ ಕೃತಿಗಳಿಗೆ ಅಂತಹ ಶಕ್ತಿ ಇದ್ದರೆ ನನಗೆ ಸಂತೋಷ. ನನ್ನ ಕಾದಂಬರಿಗಳ ಮೂಲ ಭಾರತದ ಸಂಸ್ಕೃತಿ. ಈ ಸಂಸ್ಕೃತಿ ಏಕ ರೂಪದಲ್ಲಿ ಬೆಳೆದಿದೆ.- ಎಸ್.ಎಲ್.ಭೈರಪ್ಪ**

ಮೋದಿ ಸರ್ಕಾರವು ಭಾರತಕ್ಕೆ ದೊರೆತ ಅತ್ಯುತ್ತಮ ಸರ್ಕಾರವಾಗಿದೆ. 2029ರವರೆಗೂ ಅವರು ರಾಜಕೀಯವಾಗಿ ನಿವೃತ್ತರಾಗಬಾರದು. ಅದರ ನಂತರ, ಎಲ್ಲಾ ಅರ್ಹತೆಗಳೊಂದಿಗೆ ಅವರು ಬೆಳೆಸಿದ ನಾಯಕ ದೇಶವನ್ನು ಮುನ್ನಡೆಸಬೇಕು ಎಂದು ಅಭಿಪ್ರಾಯಪಟ್ಟರು.

ಮೋದಿಯಂತಹ ಪ್ರಧಾನ ಮಂತ್ರಿಯನ್ನು ನಾವು ಹಿಂದೆಂದೂ ನೋಡಿಲ್ಲ.. ಕಳೆದ 2019 ರಲ್ಲೇ ನಾನು ಮತ್ತೊಮ್ಮೆ ಮೋದಿ ಅವರು ಸ್ಪಷ್ಟ ಬಹುಮತದೊಂದಿಗೆ ಪ್ರಧಾನಿ ಆಗಬೇಕು ಎಂದು ಬರೆದಿದ್ದೆ. ಈಗಲೂ 2024ರಿಂದ 2029 ರವರೆಗೂ ಮೋದಿ ಅವರೇ ಪ್ರಧಾನಿಯಾಗಿರಲಿ. ನಂತರ ಅವರಂತಹ ಸೇವಾ ಮನೋಭಾವವಿರುವ ಇನ್ನೊಬ್ಬ ವ್ಯಕ್ತಿ ಪ್ರಧಾನಿಯಾಗಬೇಕು ಎಂದರು.

ಎಲ್ಲರಿಗೂ ಒಂದೇ ಕಾನೂನು ಇರಬೇಕು: ಸಮಾನ ನಾಗರಿಕ ಸಂಹಿತೆ ಜಾರಿಗೆ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಬೆಂಬಲ ವ್ಯಕ್ತಪಡಿಸಿದರು. ಮೋದಿ ಸರ್ಕಾರ ಸಮಾನ ನಾಗರಿಕ ಸಂಹಿತೆ ಜಾರಿಗೆ ಪ್ರಯತ್ನ ಮಾಡಿರುವುದು ಒಳ್ಳೆಯ ಪ್ರಯತ್ನ. ಇದು ಕಾರ್ಯಗತ ಆಗಲೇಬೇಕು. ದೇಶದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕಾನೂನು ಇರಬಾರದು. ಎಲ್ಲರಿಗೂ ಒಂದೇ ಕಾನೂನು ಅತ್ಯಗತ್ಯ. ಸ್ವಾತಂತ್ರ್ಯ ಬಂದ ಸಂದರ್ಭ ನಮಗೆ ಸರಿಯಾದ ಬುನಾದಿ ಸಿಗಲಿಲ್ಲ. ಹಾಗಾಗಿ ಕಾನೂನು ಒಂದೇ ರೂಪದಲ್ಲಿ ಇರಲಿಲ್ಲ ಎಂದರು.

ಇದೊಂದು ದೊಡ್ಡ ಗೌರವ, ಆಶ್ಚರ್ಯ ತಂದಿದೆ: ಎಸ್.ಸುಬ್ಬರಾಮನ್

ಮೈಸೂರು, ಜ.27–ಇದೊಂದು ದೊಡ್ಡ ಗೌರವ. ಜೊತೆಗೆ ನನಗೆ ಆಶ್ಚರ್ಯವನ್ನುಂಟು ಮಾಡಿದೆ. ಏಕೆಂದರೆ, ನಾನು ಸುಮಾರು 35 ವರ್ಷಗಳ ಹಿಂದೆ ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದಿಂದ ನಿವೃತ್ತನಾಗಿದ್ದೆ. ನನ್ನನ್ನು ಮರೆತುಬಿಟ್ಟರು ಎಂದು ಭಾವಿಸಿದ್ದೆ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಎಸ್.ಸುಬ್ಬರಾಮನ್ ಅಚ್ಚರಿ ವ್ಯಕ್ತಪಡಿಸಿದರು.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದವರಾದ ಎಸ್.ಸುಬ್ಬರಾಮನ್ ಅವರು ಹಳೆಯ ಅಜಂತಾ ಭಿತ್ತಿಚಿತ್ರಗಳಿಂದ ಅಫ್ಘಾನಿಸ್ತಾನದಲ್ಲಿರುವ ಬಮಿಯಾನ್ ಬುದ್ಧನ ಪ್ರತಿಮೆಗಳವರೆಗೆ ಸಂರಕ್ಷಣಾ ಯೋಜನೆಗಳನ್ನು ಕೈಗೊಂಡಿದ್ದರು. ಅವರು ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದ ಅಧೀಕ್ಷಕ, ಪುರಾತತ್ವ ರಸಾಯನಶಾಸ್ತ್ರಜ್ಞ ಮತ್ತು ಚಿತ್ರಕಲಾ ಪರಿಷತ್ ಕಲಾ ಸಂರಕ್ಷಣಾ ಕೇಂದ್ರದ (INTACH) ಮಾಜಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದವರು. ಮೈಸೂರಿನ ಗಂಗೋತ್ರಿ ಲೇಔಟ್ ನಿವಾಸಿಯಾದ ಎಸ್.ಸುಬ್ಬರಾಮನ್ ಪುರಾತತ್ವ ಮತ್ತು ಸಂರಕ್ಷಣೆ ಕ್ಷೇತ್ರಕ್ಕೆ ನೀಡಿದ ಸೇವೆ ಮತ್ತು ಕೊಡುಗೆಗಳನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 93 ವರ್ಷದ ಅವರನ್ನು ಭೇಟಿ ಮಾಡಿದ ಮಾಧ್ಯಮಗಳಿಗೆ ತಮಗೆ ಪ್ರಶಸ್ತಿ ಸಂದ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಸುಬ್ಬರಾಮನ್ ಅವರು 1969 ರಿಂದ 1977 ರವರೆಗೆ ಅಫ್ಘಾನಿಸ್ತಾನದಲ್ಲಿ ಬಮಿಯಾನ್ ಬುದ್ಧನ ಮರುಸ್ಥಾಪನೆಯಲ್ಲಿ ಕೆಲಸ ಮಾಡಿದರು. ಆಗಿನ ವಿದೇಶಾಂಗ ವ್ಯವಹಾರಗಳ ಸಚಿವ ಅಟಲ್ ಬಿಹಾರಿ ವಾಜಪೇಯಿ ಅವರು ಆ ದೇಶಕ್ಕೆ ಭೇಟಿ ನೀಡಿದಾಗ, ಪುನರ್ ಸ್ಥಾಪಿಸಿದ ಸ್ಮಾರಕವನ್ನು ಆಫ್ಘಾನಿಸ್ತಾನ ಸರ್ಕಾರಕ್ಕೆ ಹಸ್ತಾಂತರಿಸಿದಾಗ ಇವರು ತಂಡದ ನಾಯಕರಾಗಿದ್ದರು. ಈ ಬಗ್ಗೆ ಜೂ.15, 2021 ರಂದು, 'ಸ್ಟಾರ್ ಆಫ್ ಮೈಸೂರ್'ನಲ್ಲಿ ಅವರ ಸಂದರ್ಶನ ಪ್ರಕಟವಾಗಿತ್ತು.


ಭಾರತದ ರಾಗಿ ಮನುಷ್ಯ: ಡಾ.ಖಾದರ್

ಮೈಸೂರು, ಜ.27–ಡಾ.ಖಾದರ್ ವಲ್ಲಿ ದುದೇಕುಲ ಅವರು ಅಮೇರಿಕಾದಲ್ಲಿ ಆರಾಮದಾಯಕ ಉದ್ಯೋಗ ಹೊಂದಿದ್ದರು. ಈಗಲೂ ತಮ್ಮ ಧ್ಯೇಯೋದ್ದೇಶ ಸಾಧನೆಗಾಗಿ ಭಾರತದಲ್ಲಿ ಅವಿರತ ಶ್ರಮಿಸುತ್ತಿದ್ದಾರೆ. ಎರಡೂವರೆ ದಶಕದಿಂದ ಸಾವಯವ ಆಹಾರ ಪದಾರ್ಥಗಳ ಮಹತ್ವ ಸಾರುತ್ತಿದ್ದಾರೆ. ಭಾರತದ 'ರಾಗಿ ಮನುಷ್ಯ' ಡಾ. ಖಾದರ್ ಅವರನ್ನು ಭಾರತ ಸರ್ಕಾರವು ಈಗ ಪದ್ಮಶ್ರೀಯೊಂದಿಗೆ ಪುರಸ್ಕರಿಸಿದೆ.

ವಿಶ್ವವೇ ಸಾವಯವ ಆಹಾರ ಧಾನ್ಯಗಳ ಮಹತ್ವ ಅರಿಯುವಂತೆ ಮಾಡಿದ ವಿಜ್ಞಾನಿ ಡಾ.ಖಾದರ್, ಹಲವಾರು ಸಂಶೋಧನೆಗಳ ಮೂಲಕ ಹೆಸರು ಮಾಡಿದ್ದಾರೆ. ಧಾನ್ಯಗಳ ಪುನರುಜ್ಜೀವನಕ್ಕಾಗಿ ವ್ಯಾಪಕವಾಗಿ ಕೆಲಸ ಮಾಡಿದ್ದಾರೆ. ಕಣ್ಮರೆಯಾಗುತ್ತಿರುವ ಐದು ವಿಧದ ರಾಗಿಗಳನ್ನು ಪುನರುಜ್ಜೀವನಗೊಳಿಸಿದ್ದಾರೆ. ಕೃಷಿ ವಿಜ್ಞಾನಿ ಅಲ್ಲದೆ, ಅವರು ಹೋಮಿಯೋಪತಿ ವೈದ್ಯರೂ ಆಗಿದ್ದರು. ಭಾರತದಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ, ಮೂರು ವರ್ಷಗಳ ಕಾಲ ವಿದೇಶದಲ್ಲಿ ಪರಿಸರ ವಿಜ್ಞಾನದಲ್ಲಿ ಪೋಸ್ಟ್–ಡಾಕ್ಟರೇಟ್ ಫೆಲೋ ಆಗಿದ್ದರು. ನಂತರ ಅವರು ನಾಲ್ಕು ವರ್ಷಗಳ ಕಾಲ ಮೈಸೂರಿನ ಸಿಎಫ್‌ಟಿಆರ್‌ಐ ವಿಜ್ಞಾನಿಯಾಗಿ ಕೆಲಸ ಮಾಡಿದರು. ಮೊದಲು ಡುಪಾಂಟ್‌ನೊಂದಿಗೆ ಭಾರತದಲ್ಲಿ ಒಂದು ವರ್ಷ ಮತ್ತು ಅಮೆರಿಕಾದಲ್ಲಿ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದರು.

ತಮ್ಮ ಸಂಶೋಧನೆಯ ಸಮಯದಲ್ಲಿ ಧಾನ್ಯಗಳ ಔಷಧೀಯ ಗುಣಗಳನ್ನು ಜಗತ್ತಿಗೆ ಸಾರಿದರು. ಅವರು ಸೂಚಿಸಿದ ಐದು ನಿರ್ದಿಷ್ಟ ರೀತಿಯ ಧಾನ್ಯಗಳನ್ನು ಸಿರಿಧಾನ್ಯಗಳು ಎಂದು ಹೆಸರಿಸಿದರು.

ನಿಧನ



ಆರ್.ಇಮ್ಯಾನುಯೆಲ್

ಮೈಸೂರು, ಜ. 27– ನೈಋತ್ಯ ರೈಲ್ವೆ ಮೈಸೂರು ವಿಭಾಗದ ನಿವೃತ್ತ ಚೀಫ್ ಕ್ಲರ್ಕ್ ಹಾಗೂ ಗೋಕುಲಂ 3ನೇ ಹಂತದ ನಿವಾಸಿ ಆರ್. ಇಮ್ಯಾನುಯೆಲ್ (89) ಗುರುವಾರ ನಿಧನರಾದರು.

ಮೃತರು ಪುತ್ರ ಆಲ್ಬರ್ಟ್ ಕ್ರಿಸ್ಟೋಫರ್, ಸೊಸೆ ವಾಣಿ ಕ್ರಿಸ್ಟೋಫರ್, ಮೊಮ್ಮಗ ಪ್ರಿನ್ಸ್ ಜೆ. ಕ್ರಿಸ್ಟೋಫರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಹದೇವಪುರ ರಸ್ತೆಯಲ್ಲಿರುವ ಗಾಂಧಿನಗರದ ಸಿಎಸ್‌ಐ ಸಿಮೆಟ್ರಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೂಪಾ ನಾಗೇಶ್ ಶಿರಾಲಿ



ಮೈಸೂರಿನ ಯಾದವಗಿರಿಯ ಸಂಕಲ್ಪ ಅಪಾರ್ಟ್‌ಮೆಂಟ್ ವಾಸಿ ನಾಗೇಶ್ ರಾವ್ ಶಿರಾಲಿ ಅವರ ಪತ್ನಿ ರೂಪಾ ನಾಗೇಶ್ ಶಿರಾಲಿ (67) ಗುರುವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಸಹೋದರ ಉದ್ಯಮಿ ಮತ್ತು ಚಾರ್ಟರ್ಡ್ ಅಕೌಂಟೆಂಟ್ ಉಲ್ಲಾಸ್ ಕಾಮತ್ (ಜ್ಯೋತಿ ಲ್ಯಾಬ್) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮುಕ್ಕಾಟಿರಾ ಪೂಣಚ್ಚ

ನಿವೃತ್ತ ಕೇಂದ್ರೀಯ ರೇಷ್ಮೆ ಇಲಾಖೆಯ ಲೆಕ್ಕ ಪರಿಶೋಧನಾಧಿಕಾರಿ ಹಾಗೂ ಕುವೆಂಪುನಗರದ ಪೂರ್ಣದೃಷ್ಟಿ ರಸ್ತೆ, 2ನೇ ಕ್ರಾಸ್, ನಂ. 1407ರ ನಿವಾಸಿ ಮುಕ್ಕಾಟಿರಾ ಪೂಣಚ್ಚ (87) ಗುರುವಾರ ಮುಂಜಾನೆ ನಿಧನರಾದರು. ಶ್ರೀಯುತರು ಪತ್ನಿ ಗೌರಮ್ಮ (ಕಾಳಿಚಂಡ), ಪುತ್ರ ನಾಚಪ್ಪ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಯಕಂಡ ರೋಹಿಣಿ



ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ನಾಯಕಂಡ ಪ್ರಕಾಶ್ ಮುತ್ತಪ್ಪ (ಕೈಕಾಡ್) ಅವರ ಪತ್ನಿ ನಾಯಕಂಡ ರೋಹಿಣಿ (56) (ಪುಷ್ಪಾ ಕಡೆಮಾಡ) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಶಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೇರಿ ಮೆನೆಜೆಸ್

ವಿರಾಜಪೇಟೆ : ಜಾಕಬ್ ಮೆನೆಜೆಸ್ ಅವರ ತಾಯಿ ಮೇರಿ ಮೆನೆಜೆಸ್ (85) ಗುರುವಾರ ಪಟ್ಟಣದಲ್ಲಿ ನಿಧನರಾದರು.

ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಸೇಂಟ್ ಆನ್ಸ್ ಸೆಮಿಟ್ರಿಯಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೋಮಸುಂದರ್



ನಂಜನಗೂಡು : ನಿವೃತ್ತ ಪ್ರಾಚಾರ್ಯರು ಹಾಗೂ ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ಸೋಮಸುಂದರ್ (74) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮ ಹೆಚ್.ಡಿ.ಕೋಟೆ ತಾಲೂಕು ಮುಳ್ಳೂರಿನಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ತ್ರಿಲೋಕ್ ಚಂದ್ ಗುಪ್ತ

ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿ ತ್ರಿಲೋಕ್ ಚಂದ್ ಗುಪ್ತ (72) ಜ.25 ರಂದು ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟದೇವಮ್ಮ



ಮೈಸೂರು ತಾಲೂಕು ಮುರುಡಗಳ್ಳಿ ಗ್ರಾಮದ ನಿವಾಸಿ ಹಾಗೂ ದೂರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಶ್ರೀಮತಿ ಪುಟ್ಟದೇವಮ್ಮ (72) ಗುರುವಾರ ನಿಧನರಾದರು. ಮೃತರು ಪತಿ ಚಾಮುಂಡಪ್ಪ, ಮೂವರು ಪುತ್ರರು, ಮೂವರು ಪುತ್ರಿಯರು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಇಂದು ಮಧ್ಯಾಹ್ನ ಅವರ ಸ್ವಗ್ರಾಮ ಮುರುಡಗಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವನ್ಯಜೀವಿ ನಿಯಂತ್ರಣಕ್ಕೆ ವಿಶೇಷ ಕಾರ್ಯಪಡೆ ರಚನೆ

- **ಒಂದು ಚಿರತೆ ಸೆರೆ ಸಿಕ್ಕ ತಕ್ಷಣ ಕಾರ್ಯಪಡೆ ವಿಸರ್ಜನೆ ಇಲ್ಲ**
- **ಮೈಸೂರಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಘೋಷಣೆ**

ಮೈಸೂರು,ಜ.27(ಆರ್‌ಕೆ)–ವನ್ಯಜೀವಿ–ಮಾನವ ಸಂಘರ್ಷ ತಡೆಗೆ ಸ್ಪೆಷಲ್ ಟಾಸ್ಕ್ ರಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಅವರು, ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದರು. ಮೈಸೂರಿನಲ್ಲಿ ಟಾಸ್ಕ್‌ಫೋರ್ಸ್ ತಂಡವು ಚಿರತೆಯನ್ನು ಸೆರೆಹಿಡಿದಿದೆ. ಹಾಸನ ಸೇರಿದಂತೆ ಬೇರೆ ಜಿಲ್ಲೆಗಳಲ್ಲೂ ಈ ಸಮಸ್ಯೆ ಇರುವುದರಿಂದ ಟಾಸ್ಕ್‌ಫೋರ್ಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಯಾವುದೋ ಒಂದು ಸ್ಥಳದಲ್ಲಿ ಚಿರತೆ ಹಿಡಿದ ಮಾತ್ರಕ್ಕೆ ಟಾಸ್ಕ್‌ಫೋರ್ಸ್ ವಿಸರ್ಜಿಸಲಾಗದು. ಮೈಸೂರು ಭಾಗದಲ್ಲಿ ಆನೆ, ಚಿರತೆ ಉಪಟಳ ಹೆಚ್ಚಾಗಿದೆ. ಆದ್ದರಿಂದ ತಂಡಗಳು ನಿರಂತರವಾಗಿ ಸಕ್ರಿಯವಾಗಿರುತ್ತವೆ. ಅದಕ್ಕೆ ಬೇಕಾಗಿರುವ ಸಲಕರಣೆಗಳು, ವಾಹನ ಹಾಗೂ ಅನುದಾನವನ್ನೂ ನೀಡುತ್ತೇವೆ. ಈ ಬಗ್ಗೆ ಸಭೆ ನಡೆಸಿ ಚಿರತೆ ದಾಳಿ ತಡೆಯುವಂತೆ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.



ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಿಳುವಳಿಕೆ ನೀಡಬೇಕು. ರಾತ್ರಿ ವೇಳೆ ಎಚ್ಚರದಿಂದ ಓಡಾಡಿ ಏನು ಮಾಡಬೇಕು, ಏನು ಮಾಡಬಾರದೆಂದು ತಿಳಿಹೇಳಿ ಹಾಗೂ ಫಾರೆಸ್ಟ್ ಗಾರ್ಡ್‌ಗಳಿಗೆ ತರಬೇತಿ ನೀಡಿ ಹಾಗೆಯೇ ಪ್ರಾಣಿಗಳ ಚಲನ–ವಲನ, ವರ್ತನೆ ಬಗ್ಗೆ ಜನರಿಗೆ ಮನವರಿಗೆ ಮಾಡಿಕೊಟ್ಟು ಗುಂಪಿನಲ್ಲಿರುವಾಗ ಮತ್ತು ವ್ಯಕ್ತಿಗತವಾಗಿ ಪ್ರಾಣಿಗಳು ಕಂಡಾಗ ಯಾವ ರೀತಿ ನಡೆದುಕೊಳ್ಳಬೇಕೆಂಬುದರ ಬಗ್ಗೆ ಜನರಿಗೆ ಮಾಹಿತಿ ನೀಡುವಂತೆ ಹೇಳಿದ್ದೇನೆ ಎಂದು ಮುಖ್ಯಮಂತ್ರಿಗಳು ನುಡಿದರು.

ಜನಪರ ಬಜೆಟ್: ಕಳೆದ ವರ್ಷದಂತೆ ಈ ಬಾರಿಯೂ ನಾವು ಜನಪರ ಬಜೆಟ್ ನೀಡುತ್ತೇವೆ ಎಂದು ಬಸವರಾಜ ಬೊಮ್ಮಾಯಿ ನುಡಿದರು. ಚುನಾವಣೆಗೆ ವಿಶೇಷ ಬಜೆಟ್ ಎನ್ನಲಾಗದು. ಜನರಿಗೆ ಬೇಕಾದ ಅಂಶಗಳನ್ನೊಳಗೊಂಡ ಆಯ–ವ್ಯಯ ಮಂಡಿಸಲಾಗುವುದು. ಅದರಲ್ಲಿ ಮೈಸೂರಿನ ಸಮಗ್ರ ಅಭಿವೃದ್ಧಿಗೂ ಆದ್ಯತೆ ಇರುತ್ತದೆ. ಒಟ್ಟಾರೆ ರಾಜ್ಯದ ಜನಪರವಾದ ಬಜೆಟ್ ಮಂಡನೆ ಮಾಡುತ್ತೇವೆ ಎಂದು ಅವರು ನುಡಿದರು.

ವಿರೋಧವಿಲ್ಲ: ಮಂಡ್ಯ ಉಸ್ತುವಾರಿ ಸಚಿವರಾಗಿ ಆರ್.ಅಶೋಕ್ ಅವರನ್ನು ನೇಮಿಸಿರುವುದಕ್ಕೆ ಯಾವ ವಿರೋಧವೂ ಇಲ್ಲ. ಎಲ್ಲರೂ ಶುಭ ಕೋರಿ ಒಳ್ಳೆ ಕೆಲಸ ಮಾಡಿ ಎಂದು ಹಾರೈಸುತ್ತಿದ್ದಾರೆ. ಬಿಜೆಪಿಯಲ್ಲಿ ಯಾರಿಗೂ ಅಸಮಾಧಾನವಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಶೋಕ್ ಒಳ್ಳೆಯ ಕೆಲಸ ಮಾಡುತ್ತಾರೆಂಬ ನಂಬಿಕೆ ಇದೆ ಎಂದರು.

ಮುಸ್ಲಿಮರ ಓಲೈಕೆಯಲ್ಲ: ಪ್ರಧಾನ ಮಂತ್ರಿ ನರೇಂದ್ರ ಮೋದಿ ದೇಶದಲ್ಲಿ ಎಲ್ಲಾ ಸಮುದಾಯದ ಹಿತ ಕಾಯಬೇಕು ಎಂದಾಕ್ಷಣ ಮುಸ್ಲಿಮರ ಓಲೈಕೆ ಎನ್ನಲಾಗದು. ಎಲ್ಲ ವರ್ಗದ ಹಿತ ಕಾಯುವುದು ಅವರ ಜವಾಬ್ದಾರಿ ಎಂದ ಮುಖ್ಯಮಂತ್ರಿಗಳು, ಸಿದ್ದರಾಮಯ್ಯರ 'ಭಾಗ್ಯ'ಗಳಲ್ಲಿ ಶಾದಿ ಭಾಗ್ಯದಂತಹ ಹಲವು ಯೋಜನೆಗಳು ಅವರಿಗೇ ಮುಳುವಾಗಿವೆ ಎಂದು ಪ್ರಶ್ನೆಯೊಂದಕ್ಕೆ ವ್ಯಂಗ್ಯವಾಡಿದರು.

ನಾಳೆ ದಾಸ ಸಾಹಿತ್ಯೋತ್ಸವ

ಮೈಸೂರು,ಜ.27(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಜ.29ರಂದು ಸಂಜೆ 5ಕ್ಕೆ ದಾಸ ಸಾಹಿತ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಾಟ್ಯ ಸ್ವರಾಂಜಲಿ ಸಂಸ್ಥೆಯ ಪುಷ್ಪಲತಾ ಶಿವಕುಮಾರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾಟ್ಯ ಸ್ವರಾಂಜಲಿ ಸಂಸ್ಥೆ ವತಿಯಿಂದ ದಾಸ ಸಾಹಿತ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅಂದು ಸಂಜೆ 5 ರಿಂದ ರಾತ್ರಿ 9 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ. ಶಾಸ್ತ್ರೀಯ ಸಂಗೀತದೊಡನೆ ಸುಗಮ ಸಂಗೀತ ಅಭ್ಯಾಸ ಮಾಡಿದ್ದೇವೆ. ದಾಸ ಸಾಹಿತ್ಯ ಕನ್ನಡದಲ್ಲಿರುವುದರಿಂದಾಗಿ ಜನರಿಗೆ ಸುಲಭವಾಗಿ ಅರ್ಥವಾಗುತ್ತವೆ ಎಂಬ ಕಾರಣದಿಂದಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ 20 ಮಂದಿ ಗಾಯಕರು ಗಾಯನ ನಡೆಸಿಕೊಡಲಿದ್ದಾರೆ. ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಾಟ್ಯ ಸ್ವರಾಂಜಲಿ ಸಂಸ್ಥೆ ಎ.ಎಸ್.ಪ್ರಸನ್ನಕುಮಾರ್, ಚಂದ್ರಶೇಖರ್, ಗೀತಾ, ಅಮೃತೇಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.1.2023 ಶನಿವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಮೈಸೂರು ಯೋಗ ಒಕ್ಕೂಟ :** ವಾರ್ಷಿಕೋತ್ಸವ, ರಥಸಪ್ತಮಿ ಅಂಗವಾಗಿ ಸಾಮೂಹಿಕ ಸೂರ್ಯ ನಮಸ್ಕಾರ, ಸೂರ್ಯಯಜ್ಞ ಸಮಾರಂಭ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಮೈಸೂರು ಯೋಗ ಒಕ್ಕೂಟದ ಗೌರವ ಅಧ್ಯಕ್ಷ ಡಾ. ಎ.ಎಸ್. ಚಂದ್ರಶೇಖರ್, ಮುಖ್ಯ ಅತಿಥಿಗಳು : ಡಾ. ಪುಷ್ಪಾ, ಪ್ರಾಸ್ತಾವಿಕ ನುಡಿ : ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ. ಜಲೇಂದ್ರ ಕುಮಾರ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಉತ್ತರ ದ್ವಾರ, ಬೆಳಗ್ಗೆ 5.45ಕ್ಕೆ.
- **ಕರ್ನಾಟಕ ಪ್ರಜಾ ಪಾರ್ಟಿ :** ಮ್ಯಾರಥಾನ್, ಸ್ಥಳ: ಎಸ್‌ಜೆಸಿಇ ಕಾಲೇಜಿನಿಂದ, ಬೆಳಗ್ಗೆ 6.30ಕ್ಕೆ.
- **ಸುಯೋಗ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್, ಹಿಮಾಲಯ ಪ್ರತಿಷ್ಠಾನ :** ರಥಸಪ್ತಮಿ ಪ್ರಯುಕ್ತ ಸಾಮೂಹಿಕ ದ್ವಾದಶ ಸೂರ್ಯ ನಮಸ್ಕಾರ, ಉದ್ಘಾಟನೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಅಧ್ಯಕ್ಷತೆ : ಜಿಎಸ್‌ಎಸ್‌ಎಸ್ ಯೋಗ ಸಂಸ್ಥೆ ಸಂಸ್ಥಾಪಕ ಶ್ರೀಹರಿ ದ್ವಾರಕಾನಾಥ್, ಸ್ಥಳ: ಸುಯೋಗ್ ನರ್ಸಿಂಗ್ ಕಾಲೇಜು ಆವರಣ, ರಾಮಕೃಷ್ಣನಗರ, ಬೆಳಗ್ಗೆ 7ಕ್ಕೆ.
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಪುಣ್ಯಾಹ, ನಾಂದಿ, ಗಣಪತಿ ಪೂಜಾ, ಮಹಾಸಂಕಲ್ಪ, ಕಳಶ ಸ್ಥಾಪನಾ, ಸಪ್ತಶತಿ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾಹರಣ ಪೂಜಾ, ಸಂಜೆ 5.30ಕ್ಕೆ ಶ್ರೀ ದ್ವಾದಶ ಸರಸ್ವತಿ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.
- **ವಿರಾಟ್ ವಿಶ್ವಕರ್ಮ ಬ್ಯಾಂಕ್ ಚಿನ್ನದ ಮೌಲ್ಯಮಾಪಕರ ಸಂಘ :** ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎ. ದೊರೆಸ್ವಾಮಿ, ಉಪಸ್ಥಿತರು : ವಿ.ಕೆ. ಭಟ್, ಕೆ.ಜೆ.ಎಸ್. ನಾಯಕ್, ಸಿ. ವೆಂಕಟೇಸಲು, ಪ್ರದೀಪ್ ನಾಯಕ್, ಆರ್. ಜಯಕುಮಾರ್, ಡಾ. ಬಿ. ರಾಮಾಚಾರಿ, ಸ್ಥಳ: ಗೀತಾಮಂದಿರ ಕಲ್ಯಾಣ ಮಂಟಪ, ಲಷ್ಕರ್ ಮೊಹಲ್ಲಾ, ಬೆಳಗ್ಗೆ 10 ರಿಂದ.
- **ಶರಣ ಸಾಹಿತ್ಯ ಪರಿಷತ್ತು :** ದತ್ತಿ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ವಚನ ಗಾಯನ ಸ್ಪರ್ಧೆ, ಉದ್ಘಾಟನೆ : ಸಬ್ ಇನ್ಸ್‌ಪೆಕ್ಟರ್ ಸಿ.ಎಂ. ರವೀಂದ್ರ, ಉಪನ್ಯಾಸ : ಪ್ರೊ. ಡಿ.ಎಸ್. ಸದಾಶಿವಮೂರ್ತಿ ಅವರಿಂದ, ಬಹುಮಾನ ವಿತರಣೆ : ಆರ್. ವಾಸುದೇವ ಭಟ್, ಅಧ್ಯಕ್ಷತೆ : ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಪ್ರಾಂಶುಪಾಲ ಹೆಚ್. ಸತ್ಯಪ್ರಸಾದ್, ಸ್ಥಳ: ವಿಜಯ ವಿಠ್ಠಲ ಸಂಯುಕ್ತ ಪದವಿಪೂರ್ವ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ
- **ಶ್ರೀ ಭವಾನಿಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ :** ನೂತನ ನರ್ಸರಿ ಶಾಲೆ ಉದ್ಘಾಟನೆ ಹಾಗೂ ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯ ಅತಿಥಿಗಳು : ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಂ. ಶಿವಕುಮಾರ್, ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್. ರಮಾನಂದ, ಅಧ್ಯಕ್ಷತೆ : ಸಜ್ಜನ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಎಂ. ಮಹೇಶ್, ಸ್ಥಳ: ಶಾಲೆ ಆವರಣ, ವಿಶ್ವೇಶ್ವರನಗರ, ಸಂಜೆ 4ಕ್ಕೆ
- **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಕಲ್ಯ ಶ್ರೀಕಾಂತಾಚಾರ್ ಅವರಿಂದ ಸುಮಧ್ವ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ, ಮೈಸೂರು :** ಶ್ರುತಿಮಂಜರಿ ರಜತ ಸಂಭ್ರಮ, 25ನೇ ವಾರ್ಷಿಕ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಆರ್.ಎನ್. ತ್ಯಾಗರಾಜನ್ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ರಘುನಂದನ್‌ರಾವ್–ಘಟ, ಸ್ಥಳ:ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ
- **ರಂಗಾನಂದ ಕಲಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಘದ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಅಧ್ಯಕ್ಷತೆ : ಮಹಾರಾಜ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಎನ್. ಉದಯ್‌ಶಂಕರ್, ಕುಮಾರ ರಾಮ ಐತಿಹಾಸಿಕ ನಾಟಕ ಪ್ರದರ್ಶನ, ಸ್ಥಳ: ಕಲಾಮಂದಿರ, ಸಂಜೆ 6.30ಕ್ಕೆ.
- **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಉಪಸ್ಥಿತರು : ಡಾ. ಡಿ.ಬಿ. ನಟೇಶ್, ಹೊನ್ನಳ್ಳಿ ಗಂಗಾಧರ್, ಬೆಂಗಳೂರಿನ ಸಮಷ್ಟಿ ತಂಡದಿಂದ ಮಿಸ್ ಸದಾರಮೆ ನಾಟಕ ಪ್ರದರ್ಶನ, ರಚನೆ : ಬೆಳ್ಳಾವೆ ನರಹರಿ ಶಾಸ್ತ್ರಿ, ನಿರ್ದೇಶನ : ಮಂಜುನಾಥ ಎಲ್. ಬಡಿಗೇರ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು–ಲೇಖನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ಕಸ್ತೂರಿ ಶಂಕರ್

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಮಾದಶೆಟ್ಟಿ ಮತ್ತು ತಂಡ, 1.20 ಭಾವಗೀತೆ– ಪಾವನ ಕಾಶಿನಾಥ್, 3.30 ಮಕ್ಕಳ ಮಂಟಪ – ಮುಖಾಮುಖಿ–ಇಂಗ್ಲೀಷ್ ಭಾಷೆ ಕಲಿಕೆ ಮಹತ್ವ ಕುರಿತು ಮಕ್ಕಳಿಗೆ ಉತ್ತರಿಸಿದ್ದಾರೆ ಆರ್. ಸದಾನಂದ, 4.00 ನೆನಪಿನಂಗಳ–ತ.ರಾ.ಸು. ಅವರ ನೆನಪುಗಳು– ಮಾತನಾಡಿರು ವವರು ಡಾ.ಹಾ.ಮ.ನಾಯಕ್, 6.50 ಕೃಷಿರಂಗ–"ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.15 ಸಿರಿ ಭೂ ವಲಯ–ಸಾಹಿತ್ಯ ಲೋಕದ ಅಚ್ಚರಿ–ಮಾತನಾಡುತ್ತಾರೆ, ಡಾ. ಹೆಚ್.ಪಿ. ಮೋಹನ್ ಕುಮಾರ್ ಶಾಸ್ತ್ರಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಮಾಯಂಕ್ ರೈನ–ಸಿತಾರ್ ವಾದನ

ಚಾಮುಂಡೇಶ್ವರಿ ಕ್ಷೇತ್ರದೆಲ್ಲೆಡೆ ಬಿಜೆಪಿಗೆ ವ್ಯಾಪಕ ಬೆಂಬಲ

ಬಿಜೆಪಿ ಮುಖಂಡ ಎನ್.ಅರುಣ್ ಕುಮಾರ್‌ಗೌಡ ವಿಶ್ವಾಸ



ಮೈಸೂರು, ಜ.27–ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಭಾರತೀಯ ಜನತಾ ಪಾರ್ಟಿಗೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದ್ದು, ಮತದಾರರು ಬಿಜೆಪಿ ಯತ್ತ ವಾಲುತ್ತಿರುವುದು ಸ್ಪಷ್ಟವಾಗಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷರು ಹಾಗೂ ಮುಖಂಡರಾದ ಎನ್ ಅರುಣ್ ಕುಮಾರ್ ಗೌಡ ಹೇಳಿದರು.

ವಿಜಯ ಸಂಕಲ್ಪ ಅಭಿಯಾನದ ಅಂಗವಾಗಿ, ಕ್ಷೇತ್ರದ ಸೀಗಳ್ಳಿಯಲ್ಲಿ ನಡೆದ ನಾಗವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾರ್ಯ ಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಎನ್.ಅರುಣ್ ಕುಮಾರ್‌ಗೌಡರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಎಲ್ಲಾ ಗ್ರಾಮಗಳಲ್ಲೂ ಬಿಜೆಪಿ ಪರ ವಾತಾವರಣ ಸೃಷ್ಟಿಯಾಗಿದ್ದು,ಈ ಬಾರಿ ಚುನಾವಣೆಯಲ್ಲಿ ಕ್ಷೇತ್ರದ ಜನತೆ ಬಿಜೆಪಿಯನ್ನು ಬೆಂಬಲಿಸಲು ನಿರ್ಧರಿಸಿದ್ದಾರೆ ಎಂಬುದು ಸಾಬೀತಾಗುತ್ತಿದೆ.

ಕಾಂಗ್ರೆಸ್–ಜೆಡಿಎಸ್ ಪಕ್ಷಗಳ ಜಿಡ್ಡುಗಟ್ಟಿದ ರಾಜಕಾರಣವನ್ನು ನೋಡಿ ಬೇಸತ್ತಿರುವ ಮತದಾರರು ಅಭಿವೃದ್ಧಿಯನ್ನೇ ಮೂಲಮಂತ್ರ ವನ್ನಾಗಿಸಿಕೊಂಡಿರುವ ಭಾರತೀಯ ಜನತಾ ಪಾರ್ಟಿಯನ್ನು ಬೆಂಬಲಿಸುವುದು ನೂರಕ್ಕೆ ನೂರು ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ವಿಚಾರದಲ್ಲಿ ಕಾಂಗ್ರೆಸ್–ಜೆಡಿಎಸ್ ಪಕ್ಷಗಳು ಅಭಿವೃದ್ಧಿ ವಿಚಾರವನ್ನು ಮರೆಮಾಚಿ,ಕೇವಲ ವೈಯಕ್ತಿಕ ಟೀಕೆ–ಟಿಪ್ಪಣಿ ಮಾಡುತ್ತಾ ಕಾಲ ಕಳೆಯುತ್ತಿರುವುದು ಇವುಗಳ ಧೋರಣೆಗೆ ಹಿಡಿದ ಕನ್ನಡಿಯಾಗಿದೆ.

ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಈ ಬಾರಿ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಪಕ್ಷದ ಗೆಲುವಿಗೆ ಮುನ್ನುಡಿ ಬರೆಯಬೇಕು. ಪಕ್ಷದಿಂದ ಹಮ್ಮಿಕೊಂಡಿರುವ ವಿಜಯ ಸಂಕಲ್ಪ ಅಭಿಯಾನದಲ್ಲಿ ಶ್ರಮಿಸುವ ಮೂಲಕ ಪಕ್ಷದ ಸಂಘಟನೆಯನ್ನು ಗಟ್ಟಿ ಮಾಡಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು...

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ, ಕ್ಷೇತ್ರದ ಪ್ರಧಾನ ಕಾರ್ಯ ದರ್ಶಿ ಪೈಲ್ವಾನ್ ರವಿ, ಯುವ ಮೋರ್ಚಾ ಅಧ್ಯಕ್ಷ ಚೇತನ್, ಮುಖಂಡರಾದ ಬಸವರಾಜು, ಸೀಗಳ್ಳಿ ರವಿ, ನಾಗೇಶ್ ನಾಗವಾಲ, ಕೋಡಿ ಕುಮಾರ್, ದೊರೆಸ್ವಾಮಿ, ಮಾಜಿ ಪಂಡಲ ಪಂಚಾಯತ್ ಸದಸ್ಯ ಚಿಕ್ಕೇಗೌಡ, ಮಹಾದೇವ, ಈಶ್ವರ ನಾಯ್ಕ, ಸುನಿಲ್ ಬೊಮ್ಮನಹಳ್ಳಿ, ಮಾಲೆಗೌಡ ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.

ಇಂದು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕುಂಭಾಭಿಷೇಕ

ಮೈಸೂರು, ಜ.27–ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ನಾಳೆ (ಜ.28) ಶ್ರೀ ಚಾಮುಂಡೇಶ್ವರಿ ಅಮ್ಮನವರ 33ನೇ ವರ್ಷದ ಕುಂಭಾಭಿಷೇಕ ವಿಜೃಂಭಣೆಯಿಂದ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ಮತ್ತು 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಕುಂಭಾಭಿಷೇಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ ವಹಿಸಲಿದ್ದು, ಮುಖ್ಯ ಅತಿಥಿ ಗಳಾಗಿ ಮೇಯರ್ ಶಿವಕುಮಾರ್, ಶಾಸಕ ಎಲ್. ನಾಗೇಂದ್ರ, ಮಾಜಿ ಶಾಸಕ ಎಂ.ಕೆ. ಸೋಮ ಶೇಖರ್, ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ. ರಾಜೀವ್, ಡಿ.ಧ್ರುವಕುಮಾರ್, ಸಿ.ಬಸವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಕೋಳಿ ಗುತ್ತಿಗೆದಾರ ಸೋಮಣ್ಣ, ಸಿವಿಲ್ ಇಂಜಿನಿಯರ್ ಶಶಿಧರ್, ಕಾರ್ಪೊರೇಟರ್‌ಗಳಾದ ಎಂ. ಶಿವಕುಮಾರ್, ಶ್ರೀಮತಿ ಎಂ. ಎಸ್.ಶೋಭಾ, ಶ್ರೀಮತಿ ಲಕ್ಷ್ಮೀ ಮಾದೇಗೌಡ, ಮಾಜಿ ಕಾರ್ಪೊ ರೇಟರ್‌ಗಳಾದ ನಿಂಗಣ್ಣ, ಬಾಲು, ಸಿ.ಬಸವರಾಜು, ಚನ್ನಪ್ಪ, ಕೆಂಪಣ್ಣ, ಕೇಬಲ್ ರಮೇಶ್, ಎಂ.ಶಂಕರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾಣೆಯಾಗಿದ್ದಾರೆ



ವೆಂಕಟೇಶ್. ಜಿ.ವಿ ಇವರ ಪತ್ನಿಯಾದ 58 ವರ್ಷದ ಇವರು ದಿ: 22.01.2023 ರಿಂದ ಮೈಸೂರಿನ ಕೃಷ್ಣಮೂರ್ತಿ ಪುರಂನಿಂದ ಕಾಣೆಯಾಗಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಸಂಪರ್ಕಿಸಿ

9036683158

ಸೂಕ್ತ ಬಹುಮಾನ ನೀಡಲಾಗುವುದು.

ಶ್ರೀಮತಿ ಭಾಗ್ಯಲಕ್ಷ್ಮಿ.ಎನ್

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.

apmcnanjangud@gmail.com ದೂರವಾಣಿ ಸ: 08221–226309

ಸಂಖ್ಯೆ: ಕೃಉಮಾಸ(ನಂ)/424/2022–23 ದಿನಾಂಕ: 27.01.2023

"ಪ್ರಕಟಣೆ"

ಈ ಮೂಲಕ ಪೇಟೆಕಾರ್ಯಕರ್ತರುಗಳಿಗೆ/ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೆ//ನ್ಯೂಕಲ್ ಎಂಟರ್‌ಪ್ರೈಸಸ್, ಮಾ//ಶ್ರೀ ಎನ್.ವಿ.ಉದಯ್‌ಕುಮಾರ್ ಬಿನ್ ಎಸ್.ಎಸ್ ವೆಂಕಟಚಲಾ ಶೆಟ್ಟಿ, 6 ನೇ ಕ್ರಾಸ್, ವಿದ್ಯಾನಗರ, ಕುವೆಂಪುನಗರ, ತುಮಕೂರು ಇವರಿಗೆ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ನಿವೇಶನ ಸಂಖ್ಯೆ 50 (39 * 65 ಅಡಿ ಅಳತೆ) ಅನ್ನು ಲೀಸ್–ಕಂ–ಸೇಲ್ ಆಧಾರದ ಅನ್ವಯ ಹಂಚಿಕೆಯಾಗಿದ್ದು, ನಿವೇಶನದ ಲೀಸ್–ಕಂ–ಸೇಲ್ 10 ವರ್ಷಗಳ ಅವಧಿ ಪೂರ್ಣಗೊಂಡ ತರುವಾಯ ಕ್ರಯಪತ್ರ ಪಡೆದುಕೊಂಡಿರುತ್ತಾರೆ. ಸದರಿಯವರು ನಿವೇಶನ ಸಂಖ್ಯೆ 50 ರ ನಿವೇಶನ ಸಹಿತ ಕಟ್ಟಡವನ್ನು ಮೆ// ಶ್ರೀಕಂಠೇಶ್ವರ ಟ್ರೇಡರ್ಸ್, ಮಾಲೀಕರು, ಶ್ರೀ ಪ್ರಶಾಂತ್.ಎನ್ ಬಿನ್ ನಾಗರಾಜ್.ಪಿ.ಎಸ್ ನಂ.8, 2 ನೇ ಕ್ರಾಸ್, ಶ್ರೀಕಂಠೇಶ್ವರನಗರ, ಊಟಿ ಮುಖ್ಯ ರಸ್ತೆ, ನಂಜನಗೂಡು ತಾಲ್ಲೂಕು ಇವರಿಗೆ ಮಾರಾಟ ಮಾಡಲು ಅನುಮತಿ ಕೋರಿ, ಮಾರಾಟ ಮಾಡಿದ ನಂತರ ಸಂಸ್ಥೆಯ ಹೆಸರಿನಲ್ಲಿರುವ ಲೈಸನ್ಸ್ ರದ್ದುಪಡಿಸಿಕೊಳ್ಳಲು ಒಪ್ಪಿಗೆ ನೀಡಿರುತ್ತಾರೆ ಹಾಗೂ ಮೆ//ಶ್ರೀಕಂಠೇಶ್ವರ ಟ್ರೇಡರ್ಸ್, ಸಂಸ್ಥೆಯ ಮಾಲೀಕರು ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಿದ್ದು, ಗೋದಾಮಿನ ಅವಶ್ಯಕತೆ ಇರುವುದರಿಂದ ಮೇಲ್ಕಂಡ ನಿವೇಶನ ಸಹಿತ ಕಟ್ಟಡವನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಯುಕ್ತ, ಮೆ//ನ್ಯೂಕಲ್ ಎಂಟರ್ ಪ್ರೈಸಸ್, ಮಾ// ಶ್ರೀ ಎನ್.ವಿ.ಉದಯ್‌ಕುಮಾರ್ ಬಿನ್ ಎನ್.ಎಸ್.ವೆಂಕಟಚಲಾ ಶೆಟ್ಟಿ, 6 ನೇ ಕ್ರಾಸ್, ವಿದ್ಯಾನಗರ, ಕುವೆಂಪುನಗರ, ತುಮಕೂರು ಇವರಿಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ 50 (39 * 65 ಅಡಿ ಅಳತೆ ವಿಸ್ತೀರ್ಣ) ರ ನಿವೇಶನ ಸಹಿತ ಕಟ್ಟಡವನ್ನು ಮೆ// ಶ್ರೀಕಂಠೇಶ್ವರ ಟ್ರೇಡರ್ಸ್, ಮಾಲೀಕರು, ಶ್ರೀ ಪ್ರಶಾಂತ್.ಎನ್ ಬಿನ್ ನಾಗರಾಜ್.ಪಿ.ಎಸ್ #18, 2 ನೇ ಕ್ರಾಸ್, ಶ್ರೀಕಂಠೇಶ್ವರನಗರ, ಊಟಿ ಮುಖ್ಯ ರಸ್ತೆ, ನಂಜನಗೂಡು ತಾಲ್ಲೂಕು ಇವರಿಗೆ ಮಾರಾಟ ಮಾಡುವ ಕುರಿತು ಯಾವುದೇ ಆಕ್ಷೇಪಣೆ ಸಲಹೆ ಮತ್ತು ತಕರಾರುಗಳು ಏನಾದರೂ ಇದ್ದಲ್ಲಿ ಅದನ್ನು ಪುಷ್ಟೀಕರಿಸುವ ದಾಖಲಾತಿಗಳೊಂದಿಗೆ ಈ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಆಕ್ಷೇಪಣೆ/ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

: ಷೆಡ್ಯೂಲ್ ಸ್ವತ್ತಿನ ವಿವರ :

ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ 50 ಪೂರ್ವ ಪಶ್ಚಿಮ 39 ಅಡಿ ಉತ್ತರ ದಕ್ಷಿಣ 65 ಅಡಿಗಳುಳ್ಳ 2535 ಚದರಡಿ ನಿವೇಶನ ಹಾಗೂ ಅದರಲ್ಲಿರುವ ಕಟ್ಟಡ. ನಿವೇಶನ ಸಂಖ್ಯೆ 50 ಕ್ಕೆ ಚೆಕ್ಕುಬಂಧಿ **ಪೂರ್ವಕ್ಕೆ** : ನಿವೇಶನ ಸಂ– 51 **ಪಶ್ಚಿಮಕ್ಕೆ** : ನಿವೇಶನ ಸಂ– 49

ಉತ್ತರಕ್ಕೆ : ಎ.ಪಿ.ಎಂ.ಸಿ ರಸ್ತೆ **ದಕ್ಷಿಣಕ್ಕೆ** : ನಿವೇಶನ ಸಂ– 41

ಸಹಿ/– (ಜಿ.ಮಹೇಶ) ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ನಂಜನಗೂಡು

ಸಹಿ/– (ಎಂ.ಶಿವಮೂರ್ತಿ) ಆಡಳಿತಾಧಿಕಾರಿಯವರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ನಂಜನಗೂಡು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡ ನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು


ಮೈಸೂರು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾಗಿ ಜಿ.ಎಸ್. ಸಂಗ್ರೇಶಿ



ಮೈಸೂರು, ಜ. 27– ಮೈಸೂರಿನ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾಗಿ ಗಡಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ ಅವರನ್ನು ವರ್ಗಾವಣೆ ಮಾಡಿ ಹೈಕೋರ್ಟ್ ಆದೇಶ ಹೊರಡಿಸಿದೆ. ಇವರು ಈವರೆಗೂ ಬೆಂಗಳೂರಿನ ಪ್ರಧಾನ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು.

ಮೈಸೂರಿನಲ್ಲಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾಗಿದ್ದ ಎಂ.ಎಲ್. ರಘನಾಥ್ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾಗಿ ವರ್ಗಾವಣೆ ಮಾಡಲಾಗಿದೆ.

ಬಾಲಿವುಡ್ ನಟ ಅನ್ನು ಕಪೂರ್ ಆಸ್ಪತ್ರೆಗೆ ದಾಖಲು



ಮುಂಬೈ, ಜ.27– ಹಿಂದಿ ಚಿತ್ರರಂಗದ ನಟ ಅನ್ನು ಕಪೂರ್ ಎದೆನೋವಿನಿಂದ ಆಸ್ಪತ್ರೆ ದಾಖಲಾಗಿದ್ದಾರೆ. ಗುರುವಾರ ಬೆಳಿಗ್ಗೆ (ಜ.26) ತೀವ್ರ ಎದೆ ನೋವು ಕಾಣಿಸಿಕೊಂಡ ಬೆನ್ನಲ್ಲೇ ಅನ್ನು ಕಪೂರ್‌ನ್ನು ದೆಹಲಿ ಗಂಗಾ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ನಟನ ಆರೋಗ್ಯ ಪರಿಸ್ಥಿತಿ ಸ್ಥಿರವಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಆಸ್ಪತ್ರೆ ಹೆಲ್ತ್ ಬುಲೆಟಿನ್‌ನಲ್ಲಿ ಹೇಳಲಾಗಿದೆ.

ಮೈಸೂರು ಜೈಲಿಂದ ಸನ್ನಡತೆಯ ಆಧಾರದಲ್ಲಿ 11 ಮಂದಿ ಬಿಡುಗಡೆ



ಮೈಸೂರು, ಜ. 27(ಆರ್‌ಕೆ)– ಗಣರಾಜ್ಯೋತ್ಸವದ ಅಂಗವಾಗಿ ಸನ್ನಡತೆ ಆಧಾರದಲ್ಲಿ ಗುರುವಾರ ಮೈಸೂರು ಕೇಂದ್ರ ಕಾರಾಗೃಹದ 11 ಮಂದಿ ವಾಸಿಗಳನ್ನು ಬಿಡುಗಡೆ ಮಾಡಲಾಯಿತು.


ಅಲ್ಪಾವಧಿ ಶಿಕ್ಷೆಗೆ ಗುರಿಯಾಗಿ ಜೈಲುವಾಸ ಅನುಭವಿಸುತ್ತಿದ್ದ ಚಾಮರಾಜನಗರದ ಎಂ. ನಾಗರಾಜಪ್ಪ, ಹಾಸನದ ದೊರೆಸ್ವಾಮಿ, ಮಡಿಕೇರಿಯ ರಘು, ಬಿ.ಕೆ. ಜಗದೀಶ್, ಹುಣಸೂರಿನ ಸ್ವಾಮೀಗೌಡ, ಚಿತ್ರದುರ್ಗದ ಮಹಂತೇಶ, ಮದ್ದೂರಿನ ಲಂಕೇಶ, ಶ್ರೀರಂಗಪಟ್ಟಣದ ನಾಗರಾಜು, ಸೋಮವಾರಪೇಟೆಯ ಸಿ.ಟಿ. ಜೇಮ್ಸ್, ಮೈಸೂರಿನ ತೆಂಜಿನ ಮತ್ತು ಶ್ರೀಕಂಠಾರಾಧ್ಯ ಎಂಬುವರನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡುವಂತೆ ಸರ್ಕಾರ ಆದೇಶ ನೀಡಲಾಗಿತ್ತು.

ಗುರುವಾರ ಜೈಲಿನಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಜೈಲು ಅಧೀಕ್ಷಕಿ ಕೆ.ಸಿ. ದಿವ್ಯಶ್ರೀ ಅವರು ಬಿಡುಗಡೆ ಪತ್ರ ನೀಡಿ 11 ಮಂದಿಯನ್ನು ಕಳುಹಿಸಿಕೊಟ್ಟರು.

ಈ ಸಂದರ್ಭ ಮಾತನಾಡಿದ ಅವರು, ಸ್ವಾತಂತ್ರ್ಯ ದಿನದಂದು ಮೊದಲ ಹಂತದಲ್ಲಿ 20 ಮಂದಿಯನ್ನು ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗಿತ್ತು. ಇದೀಗ ಎರಡನೇ ಹಂತದಲ್ಲಿ 11 ಮಂದಿಯನ್ನು ಬಿಡುಗಡೆ ಮಾಡಲಾಗಿದೆ. ಸಮಾಜದಲ್ಲಿ ಉತ್ತಮ ಜೀವನ ನಡೆಸಿ, ತಮ್ಮ ಕುಟುಂಬದೊಂದಿಗೆ ಸುಖವಾಗಿರಿ ಎಂದು ಬಿಡುಗಡೆಯಾದವರಿಗೆ ಶುಭ ಹಾರೈಸಿದರು.

ಜೈಲು ಸಹಾಯಕ ಅಧೀಕ್ಷಕ ವಿಜಯ ಎಸ್. ರೋಡ್ಕರ್, ಜೈಲರ್‌ಗಳಾದ ಕೆ.ಹೆಚ್. ವರದರಾಜು, ಎಂ.ಡಿ. ಧರಣೇಶ, ಅಮರ ಹುಲ್ಲೋಳಿ, ಗೀತಾ ಮಾಲಗಾರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಾಳೆ ಪ್ರೊ. ಪಿ. ಜಯರಾಮಯ್ಯ ಹುಟ್ಟುಹಬ್ಬ, ಸಾಕ್ಷ್ಯಚಿತ್ರ ಬಿಡುಗಡೆ



ಮೈಸೂರು, ಜ. 27– ಮೈಸೂರು ವಿಶ್ವವಿದ್ಯಾಲಯ ಭೂಗೋಳ ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಪಿ. ಜಯರಾಮಯ್ಯ ಅವರ 88ನೇ ಹುಟ್ಟುಹಬ್ಬ ಹಾಗೂ ಸಾಕ್ಷ್ಯಚಿತ್ರ ಬಿಡುಗಡೆ ಸಮಾರಂಭವನ್ನು ಜನವರಿ 29ರಂದು ಮೈಸೂರಿನ ರಾಣಿ ಬಹದ್ದೂರ್ ಸಭಾ ಭವನದಲ್ಲಿ ಆಯೋಜಿಸಲಾಗಿದೆ.

ಪ್ರೊ. ಪಿ. ಜಯರಾಮಯ್ಯ ಅಭಿಮಾನಿಗಳ ಬಳಗದ ವತಿಯಿಂದ ನಡೆಯಲಿರುವ ಈ ಜನ್ಮದಿನ ಸಮಾರಂಭ ನಾಳೆ ಮಧ್ಯಾಹ್ನ 12ರಿಂದ 12.20ರವರೆಗೆ, ಸಾಕ್ಷ್ಯಚಿತ್ರ ಬಿಡುಗಡೆ ಮಧ್ಯಾಹ್ನ 1ರಿಂದ 1.30 ಮತ್ತು ಸಾಕ್ಷ್ಯಚಿತ್ರ ವೀಕ್ಷಣೆ ಮಧ್ಯಾಹ್ನ 1.30ರಿಂದ 2.45ರವರೆಗೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರದ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ. ಪಿ. ಬೋರೇಗೌಡ ಅಧ್ಯಕ್ಷತೆ ವಹಿಸಲಿದ್ದು, ಮುಕ್ತ ವಿವಿಯ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿ ಬಾಲಚಂದ್ರ ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಶೈಲಜಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಸೆಂಟ್ ಫಿಲೋಮಿನಾಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ ಗೌರವ ಅತಿಥಿಯಾಗಿ ಆಮಿಸಲಿದ್ದಾರೆ. ಗೋವಾದ ಎಸ್‌ಎಲ್‌ಆರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎಸ್.ಟಿ. ಪುಟ್ಟರಾಜು, ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಕುಮಾರ್, ಹಾಸನ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಪುಟ್ಟರಾಜು ಅವರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಲಾಗಿದೆ.

ಇಂದು ನಡೆಯಬೇಕಿದ್ದ ಬೋಧಕೇತರರ ಕಾರ್ಯಕ್ಷಮತೆ ಪರೀಕ್ಷೆ ರದ್ದು

ಬೆಂಗಳೂರು, ಜ.27– 'ಸಿ' ವೃಂದದ ಬೋಧಕೇತರ ನೌಕರರಿಗೆ ಜ.28ರಂದು ನಡೆಸಬೇಕಿದ್ದ ಕಾರ್ಯಕ್ಷಮತೆ ಪರೀಕ್ಷೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರದ್ದು ಮಾಡಿದೆ. ಲಿಪಿಕ ಸಿಬ್ಬಂದಿ ವರ್ಗದಲ್ಲಿ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣತಿ ಹೆಚ್ಚಿಸಲು ಪರೀಕ್ಷೆ ನಡೆಸುವ ಕುರಿತು ಆಯುಕ್ತರ ಕಚೇರಿ ಸೂಚಿಸಿತ್ತು. ಆದರೆ, ಪರೀಕ್ಷೆ ನಡೆಸಲು ಹಿರಿಯ ಸಿಬ್ಬಂದಿ ಆಕ್ಷೇಪ ವ್ಯಕ್ತಪಡಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ನೋಡಪ್ಪ ಯಾವಾಗಲೂ ಜೀವನದಲ್ಲಿ ಇನ್ನೊಬ್ಬರಿಗೆ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು.

ವಿದ್ಯಾರ್ಥಿ :ಬಿಡಿ ಸಾರ್, ಪರೀಕ್ಷೆಯಲ್ಲಿ ನೀವು ಒಂದು ದಿನ ಆದರೂ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದೀರಾ?

ಮೈಸೂರು ಮಿತ್ರ

ಶನಿವಾರ, 28 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ವಿಧೇಯತೆ ಎಂದೂ ದೌರ್ಬಲ್ಯವಲ್ಲ. ಅದು ನಿಜವಾದ ಶಕ್ತಿ. ನಿಮ್ಮ ಶಕ್ತಿಯನ್ನು ತೋರಿಸಲು ಪ್ರಯತ್ನಿಸುವುದು ನಿಜವಾದ ದೌರ್ಬಲ್ಯ – ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗೆದ್ದರೆ ಆಡೋದಕ್ಕೆ ಅನ್ನೋದು / ಸೋತರೆ ನೋಡೋದಕ್ಕೆ ಅನ್ನೋದು

ನಿಮ್ಮ ಪತ್ರಗಳು

ಸಾರ್ವಜನಿಕರಿಗೆ ಒಳಿತಾಗುವ ಕೆಲಸ ರೈಲ್ವೆ ಇಲಾಖೆ ಮಾಡಲಿ

ಮಾನ್ಯರೆ,

ನಾನು ಬೆಂಗಳೂರಿನಿಂದ ಮೌಂಟ್ ಅಬುಗೆ ಹೊರಡಲು 16534 ಮೈಸೂರಿನ ಬುಕ್ಕಿಂಗ್ ನಂ. 1ನೇ ಕೌಂಟರ್‌ಗೆ ಹೋದಾಗ, ನಾನು ಡೆಬಿಟ್ ಕಾರ್ಡ್ ತೆಗೆದು ಕೊಂಡು ಹೋಗಿದ್ದೆ. ಆದರೆ ಡೆಬಿಟ್ ಕಾರ್ಡ್ ಸಾಧ್ಯವಿಲ್ಲ. ಕ್ಯಾಶ್ ತೆಗೆದುಕೊಂಡು ಬನ್ನಿ ಎಂದರು. ಆದರೆ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಅರ್ಜಿಯಲ್ಲಿ ಕೊಡಿ ಎಂದು ಬೋರ್ಡ್ ಅನ್ನು ಕೌಂಟರ್ ಮುಂದೆ ಹಾಕಿದ್ದರು. ನಾವು 7 ಮಂದಿ ಮೌಂಟ್ ಅಬುಗೆ ಹೊರಟಿದ್ದೇವು. ಕ್ಯಾಶ್ ತಂದು ರಿಸರ್ವೇಷನ್ ಮಾಡುವಷ್ಟರಲ್ಲಿ ಒಂದು ಗ್ರೂಪ್‌ನಲ್ಲಿ ಬರಬೇಕಿತ್ತು. ಬೇರೆ ಬೇರೆಯಾಗಿ ಕನ್‌ಫರ್ಮ್, ಆರ್‌ಎಸಿ ಬಂದಿದೆ. ಡೆಬಿಟ್ ಕಾರ್ಡ್ ಕೊಟ್ಟಾಗ ಮಾಡಿದ್ದರೆ ಒಂದು ಕಡೆ ಸೀಟುಗಳು ಲಭ್ಯವಾಗುತ್ತಿತ್ತು. ಡೆಬಿಟ್ ಕಾರ್ಡ್ ತೆಗೆದುಕೊಳ್ಳದಿದ್ದ ಮೇಲೆ ಕೌಂಟರ್ ಮುಂದೆ ಬೋರ್ಡ್ ಏಕೆ ಹಾಕಬೇಕು. ಕೌಂಟರ್‌ನಲ್ಲಿ ವರ್ಕ್ ಮಾಡುವವರು ಉಡಾಫೆಯಿಂದ, ಮುಗುಳ್ನಗೆ ಇಲ್ಲದೆ ಕೆಲಸ ನಿರ್ವಹಿಸುತ್ತಾರೆ. ಸಂಬಂಧಪಟ್ಟವರು ಗಮನಹರಿಸಿ ಸಾರ್ವಜನಿಕರಿಗೆ ಒಳಿತಾಗುವ ಕೆಲಸವನ್ನು ರೈಲ್ವೆ ಇಲಾಖೆ ಮಾಡಲಿ.

– ಕೆ. ದೇವರಾಜು, ಹನುಮಂತನಗರ, ಮೈಸೂರು.

ವಿಜಯನಗರದ ಡಾ. ಎಂ.ಎಚ್. ಅಂಬರೀಷ್ ರಸ್ತೆಯಲ್ಲಿ ವೈಜ್ಞಾನಿಕ ರಸ್ತೆ ಡುಬ್ಬ ನಿರ್ಮಿಸಿ

ಮಾನ್ಯರೆ,

ಮೈಸೂರಿನ ವಿಜಯನಗರದ ಮೊದಲನೇ ಹಂತದ ಡಾ. ಎಂ.ಎಚ್. ಅಂಬರೀಷ್ ರಸ್ತೆಯಲ್ಲಿ ಹಂಪ್ಸ್ (ಡುಬ್ಬು)ಗಳು ಅನಿವಾರ್ಯವಾಗಿದೆ. ವಿಜಯನಗರ ಮೊದಲನೇ ಹಂತದಲ್ಲಿ ಬರುವ ಕಾಳಿದಾಸ ರಸ್ತೆಯಿಂದ ರಿಂಗ್ ರೋಡ್ ತನಕ 3.5 ಕಿಲೋ ಮೀಟರ್ ಉದ್ದ ಇರುವ ಡಾ. ಎಂ.ಎಚ್. ಅಂಬರೀಶ್ ರಸ್ತೆಯಲ್ಲಿ ಪ್ರತಿದಿನ ಅಪಘಾತಗಳು ಸಂಭವಿಸುತ್ತಿವೆ. ಈ ರಸ್ತೆಯನ್ನು ತುಂಬಾ ಅಚ್ಚುಕಟ್ಟಾಗಿ ಅಭಿವೃದ್ಧಿ ಪಡಿಸಿರು ವುದರಿಂದ ವಾಹನಗಳ ಸಂಚಾರ ಹೆಚ್ಚಾಗಿ ಸುಮಾರು 100 ಕಿಲೋ ಮೀಟರ್ ವೇಗದಲ್ಲಿ ಸಂಚರಿಸುತ್ತವೆ. ಶಾಸಕರಾದ ಜಿ ಟಿ ದೇವೇಗೌಡರ ಮನೆಯ ಮುಂಭಾಗದಿಂದ ಪ್ರಾರಂಭವಾಗುವ ರಸ್ತೆಯಿಂದ ಅಭಿಷೇಕ್ ವೃತ್ತದವರೆಗೆ ತುಂಬಾ ವೇಗವಾಗಿ ಚಲಿಸುವ ವಾಹನಗಳು, ಮಧ್ಯದಲ್ಲಿ ಬರುವ Union Bank of India ದ ವರೆಗೆ ನೇರವಾಗಿರುವ ರಸ್ತೆ ತಕ್ಷಣವೇ ಬಲಭಾಗಕ್ಕೆ ತಿರುವು ಪಡೆದಿರುವುದರಿಂದ ವಾಹನ ಚಾಲಕರಿಗೆ ರಾತ್ರಿಯ ಹೊತ್ತಿನಲ್ಲಿ ರಸ್ತೆ ಸರಿಯಾಗಿ ಕಾಣಿಸದೇ ಅಪಘಾತಗಳು ಸಂಭವಿಸುತ್ತಿವೆ. ಹಲವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಆದರೆ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ದಿರುವುದು ಭಗವಂತನ ಕೃಪೆ. ವಿಜಯನಗರದ ಮೊದಲನೇ ಹಂತದ ಪಾಲಿಕೆ ಸದಸ್ಯರಾದ ಎಂ ಯು ಸುಬ್ಬಯ್ಯ ಅವರು ಮತ್ತು ಶಾಸಕರಾದ ಎಲ್ ನಾಗೇಂದ್ರ ಅವರು ಆದಷ್ಟು ಬೇಗನೆ ಇತ್ತ ಕಡೆ ಗಮನ ಹರಿಸಿ ಈ ರಸ್ತೆಯಲ್ಲಿ ವೈಜ್ಞಾನಿಕವಾಗಿ ಡುಬ್ಬಗಳನ್ನು ನಿರ್ಮಾಣ ಮಾಡಿಸುವ ಮೂಲಕ ಅಪಘಾತಗಳು ಸಂಭವಿಸದಂತೆ ಕಾರ್ಯ ಪ್ರವೃತ್ತರಾಗಬೇಕು ಎಂದು ನನ್ನ ಮನವಿ.

–ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.

ಕುಸಿಯುತ್ತಿರುವ ಪ್ರಜಾಪ್ರಭುತ್ವದ ಮೌಲ್ಯಗಳು

ಮಾನ್ಯರೆ,

ಪ್ರಜಾಪ್ರಭುತ್ವದ ಮೌಲ್ಯಗಳು ದಿನದಿಂದ ದಿನಕ್ಕೆ ಅರ್ಥವನ್ನೇ ಕಳೆದುಕೊಳ್ಳುತ್ತಿವೆ. ನಗಣ್ಯವಾಗುತ್ತಿವೆ. ನಶಿಸಿ ಹೋಗುತ್ತಿವೆ. ಶಾಸಕರ ನಡೆ, ನುಡಿ, ವರ್ತನೆಗಳನ್ನು ಗಮನಿಸಿದರೆ ಮೈ ಉರಿಯುತ್ತದೆ. ಪಂಚೆ ಮೇಲೆ ಕಟ್ಟಿ ತೋಳೇರಿಸಿಕೊಂಡು ಶಾಸಕರು ವರ್ತಿಸುವುದನ್ನು ನೋಡಿದರೆ ನಿಜವಾಗಿಯೂ ಪ್ರಜಾತಂತ್ರ ವ್ಯವಸ್ಥೆ ಹೇಗಾಗಿದೆ, ಹೇಗಾಗುತ್ತಾ ಬರುತ್ತಾ ಇದೆ ಅಂತ ಹೇಳಿಕೊಳ್ಳುವುದಕ್ಕೂ ನಾಚಿಕೆಯಾಗುತ್ತದೆ.

ಇದೊಂದು ಬೇಸರದ ನುಡಿ ಎಂದು ಹಿರಿಯ ಕವಿ ದೊಡ್ಡರಂಗೇಗೌಡ ಇತ್ತೀಚಿನ ಪತ್ರಿಕಾ ಪ್ರಕಟಣೆ ಹೇಳುತ್ತದೆ. ಪ್ರಜಾಪ್ರಭುತ್ವದ ಮೌಲ್ಯಗಳು ದಿನದಿಂದ ದಿನಕ್ಕೆ ಕುಸಿಯುತಲಿದ್ದು ಮೌಲ್ಯರಹಿತವಾಗುತ್ತಿವೆ. ಇಂತಹ ಹೊಲಸು ವ್ಯವಸ್ಥೆಗಳು, ಆಡಳಿತ ರಂಗದಲ್ಲಿ ವಿಜೃಂಭಿಸುತ್ತಿರುವುದರಿಂದ ಪಾಪ ಶಾಸಕರುಗಳಿಗೆ ವಿಷಯಾ ದಾರಿತ ಚರ್ಚೆಗಳಿಗೆ ಸಮಯಾವಕಾಶವೆಲ್ಲಿದೆ? ಇಂತಹ ಜನಪ್ರತಿನಿಧಿಗಳಿಂದ ರಾಜ್ಯದ ಜನತೆಯ ಅಭಿವೃದ್ಧಿ ಪರ ಕಾರ್ಯ ಸಾಧ್ಯವೇ? ಪ್ರಜಾಪ್ರಭುತ್ವದ ಮೌಲ್ಯಗಳು, ಮುಂದಿನ ಜನಾಂಗಕ್ಕೆ ತನ್ನ ಘಟ್ಟಿತನವನ್ನು ತೋರಿಸಬೇಕು.

ಅಧಿವೇಶನ ನಡೆಯುವಾಗ, ಕ್ಷುಲ್ಲಕ ಕಾರಣ, ವಿಷಯಗಳನ್ನೆತ್ತಿಕೊಂಡು ಆರೋಪ, ಪ್ರತ್ಯಾರೋಪ ಮಾಡಿ ಕಾಲ ಕಳೆದು ಹೋಗುವರು ಈ ಜನಪ್ರತಿನಿಧಿಗಳು. ಯಾವ ಕಾರ್ಯಗಳಿಗೋಸ್ಕರ ಜನತೆ ನಮ್ಮನ್ನು ಆರಿಸಿ ಕಳುಹಿಸಿದ್ದಾರೆಂಬುದು ಅವರಿಗೆ ಗೊತ್ತಿಲ್ಲದಂತಾಗಿದೆ.

ದಿನ ಬೆಳಗಾದರೆ, ಆಡಳಿತ ವ್ಯವಸ್ಥೆ ಪಾಲುದಾರಿ ಸಂಸ್ಥೆಗಳಲ್ಲಿ ಆಡಳಿತ ಕ್ಷೇತ್ರಗಳಲ್ಲಿ ಪರೋಕ್ಷವಾಗಿಯೂ, ಪ್ರತ್ಯಕ್ಷವಾಗಿಯೂ, ಭ್ರಷ್ಟಾಚಾರದ ಹಗರಣದ ಹೂರಣಗಳು ಬೆಳಕಿಗೆ ಬರುತ್ತಿದ್ದರೂ, ಸರ್ಕಾರ ಮೌನವಾಗಿರುವುದು ಏಕೆ? ಎಲ್ಲದಕ್ಕೂ ನಿಧಾನವೇ ಪ್ರಧಾನವೆಂಬಂತೆ ಸರ್ಕಾರ ವರ್ತಿಸಿದರೆ, ಭ್ರಷ್ಟಾಚಾರದ ಅಪರಾಧಿಗಳು ತಪ್ಪಿಸಿಕೊಳ್ಳುವ ಸಂದರ್ಭಗಳೇ ಜಾಸ್ತಿ. ಏನಂತೀರಿ ಓದುಗರೇ?

–ಎ.ಎಸ್. ಗೋಪಾಲಕೃಷ್ಣ, ರಾಮಕೃಷ್ಣನಗರ, ಮೈಸೂರು.

ನಿರೀಕ್ಷೆ–ನಿರಾಶೆ!

ಮಾನ್ಯರೆ,

ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಮುಸ್ಲಿಂ ಪ್ರಾತಿನಿಧ್ಯವಿಲ್ಲ ಎಂಬ ಕಾರಣಕ್ಕಾಗಿ ನಡೆದ ಪ್ರತಿಭಟನೆ, ಪ್ರತಿ ಸಮ್ಮೇಳನಗಳ ಹಿನ್ನೆಲೆಯಲ್ಲಿ ನಾನು ಹೀಗೆ ಆಲೋಚಿಸಿದೆ. ಮುಂದಿನ ಸಮ್ಮೇಳನದಲ್ಲಿ ಹಿರಿಯ ಸಾಹಿತಿ ಸಾ.ರಾ. ಅಬೂಬಕರ್ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಬಹುದು; ಮಾಡಬೇಕು. ಅದರಿಂದ ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆದಂತಾಗುತ್ತದೆ. ಒಂದು, ಮುಸ್ಲಿಮರೊಬ್ಬರು ಅಧ್ಯಕ್ಷರಾಗುತ್ತಾರೆ; ಎರಡು ಮಹಿಳೆಯೊಬ್ಬರು ಬಹು ವರ್ಷಗಳ ಬಳಿಕ ಅಧ್ಯಕ್ಷರಾಗುತ್ತಾರೆ. ನಾನು ಹೀಗೆ ಯೋಚಿಸುತ್ತಿರುವಾಗಲೇ, ಈ ಸುದ್ದಿ ಎರಗಿತು: "ಸಾರಾ ಅಬೂಬಕರ್ ಇನ್ನಿಲ್ಲ" ಮಾಡುವುದೇನು? ಎಲ್ಲ ಅಲ್ಲಾಹು ಇಚ್ಛೆ!


ಮೌಢ್ಯ : "ಸ್ಯಾಂಟ್ರೋ ರವಿ ಬಂಧನ: ನಿಮಿಷಾಂಬಗೆ ಹರಕೆ ತೀರಿಸಿದ ಎಡಿಜಿಪಿ". ಕುವೆಂಪು ಮೌಢ್ಯವನ್ನು ಎರಡು ಬಗೆ ಕಲ್ಪಿಸುತ್ತಾರೆ: ಜ್ಞಾನಪೂರ್ವ ಮೌಢ್ಯ ಮತ್ತು ಜ್ಞಾನೋತ್ತರ ಮೌಢ್ಯ. ಎಜಿಡಿಪಿ ಅವರದು ಜ್ಞಾನೋತ್ತರ ಮೌಢ್ಯವೆ?

ಸುಂದರಿ : ಅಮೆರಿಕದ ಆರ್ಬಾನಿ ಗೇಬ್ರಿಯಲ್ ಭುವನ ಸುಂದರಿಯಾಗಿ ಆಯ್ಕೆಯಂತೆ. ಆಗಲಿ. ಆದರೆ ನಮ್ಮ ನಮ್ಮ ಮನೆಯಾಕೆಯೇನು ಕಡಿಮೆ? ಅವರೂ ಭುವನ ಸುಂದರಿಯರು!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

'ಮೈಸೂರು ಮಿತ್ರ'ನ ಜ. 26ರ ಸಂಚಿಕೆಯ 6ನೇ ಪುಟದಲ್ಲಿ ಪ್ರಕಟವಾಗಿರುವ 'ಹೊಸ ಮನೆಗೆ ಆರ್‌ಆರ್ ನಂಬರ್ ನೀಡಲು 50 ಸಾವಿರ ಲಂಚ ಸ್ವೀಕಾರ, ಚೆಸ್ಕಾಂನ ಇಬ್ಬರು ಇಂಜಿನಿಯರ್ ಗಳು ಲೋಕಾಯುಕ್ತ ಬಲೆಗೆ' ವರದಿಯಲ್ಲಿ ದೂರುದಾರರ ಹೆಸರು ಸೈಯದ್ ಮುಜಾಹಿದ್ದೀನ್ ಎಂದು ಪ್ರಕಟವಾಗಿದ್ದು, ಅದನ್ನು ಸೈಯದ್ ಮುಜಾಹಿದ್ ಎಂದು ಓದಿಕೊಳ್ಳುವುದು. –ಸಂ.



ಸೂರ್ಯ ಜಯಂತಿ — ರಥಸಪ್ತಮಿ

❝ ಸೂರ್ಯನಿಗೆ ಕೃತಜ್ಞತಾ ಪೂರ್ವಕವಾಗಿ ನಿರ್ಮಿಸಿರುವ ಹಲವಾರು ಸೂರ್ಯನ ದೇಗುಲಗಳು ಭಾರತದಾದ್ಯಂತ ಇದ್ದು, ಅವುಗಳಲ್ಲಿ ಕೋನಾರ್ಕ್‌ನಲ್ಲಿರುವ ಸೂರ್ಯ ದೇವಾಲಯ ಜಗತ್ಪ್ರಸಿದ್ಧವಾದುದು. ಅಲ್ಲಿರುವ ರಥದ ಚಕ್ರದಲ್ಲಿ 24 ಅರೆಗಳಿವೆ. ಅದು 24 ಗಂಟೆಯನ್ನು ಪ್ರತಿನಿಧಿಸುತ್ತದೆ. ಇದಲ್ಲದೇ ಗುಜರಾತಿನ ಮೊಡೇರ, ಆಂಧ್ರಪ್ರದೇಶ, ತಮಿಳ್ನಾಡು, ಜಮ್ಮು ಮತ್ತು ಕಾಶ್ಮೀರದ ಮಾರ್ತಾಂಡ್‌ನಲ್ಲಿ ಸೇರಿದಂತೆ ಹಲವೆಡೆ ಸೂರ್ಯನ ದೇವಾಲಯಗಳಿದ್ದು, ರಥಸಪ್ತಮಿಯಂದು ಅತ್ಯಂತ ಶ್ರದ್ಧಾಭಕ್ತಿ ಪೂರ್ವಕವಾಗಿ ಸೂರ್ಯನಿಗೆ ಪೂಜೆ, ರಥೋತ್ಸವಗಳು ನಡೆಯಲ್ಪಡುತ್ತವೆ.

ಪ್ರಕೃತಿ ಹಲವಾರು ವಿಸ್ಮಯಗಳ ಆಗರ. ಅದರಲ್ಲೂ ಋತು ಮಾನಗಳ ಬದಲಾವಣೆಯಂತೂ ಆಯಾ ಕಾಲಕ್ಕನುಗುಣವಾಗಿ ಅನೂಚಾನವಾಗಿ ನಡೆದುಕೊಂಡು ಬಂದಿರುವ ಪ್ರಾಕೃತಿಕ ಚಮತ್ಕಾರವೇ ಆಗಿದೆ. ಈ ನಿಸರ್ಗದ ಬದಲಾವಣೆಗಳಿಗನುಸಾರವಾಗಿ ಮಾನವನ ಅಭ್ಯುದಯಕ್ಕೆ ಪೂರಕವಾಗುವಂತೆ ಹಬ್ಬಗಳನ್ನು ಸಾಂಕೇತಿಕವಾಗಿ ರೂಢಿಗೆ ತಂದಿರುವ ಭಾರತೀಯ ಸಂಸ್ಕೃತಿ ಜಗತ್ತಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದೆ ಎಂದರೆ ತಪ್ಪಾಗಲಾರದು. ಅಂತಹ ಆಚರಣೆಗಳ ಸಾಲಿನಲ್ಲಿ ಬರುವ ವಿಶೇಷ ಹಬ್ಬವೇ ರಥಸಪ್ತಮಿ.

ಸಾಮಾನ್ಯವಾಗಿ ಡಿಸೆಂಬರ್ ತಿಂಗಳ ಚಳಿ ಕಳೆದು ಜನವರಿ ತಿಂಗಳ ಕೊನೆಯ ದಿನಗಳಲ್ಲಿ ಅಂದರೆ ಹಿಂದೂ ಪಂಚಾಂಗದ ಮಾಘಮಾಸದ ಶುಕ್ಲ ಪಕ್ಷದ ಏಳನೇ ದಿನದಂದು ಬರುವ (ಸಪ್ತಮಿ) ಈ ಹಬ್ಬವೇ ರಥ ಸಪ್ತಮಿ. ಇದು ಪ್ರಾಕೃತಿಕ ಬದಲಾವಣೆಯ ಸಾಂಕೇತಿಕ ರೂಪ ವಾಗಿ ಆಚರಿಸಲ್ಪಡುವ ವಿಶಿಷ್ಟ ಹಬ್ಬವೆನಿಸಿದೆ. ರಥ ಸಪ್ತಮಿಯ ಈ ದಿನವನ್ನು ಸೂರ್ಯ ಜಯಂತಿ ಅಥವಾ ಸೂರ್ಯನ ಜನ್ಮದಿನ ಎಂದೂ ಕರೆಯಲಾಗುತ್ತದೆ. ಈ ದಿನದಿಂದ ಸೂರ್ಯನು ತನ್ನ ಏಳು ಕುದುರೆಗಳನ್ನುಳ್ಳ ರಥವನ್ನು (ಏಳು ಕುದುರೆಗಳೆಂದರೆ ಕಾಮನಬಿಲ್ಲಿನಲ್ಲಿ ಉಂಟಾಗುವ ಏಳು ಬಣ್ಣಗಳ ಸಂಕೇತ) ಉತ್ತರ ಗೋಳಾರ್ಧದ ಕಡೆಗೆ ಅಂದರೆ ಈಶಾನ್ಯ ದಿಕ್ಕಿನೆಡೆಗೆ ಸಾಗುತ್ತಾನೆಂಬ ಪ್ರತೀತಿ ಇದೆ. ಇಲ್ಲಿಂದ ಮುಂದೆ ಸೂರ್ಯನ ತಾಪಮಾನ ದಿನೇ ದಿನೇ ಹೆಚ್ಚುತ್ತಾ ಹೋಗುವುದು ಸಹಜವಾಗಿದೆ. ಅಂತೆಯೇ, ಮಾಸಗಳ ರಾಜ ವಸಂತನ ಆಗಮನದ ಮುನ್ಸೂಚನೆಯೂ ಇಲ್ಲಿಂದ ಆರಂಭವಾದರೆ, ಬೆಳೆ ಬೆಳೆವ ರೈತರಿಗೆ ಹೊಸ ವರುಷದ ಶುಭಾರಂಭವಾಗಿಯೂ ರಥ ಸಪ್ತಮಿ ಆಚರಿಸಲ್ಪಡುತ್ತದೆ.

ಸೂರ್ಯಾರಾಧನೆ: ವೇದಗಳ ಕಾಲದಿಂದಲೂ ಸೂರ್ಯನ ಆರಾಧನೆಗೆ ಮಹತ್ವ ನೀಡಲಾಗಿದೆ. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಸೂರ್ಯನನ್ನು ಕಣ್ಣಿಗೆ ಕಾಣುವ ಪ್ರತ್ಯಕ್ಷ ದೈವ ಎಂದೂ ಕೂಡ ಬಣ್ಣಿಸಲಾಗಿದೆ. ಸೂರ್ಯ ಈ ಜಗತ್ತಿನ ಕಣ್ಣು. ಸೂರ್ಯನಿಲ್ಲದೇ ಜಗತ್ತೇ ಇಲ್ಲ. ಜಗತ್ತಿಗೆ ಬೆಳಕನ್ನು ನೀಡಿ ಜಗತ್ತನ್ನು ಸಂರಕ್ಷಿಸುತ್ತಿರುವ ಸೂರ್ಯದೇವನಿಗೆ ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯ. ಅದಕ್ಕಾಗಿಯೇ ಯೋಗಾಭ್ಯಾಸದಲ್ಲಿ "ಸೂರ್ಯ ನಮಸ್ಕಾರ"ವೆಂಬ ಅದ್ಭುತ ಪದ್ಧತಿಯೇ ಬೆಳೆದುಬಂದಿದೆ.

ಸೂರ್ಯ ದೇವಾಲಯಗಳು

ಕೋನಾರ್ಕ್‌ನಲ್ಲಿರುವ ಸೂರ್ಯ ದೇವಾಲಯ: ಸೂರ್ಯನಿಗೆ ಕೃತಜ್ಞತಾ ಪೂರ್ವಕವಾಗಿ ನಿರ್ಮಿಸಿರುವ ಹಲವಾರು ಸೂರ್ಯನ ದೇಗುಲಗಳು ಭಾರತದಾದ್ಯಂತ ಇದ್ದು, ಅವುಗಳಲ್ಲಿ ಕೋನಾರ್ಕ್‌ನಲ್ಲಿರುವ ಸೂರ್ಯ ದೇವಾಲಯ ಜಗತ್ಪ್ರಸಿದ್ಧವಾದುದು. ಅಲ್ಲಿರುವ ರಥದ ಚಕ್ರದಲ್ಲಿ 24 ಅರೆಗಳಿವೆ. ಅದು 24 ಗಂಟೆಯನ್ನು ಪ್ರತಿನಿಧಿಸುತ್ತದೆ. ಇದಲ್ಲದೇ ಗುಜರಾತಿನ ಮೊಡೇರ, ಆಂಧ್ರಪ್ರದೇಶ, ತಮಿಳ್ನಾಡು, ಜಮ್ಮು ಮತ್ತು ಕಾಶ್ಮೀರದ ಮಾರ್ತಾಂಡ್‌ನಲ್ಲಿ ಸೇರಿದಂತೆ ಹಲವೆಡೆ ಸೂರ್ಯನ ದೇವಾಲಯಗಳಿದ್ದು, ರಥಸಪ್ತಮಿಯಂದು ಅತ್ಯಂತ ಶ್ರದ್ಧಾಭಕ್ತಿ ಪೂರ್ವಕ ವಾಗಿ ಸೂರ್ಯನಿಗೆ ಪೂಜೆ, ರಥೋತ್ಸವಗಳು ನಡೆಯಲ್ಪಡುತ್ತವೆ.

ರಥಸಪ್ತಮಿಯ ವಿಶೇಷವೇ ಸೂರ್ಯಾರಾಧನೆ: ರಥಸಪ್ತಮಿಯಂದು ಸೂರ್ಯಾರಾಧನೆ ಮಾಡಲು ಹಲವಾರು ವಿಶಿಷ್ಟ ಆಚರಣೆಗಳು ನಮ್ಮಲ್ಲಿ ರೂಢಿಯಲ್ಲಿವೆ. ಅವುಗಳಲ್ಲಿ ಎಕ್ಕದ ಎಲೆ ಸ್ನಾನ ಕೂಡ ಒಂದು. ಪೂರ್ವಾಭಿಮುಖವಾಗಿ ಕುಳಿತು, ಏಳು ಎಕ್ಕದ ಎಲೆಗಳನ್ನು ತೆಗೆದುಕೊಂಡು ಒಂದು ತಲೆಯ ಮೇಲೆ, ಎರಡು ಭುಜಗಳ ಮೇಲೆ, ಎರಡು ಮೊಣಕಾಲು ಗಳ ಮೇಲೆ ಹಾಗೂ ಎರಡು ಕಾಲುಗಳ ಮೇಲೆ ಇಟ್ಟು ಸ್ನಾನ ಮಾಡುವ ಪದ್ಧತಿ ರೂಢಿಯಲ್ಲಿದೆ. ಆಯುರ್ವೇದದಲ್ಲಿ ಅತ್ಯಂತ ಔಷಧೀಯ ಗುಣವುಳ್ಳ ಅರ್ಕ ಎಂದು ಕರೆಯಲ್ಪಡುವ ಈ ಎಕ್ಕದ ಎಲೆಯ ಸ್ನಾನ ಅರ್ಥ ಪೂರ್ಣವಾಗಿದೆ. ಸಂಸ್ಕೃತದಲ್ಲಿ ಅರ್ಕ ಎಂದರೆ ಮಿಂಚಿನ ಕಿರಣ ಎಂಬ ಅರ್ಥವಿದ್ದು, ಸೂರ್ಯನ ಸಮಾನಾರ್ಥಕ ಪದ ಕೂಡ ಆಗಿದೆ.

ಹಾಗೆಯೇ ರಥಸಪ್ತಮಿಯಂದು ನದಿ ಅಥವಾ ಸಮುದ್ರದಲ್ಲಿ ಸ್ನಾನ ಮಾಡುವುದು, ಸೂರ್ಯನಿಗೆ ಅರ್ಘ್ಯ ನೀಡುವುದು, ಮನೆಗಳಲ್ಲಿ ಆದಿತ್ಯ ಹೃದಯಂ, ಗಾಯತ್ರಿಮಂತ್ರ ಸೂರ್ಯ ಸಹಸ್ರನಾಮ, ಸೂರ್ಯಾಷ್ಟಕಂ ಮುಂತಾದ ಸೂರ್ಯದೇವನಿಗೆ ಸಂಬಂಧಿಸಿದ ಪಾರಾಯಣಗಳನ್ನು ಮಾಡುವ ಸಂಪ್ರದಾಯ ವಿದ್ದರೆ, ದೇವಾಲಯಗಳಲ್ಲಿ ವಿಧ್ಯುಕ್ತ ಪೂಜೆಯೊಂದಿಗೆ ಮೆರ ವಣಿಗೆಗಳು ಕೂಡ ನಡೆಯಲ್ಪಡುತ್ತವೆ. ಅದರಲ್ಲೂ ಮೈಸೂರು, ಮೇಲುಕೋಟೆಗಳಲ್ಲಿ ಸೂರ್ಯನ ಮಂಡಲವನ್ನು ಹೊತ್ತೊಯ್ಯುವ ರಥೋತ್ಸವ ಅತ್ಯಂತ ಜನಪ್ರಿಯವಾಗಿವೆ. ಇನ್ನು ಯೋಗ ನಗರಿಯೆಂದು ಬಿರುದಾಂಕಿತವಾದ ನಮ್ಮ ಮೈಸೂರಿನಲ್ಲಿ ರಥಸಪ್ತಮಿಯಂದು ನಡೆಸುವ ಸೂರ್ಯ ನಮಸ್ಕಾರ ಪದ್ಧತಿ ಜಗತ್ಪ್ರಸಿದ್ಧವಾಗಿದ್ದು, ಸಾವಿರಾರು ಯೋಗಪಟುಗಳು ಇದರಲ್ಲಿ ಪಾಲ್ಗೊಳ್ಳುವುದು ವಿಶೇಷವೆನಿಸಿದೆ.

ಸೂರ್ಯನಮಸ್ಕಾರದ ಮಹತ್ವ

**ಆದಿತ್ಯಸ್ಯ ನಮಸ್ಕಾರಾನ್ ಯೇ ಕುರ್ವಂತಿ ದಿನೇ ದಿನೇ ।
ಆಯುಃ ಪ್ರಜ್ಞಾ ಬಲಂ ವೀರ್ಯಂ ತೇಜಸ್ತೇಷಾಂ ಚ ಜಾಯತೇ ॥**

ಮೇಲಿನ ಶ್ಲೋಕವು ಸೂರ್ಯನಮಸ್ಕಾರದ ಮಹತ್ವವನ್ನು ಮನನೀಯವಾಗಿ ವಿವರಿಸಿದೆ. ಅದರಲ್ಲಿ ಹೇಳಿರುವಂತೆ ಪ್ರತಿ ದಿನ ಸೂರ್ಯ ನಮಸ್ಕಾರ ಮಾಡುವುದರಿಂದ ಆಯುಷ್ಯ, ಪ್ರಜ್ಞೆ, ಬಲ, ವೀರ್ಯ, ತೇಜಸ್ಸು ವೃದ್ಧಿಸುತ್ತದೆ. ಸೂರ್ಯನನ್ನು ಧಾರ್ಮಿಕ ಗ್ರಂಥಗಳಲ್ಲಿ ನಮಸ್ಕಾರ ಪ್ರಿಯ ಎಂದು ಬಣ್ಣಿಸಲಾಗಿದೆ. ಈ ಹಿನ್ನೆಲೆಯಲ್ಲಿಯೇ ಸೂರ್ಯನಮಸ್ಕಾರ ಪದ್ಧತಿ ರೂಢಿಗೆ ಬಂದಿರಬೇಕು. ಸೂರ್ಯನಮಸ್ಕಾರ ಜಗತ್ತಿನ ಜೀವಧಾತೃ ಸೂರ್ಯನಿಗೆ ಕೃತಜ್ಞತಾ ದ್ಯೋತಕವಾಗಿ ಆಚರಿಸಲ್ಪ ಡುವ ವಿಶಿಷ್ಟ ಆಸನ ಭಂಗಿಗಳ ಸಂಯೋಜನೆಯುಳ್ಳ ಪದ್ಧತಿ. ಸಾಮಾನ್ಯ ವಾಗಿ ಯೋಗಾಭ್ಯಾಸಿಗಳು ತಮ್ಮ ಆಸನ, ಪ್ರಾಣಾಯಾಮಗಳನ್ನು ಮಾಡುವ ಮುನ್ನ ಸೂರ್ಯ ನಮಸ್ಕಾರಗಳನ್ನು ಮಾಡುವ ವಾಡಿಕೆಯಿದೆ. ಸೂರ್ಯ ನಮಸ್ಕಾರ ಪದ್ಧತಿ ಇಡೀ ಶರೀರಕ್ಕೆ ವ್ಯಾಯಾಮ ವಾಗುವ ಹಾಗೆ ಅಳವಡಿಸಲಾಗಿರುವ ಅಪರೂಪದ ಪದ್ಧತಿಯಾಗಿದ್ದು, ಇದರಲ್ಲಿ 12 ವಿಶೇಷ ಆಸನಗಳಿದ್ದು, ಪ್ರತಿಯೊಂದು ನಮಸ್ಕಾರ ದಲ್ಲೂ ಸೂರ್ಯನ ಒಂದೊಂದೇ ಮಂತ್ರೋಚ್ಚಾರಣೆ ಮೂಲಕ ಉಸಿರಾಟದ ನಿಖರ ಕ್ರಮದೊಂದಿಗೆ ಪ್ರತೀ ಭಂಗಿಯಲ್ಲೂ ಸೂರ್ಯನನ್ನೇ ಸ್ಮರಿಸುತ್ತ ಆಸನಾಭ್ಯಾಸ ಮಾಡುವ ವಿನ್ಯಾಸಕ್ರಮ ವಿದ್ದು, ಇದರಿಂದ ದೇಹ, ಮನಸ್ಸುಗಳ ಮೇಲೆ ಸಮತೋಲನ ಸಾಧಿಸಬಹುದಲ್ಲದೇ ಸೂರ್ಯನ ಅನುಗ್ರಹವನ್ನು ಕೂಡ ಸಂಪಾದಿಸಬಹುದಾಗಿದೆ.

ಮಲ್ಲಾಡಿಹಳ್ಳಿಯ ಮಹಾಯೋಗಿ, ನೂರಾ ಆರು ವರ್ಷಗಳ ಕಾಲ ಜೀವಿಸಿದ್ದ ಶ್ರೀ ರಾಘವೇಂದ್ರ ಸ್ವಾಮೀಜಿ ಅವರು ಸೂರ್ಯ ನಮಸ್ಕಾರದ ಅತ್ಯಂತ ಕಠಿಣ ವ್ರತಾಚರಣೆಯ ನೈಷ್ಠಿಕ ಸಾಧಕರಾಗಿದ್ದು, ಅವರು ಪ್ರತಿನಿತ್ಯ 108 ಸೂರ್ಯ ನಮಸ್ಕಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿ ಕೊಂಡಿದ್ದು, ಅದರ ಫಲವಾಗಿ ಅತ್ಯಂತ ಪ್ರಖರವಾದ ತೇಜಸ್ಸು, ದೇಹದಾರ್ಢ್ಯತೆ, ಮನೋನಿಗ್ರಹ ಉಳ್ಳವರಾಗಿದ್ದು ಪ್ರತಿಯೊಬ್ಬ ಯೋಗ ಸಾಧಕರಿಗೂ ಮಾದರಿಯಾಗಿದ್ದರು. ಆ ಪರಿಪಾಠವೇ 108 ಸೂರ್ಯ ನಮಸ್ಕಾರಗಳ ವಿಶಿಷ್ಟ ಆಚರಣೆಗೆ ನಾಂದಿಯಾಗಿದ್ದು, ರಥಸಪ್ತಮಿಯಂದು ಪ್ರತಿಯೊಬ್ಬ ಸಾಧಕನೂ 108 ಸೂರ್ಯನ ಮಂತ್ರಗಳೊಂದಿಗೆ ಸೂರ್ಯ ನಮಸ್ಕಾರಗಳ ಮೂಲಕ ಸೂರ್ಯನನ್ನು ಆರಾಧಿಸುವ ಕ್ರಮ ರೂಢಿಗೆ ಬಂತು. ಮೈಸೂರಿನಲ್ಲಿ ಕಳೆದ 22ವರ್ಷಗ ಳಿಂದಲೂ ಸತತವಾಗಿ ರಥಸಪ್ತಮಿಯಂದು 108 ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗುತ್ತಿದ್ದು, ಇದನ್ನು ಪ್ರಪ್ರಥಮ ಬಾರಿಗೆ ಚಾಲ್ತಿಗೆ ತಂದ ಕೀರ್ತಿ ಮೈಸೂರು ಯೋಗ ಒಕ್ಕೂಟದ ಅಂದಿನ ರೂವಾರಿಗಳಾದ ಶ್ರೀಯುತ ಡಾ. ಪಿ.ಎನ್. ಗಣೇಶ್ ಕುಮಾರ್, ಟಿ.ಜಲೇಂದ್ರಕುಮಾರ್, ರಮೇಶ್‌ಕುಮಾರ್ ಮುಂತಾದ ಯೋಗಾಚಾರ್ಯರುಗಳಿಗೆ ಸಲ್ಲುತ್ತದೆ. ಅದು ಇಂದಿನ ವರೆಗೂ ನಡೆದುಕೊಂಡು ಬಂದಿರುವುದು ವಿಶೇಷವೇ ಸರಿ.

ಸೂರ್ಯನಿಗೂ ಆರೋಗ್ಯಕ್ಕೂ ಇರುವ ಸಂಬಂಧ

ಆರೋಗ್ಯಂ ಭಾಸ್ಕರಾದಿಚ್ಛೇತ್ ಎಂಬ ಆಯುರ್ವೇದದ ಈ ಪ್ರಾಚೀನ ಸಂಸ್ಕೃತ ಶ್ಲೋಕವು ಸೂರ್ಯನಿಗೂ ಮತ್ತು ಆರೋಗ್ಯಕ್ಕೂ ಇರುವ ಸಂಬಂಧವನ್ನು ಸಾದರಪಡಿಸುತ್ತದೆ. ವೈಜ್ಞಾನಿಕವಾಗಿ ಹೇಳುವುದಾದರೆ ಸೂರ್ಯನಿಂದ ವಿಟಮಿನ್ ಡಿ ದೊರಕುವುದೆಂದು ಹೇಳಲಾಗುವುದಾದರೂ ಕೇವಲ ಇಷ್ಟಕ್ಕೆ ಸೀಮಿತಗೊಳಿಸದೆ ನಮ್ಮ ಪ್ರಾಚೀನ ವೈದ್ಯ ಪದ್ಧತಿಗಳಲ್ಲಿ "ಸೂರ್ಯ ಚಿಕಿತ್ಸೆ"ಗೆ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಅದರಲ್ಲೂ ಪ್ರಕೃತಿ ಚಿಕಿತ್ಸೆಯಲ್ಲಿ ಬೊಜ್ಜು, ಚರ್ಮರೋಗ, ಕ್ಯಾನ್ಸರ್ ಮುಂತಾದ ಕಾಯಿಲೆಗಳಿಗೆ ಎಳೆ ಬಿಸಿಲಿಗೆ ಮೈಯೊಡ್ಡುವ "ಸೂರ್ಯ ಸ್ನಾನ ಪದ್ಧತಿ" ಅತ್ಯಂತ ಪರಿಣಾಮಕಾರಿ ಚಿಕಿತ್ಸೆ ಎನಿಸಿದೆ. ಹಲವಾರು ನೇತ್ರ ರೋಗಗಳಿಗೆ ಬಾಲ ಸೂರ್ಯನನ್ನು ನೋಡುವ ತ್ರಾಟಕ ಪದ್ಧತಿ ಪರಿಣಾಮಕಾರಿಯಾದರೆ, ಆದಿತ್ಯ ಹೃದಯ ಪಾರಾಯಣದಿಂದ ಹೃದಯದ ಆರೋಗ್ಯವನ್ನು ವರ್ಧಿಸಿಕೊಳ್ಳ ಬಹುದೆಂದು ಹೇಳಲಾಗಿದೆ. ಪ್ರತಿನಿತ್ಯ ಬ್ರಾಹ್ಮಿಮುಹೂರ್ತದಲ್ಲಿ ಏಳುವ, ಉದಯ ಸೂರ್ಯನನ್ನು ನೋಡುತ್ತಾ ಬರುವುದರಿಂದ ಮುಖದ ತೇಜಸ್ಸು ವೃದ್ಧಿಸುವುದೆಂದು ಹಾಗೂ ಸೂರ್ಯನನ್ನು ಕೃತಜ್ಞತಾ ಪೂರ್ವಕವಾಗಿ ನಮಸ್ಕರಿಸುವ ಸರಳ ಪದ್ಧತಿ ಕೂಡ ಆರೋಗ್ಯವರ್ಧನೆಗೆ ಸಹಕಾರಿ ಎಂಬುದು ಯೋಗತಜ್ಞರ ಅಭಿಮತ. ಒಟ್ಟಾರೆ ತನ್ನ ನಿಯಮಿತ ಉದಯಾಸ್ತಮಾನಗಳ ಮೂಲಕ ಮನುಕುಲಕ್ಕೆ ಕ್ರಿಯಾಶೀಲತೆಯ ಸಂದೇಶ ನೀಡಿ, ಜಗತ್ತನ್ನೇ ನಿಯಂತ್ರಿಸುತ್ತ ಇಡೀ ಜೀವ ಸಂಕುಲಕ್ಕೆ ಜೀವ ಜ್ಯೋತಿ ಯಾಗಿರುವ ಸೂರ್ಯನಿಗೆ ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿಯೇ ರೂಢಿಗೆ ಬಂದಿರುವ ರಥ ಸಪ್ತಮಿಯ ಆಚರಣೆ ಅತ್ಯಂತ ಅರ್ಥಪೂರ್ಣವೆನಿಸಿದೆ.




– ಎನ್.ಅನಂತ,
ಯೋಗ ಶಿಕ್ಷಕರು, ಮೈಸೂರು,
(ಮೊ.ನಂ.9743769403)

ವಿಶೇಷ, ವಿಶೇಷರಲ್ಲಿ ಮೇಲ್ಪಂಕ್ತಿಯಾದವರು...



ಎಸ್.ಎಂ.ಕೃಷ್ಣ



ಎಸ್.ಎಲ್.ಭೈರಪ್ಪ



ಸುಧಾಮೂರ್ತಿ

ನಮ್ಮಲ್ಲಿಯ ಮೂವರಿಗೆ ಅತ್ಯುಚ್ಚ ಪದ್ಮ ಪ್ರಶಸ್ತಿ ಲಭಿಸಿವೆ. ಆದರೂ ಕೊಂಕಾಡದೆ ಕೆಲ ಮೇಧಾವಿಗಳಿಗೆ ತಿಂದನ್ನ ಕರಗದು. ಅವು ನಮ್ಮೆಲ್ಲರ ಅಭಿಮಾನ, ಗೌರವವನ್ನು ಹೆಚ್ಚಿಸುವಂಥದು.

ಪದ್ಮ ವಿಭೂಷಣಕ್ಕೆ ಭಾಜನರಾಗಿರುವ ಎಸ್.ಎಂ. ಕೃಷ್ಣರಂತೂ ಘನತೆ ಗೌರವಗಳಿಗೆ ಹೆಸರಾದ ಓರ್ವ ಮುತ್ಸದಿ. ದೀರ್ಘ ಕಾಲದ ಸಕ್ರಿಯ ರಾಜಕಾರಣದಲ್ಲಿದ್ದೂ ಕಳಂಕರಹಿತರಾಗಿ ಉಳಿದವರು. ರಾಜಕಾರಣಿ ಎಂದರೆ ಹೇಗಿರಬೇಕು ಎಂಬುದಕ್ಕೆ ಮೇಲ್ಪಂಕ್ತಿಯಾದವರು. ಅವರ ಸ್ವಚ್ಛ ನಡೆ–ನುಡಿ, ಅಚ್ಚುಕಟ್ಟುತನ, ಭಾಷೆ, ವಿದ್ವತ್ತು, ಡ್ರೆಸ್ ಕೋಡ್ ಯಾವುದನ್ನೇ ತೆಗೆದು ಕೊಳ್ಳಿ, ಮೇಲ್ಪಂಕ್ತಿಯಾಗಿ ನಿಲ್ಲಬಲ್ಲ ಓರ್ವ ಆದರ್ಶ ರಾಜಕಾರಣಿ ಅವರು.

ಮುಖ್ಯಮಂತ್ರಿಯಾಗಿ ಕೋಲಾರದಲ್ಲಿ ಅವರು, ಅಂದಿನ ಬಿಜೆಪಿ ಅಧ್ಯಕ್ಷ ಸದಾನಂದಗೌಡರನ್ನು ಕುರಿತು, ಹಲ್ಲು ಕಿರಿಯುವ ರಾಜಕಾರಣಿ ಎಂದೇನೋ ಪದ ಬಳಸಿದ್ದರು. ಪತ್ರಿಕೆಗಳಲ್ಲಿ ಅದು ದೊಡ್ಡದಾಗಿ ಪ್ರಕಟವಾಯಿತು. ತಕ್ಷಣವೇ ಸದಾನಂದಗೌಡರಿಗೆ ಕರೆ ಮಾಡಿ ಕ್ಷಮೆ ಯಾಚಿಸಿದರು. ಸದಾನಂದರಿಗೋ ಆಶ್ಚರ್ಯ. ಕೊಂಚ ದಿಗ್ಭ್ರಮೆ. ಮುಖ್ಯಮಂತ್ರಿಗಳ ಮಾತಿನಲ್ಲಿ ಕ್ಷಮೆಯಾಚಿಸುವಂತಹ ಪದವೇನೂ ಇದ್ದಂತಿರಲಿಲ್ಲ. ತಾವು ಯಾವಾಗಲೂ ಹಲ್ಲು ಬಿಡುವುದು ಸಾಮಾನ್ಯವಲ್ಲವೇ?

ಅದನ್ನೇ ಸದಾನಂದಗೌಡರು ಹೇಳಿದರೂ ಕೂಡ. ನಿಮ್ಮ ಮಾತುಗಳು ಆಕ್ಷೇಪಾರ್ಹ ಅಂತ ನನಗೇ ಅನ್ನಿಸಿರಲಿಲ್ಲ ಎಂದು ಮುಖ್ಯಮಂತ್ರಿಗಳಿಗೇ ಸಮಾಧಾನ ಹೇಳಿದರು.

ಎಸ್.ಎಂ.ಕೃಷ್ಣರ ಮತ್ತೊಂದು ನೆನಪಾಗುವ ಮಾತು. ಅವರಿಗಿಂತ ಅನುಭವದಲ್ಲಿ ಕಿರಿಯರಾದ, ಜಾತಿಬಲ, ವರ್ಚಸ್ಸಿನಲ್ಲಿ ಏನೇನೂ ಅಲ್ಲದ ವೀರಪ್ಪ ಮೊಯಿಲಿಯವರನ್ನು ಮುಖ್ಯಮಂತ್ರಿಯನ್ನಾಗಿ ಹೈಕಮಾಂಡ್ ನೇಮಿಸಿತು. ಹಿರಿತನವಿದ್ದ ಕೃಷ್ಣ ಏನೂ ಮಾತಾಡಲಿಲ್ಲ. ಲಾಬಿ ಕಟ್ಟಲೂ ಹೋಗಲಿಲ್ಲ.

ಮುಂದಿನ ಚುನಾವಣೆಗೆ ಅವರೇ ಅನಿವಾರ್ಯ ನಾಯಕರಾದರು. ರಾಜ್ಯಾದ್ಯಂತ ಪಾಂಚಜನ್ಯ ಮೊಳಗಿಸಿ ಕಾಂಗ್ರೆಸ್ ಅನ್ನು ಅಭೂತಪೂರ್ವವಾಗಿ ಅಧಿಕಾರಕ್ಕೆ ತಂದರು. ಜನಗಳಿಗೆ ಮಾತ್ರ ಶಕ್ತಿ ಮತ್ತು ಯೋಗ್ಯತೆಗಳಿದ್ದೂ ಅವರಿಗೆ ಬಹು ತಡವಾಗಿ ಮುಖ್ಯಮಂತ್ರಿ ಪಟ್ಟ ಸಿಕ್ಕಿತೆಂಬ ಕೊರಗಿತ್ತು.

ಬನ್ನೂರಿನಲ್ಲಿ ನಡೆದ ಅಭಿನಂದನಾ ಸಮಾವೇಶದಲ್ಲಿ ಅದನ್ನು ತುಂಬ ಜನ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸುತ್ತಾ ಎಸ್.ಎಂ.ಕೃಷ್ಣ ಅಂದರು. **"ರಾಜಕಾರಣದಲ್ಲಿ ಅತ್ಯಂತ ತಾಳ್ಮೆ ಇರಬೇಕು. ಆಕಾಂಕ್ಷಿಗಳು, ಪೈಪೋಟಿಗಳು ಇದ್ದೇ ಇರುತ್ತವೆ. ಗುಣ ಮತ್ತು ಯೋಗ್ಯತೆಯನ್ನು ಕಾಪಾಡಿಕೊಂಡರೆ ಯಾವುದೇ ಹುದ್ದೆಯಾದರೂ ಅರಸಿ ಬರುತ್ತದೆ. ಸಕ್ರಿಯ ರಾಜಕಾರಣಕ್ಕೆ ಬಂದು ನಲವತ್ತನಾಲ್ಕು ವರ್ಷಗಳ ನಂತರ ಮುಖ್ಯಮಂತ್ರಿ ಪಟ್ಟ ತಾನಾಗಿ ಹುಡುಕಿಕೊಂಡು ಬಂದಿದೆ. ಇದು ಯಾರೋ ಕೊಟ್ಟದ್ದಲ್ಲ. ಪಡೆದುಕೊಂಡದ್ದು...**

* * *

ಭೈರಪ್ಪನವರು ಏನೂ ಮಾತಾಡದಿದ್ದರೂ ಸುಮ್ಮನೇ ಉರಿದುಕೊಳ್ಳುವವರಿಗೆ ಬರವಿಲ್ಲ. ಅವರ ಒಂದೇ ಒಂದೂ ಪುಸ್ತಕ ಓದಿಲ್ಲವೆಂದು ಹೆಮ್ಮೆಯಿಂದ ಹೇಳುತ್ತಾ ಟೀಕಿಸುವ ಪೊಳ್ಳುಗಳಿದ್ದಾರೆ.

ಅವರ ವಿಚಾರಗಳನ್ನು ಕುರಿತು ಇರುವ ಏನೇ ಭಿನ್ನಾಭಿಪ್ರಾಯಗಳು ಒತ್ತಟ್ಟಿಗಿರಲಿ. ಫ್ರೆಂಚ್ ಕ್ರಾಂತಿಯನ್ನು ಬಿಟ್ಟರೆ, ಯಾರ ಕಾದಂಬರಿಗಳಿಗೂ ಜನ 'ಸ್ಪಂದಿಸಿ' ಬದಲಾದದ್ದು ಬೇರೆಲ್ಲಿಯೂ ನಡೆದಿಲ್ಲವೆನಿಸುತ್ತೆ ನೀವು ಏನಾದರೂ ಬರೆದುಕೊಳ್ಳಿ, ಜನತೆಯ ಬದುಕಿನ ಕ್ರಮವನ್ನು ಪೂರ್ಣವಾಗಿ ಬದಲಿಸಲಾರಿರಿ. ಇದನ್ನು ಎಲ್ಲರ ಕೃತಿಗಳಿಗೂ ಹೇಳಬಹುದು. ಆದ್ದರಿಂದಲೇ ಯಾರೊಬ್ಬರ ಕೃತಿಯನ್ನೂ ಕಲಾತ್ಮಕ ಹೌದೇ ಅಲ್ಲವೇ ಅಂತ ಹೇಳಬಹುದೇ ಹೊರತು ಜೀವಪರ ಅಥವಾ ಜೀವವಿರೋಧಿ ಅಂತ ಹಣೆಪಟ್ಟಿ ಕಟ್ಟಲಾಗದು.

ಒಂದು ವಸ್ತುವನ್ನು ಲೇಖಕ ಹೇಗೆ ನಿರ್ವಹಿಸಿದ್ದಾನೆ. ಅದೆಷ್ಟರ ಮಟ್ಟಿಗೆ ಕಲಾತ್ಮಕಗೊಳಿಸಿದ್ದಾರೆ ಎಂಬುದನ್ನು ನೋಡುವುದು ಮುಖ್ಯ. (ಈ ಲೆಫ್ಟ್ರೈಟುಗಳ 'ಇಸಂಗಳು ಎಲ್ಲಿಗೂ ಗಿಟ್ಟುವುದಿಲ್ಲ. ಯಾವುದೇ ಇಸಂ ತೆಗೆದುಕೊಳ್ಳಿ. ಇಡೀ ಸಮಾಜಕ್ಕೆ ಅನ್ವಯಿಸಲಾಗುತ್ತದೆಯೇ' ಹೆಚ್ಚೆಂದರೆ ಒಂದು ಸಮುದಾಯ ಅಥವಾ ಗುಂಪಿಗೆ ಅನ್ವಯಿಸಬಹುದಷ್ಟೇ). ಭೈರಪ್ಪನವರ ಕೃತಿಗಳಲ್ಲಿ ಈ ಕಲಾಪಾಕದ ಶ್ರದ್ಧೆ ಎದ್ದುಕಾಣುತ್ತದೆ. ಕೃತಿಯನ್ನು ಕಡೆಯುವಲ್ಲಿ ತಪಸ್ಸು ಕಾಣುತ್ತದೆ.

ನಮ್ಮ ಅನೇಕ ಅನೂಹ್ಯ ಭಾವನೆಗಳಿಗೂ ಭೈರಪ್ಪನವರು ಶಬ್ದರೂಪ ನೀಡುತ್ತಾರೆ. ಅವರ ವಿಚಾರಗಳನ್ನು ನೀವು ಒಪ್ಪುತ್ತೀರೋ ಬಿಡುತ್ತೀರೋ. ಆದರೆ ಬದುಕಿನ ಚಿತ್ರಣದಲ್ಲಿ ಅವರು ನಾನ್ಸೆನ್ಸ್ ಬರೆಯಲಾರರು. ಅಲ್ಲಿರುವ ಅಧ್ಯಯನಶೀಲತೆಯನ್ನು ಅವರ ವಿರೋಧಿಗಳೂ ಕೂಡ ನಿರಾಕರಿಸಲಾರರು.

ಅದೇ ಶ್ರೀ ಭೈರಪ್ಪನವರ ಬರವಣಿಗೆಯ ಸಾಫಲ್ಯತೆ. ಇನ್ನು ಅವರ ವೈಯಕ್ತಿಕ ಬದುಕು. ಅದು ಅನುಕರಣೀಯವಾದದ್ದು. ಸ್ವಚ್ಛವಾದದ್ದು ಮತ್ತು ಉನ್ನತವಾದದ್ದು. ಲೇಖಕ ಭೈರಪ್ಪನವರನ್ನು ಕುರಿತು ತಕರಾರು ತೆಗೆಯಬಹುದು. ಆದರೆ ಉನ್ನತ ಮೌಲ್ಯದ ಖಣಿಯಾಗಿ ಅವರ ವ್ಯಕ್ತಿತ್ವವನ್ನು ಕಡೆಗಣಿಸಲಾಗದು.

ಅವರಿಗೆ ತಡವಾಗಿ ಪದ್ಮಶ್ರೀ ಪ್ರಶಸ್ತಿ ಬಂದಾಗ ಹೇಳಿದ ಮಾತು; **"ಈ ಪ್ರಶಸ್ತಿ ತಡವಾಗಿ ಬಂದಿದ್ದಕ್ಕೆ ಬೇಸರವಿಲ್ಲ 5.8 ಇಂಚು ಉದ್ದವಿರುವ ನಾನು ಇದರಿಂದೇನು 5.9 ಇಂಚು ಉದ್ದವೇನು ಆಗುವುದಿಲ್ಲ."**

ಇನ್ನು ಅವರ ವೈಯಕ್ತಿಕ ಬದುಕು. ಅವರೇ ಒಮ್ಮೆ ಹೇಳಿದ ನೆನಪು. 'ನನ್ನ ಬರಹಕ್ಕಿಂತ ನನ್ನ ಜೀವನ ಇತರರಿಗೆ ಆದರ್ಶವಾದರೆ ಸಾಕು' ಎಂಬರ್ಥದಲ್ಲಿ ಹೇಳಿದ್ದರು. ಈಗಿನ ಎಷ್ಟು ಮಂದಿ ಲೇಖಕರಿಗೆ ಈ ಮಾತು ಹೇಳುವ ಧೈರ್ಯವಿದೆ.

* * *

ಶ್ರೀಮತಿ ಸುಧಾಮೂರ್ತಿಯವರಿಗೆ ಸಿಕ್ಕ ಪ್ರಶಸ್ತಿಗೆ ಅವರು ಸರ್ವತ್ರ ಭಾಜನರು. ಸಮಾಜಕ್ಕೆ ಉಪಯುಕ್ತವಾಗುವ ಯಾವುದೇ ಯೋಜನೆಗೂ ಅವರ ಕೊಡುಗೈ ದಾನ ಉದಾರವಾಗಿ ಹರಿದಿದೆ. ಅದರಲ್ಲೂ ಬಹುತೇಕ ದಾನಗಳು ಕರ್ನಾಟಕಕ್ಕೇ ಸಂದಿವೆ. ಅವರ ವೈಯಕ್ತಿಕ ನಡೆನುಡಿಯ ಸರಳತೆ, ಸ್ವಚ್ಛತೆ ಯಾವತ್ತಿಗೂ ಅನುಕರಣೀಯ.

ಆದರೆ ಅವರಲ್ಲೂ ಕುಂದನ್ನು ಹುಡುಕುವ, ಕೆದಕುವ ಮೇಧಾವಿಗಳಿಗೆ ಕೊರತೆಯಿಲ್ಲ. ಆ ದಾನಗಳನ್ನೇನು ಅವರ ಸ್ವಂತದ ದುಡ್ಡಿಂದ ಕೊಟ್ಟಿಲ್ಲ. ಇನ್ಫೋಸಿಸ್ ಸಂಸ್ಥೆ ತನ್ನ ಲಾಭದಲ್ಲಿ ಎರಡು ಪರ್ಸೆಂಟ್ ದಾನ ಮಾಡಲೇಬೇಕು. ಹಾಗೆ ಮಾಡಿದರೆ ಅವರಿಗೆ ನಾನಾ ಅನುಕೂಲತೆಗಳು ಸಿಕ್ಕುತ್ತವೆ. ಸುಧಾ ಅವರು ಅದೆಲ್ಲವೂ ತಮ್ಮ ಸ್ವಂತ ದುಡ್ಡೆಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ ಇತ್ಯಾದಿ ಟೀಕೆಗಳು. ಕಳಪೆ ಕೃತಿಗಳನ್ನು ಬರೆದಿರುವ ಅವರು ಸಾಹಿತಿಯೇ ಅಲ್ಲ ಎಂಬ ಪಿಸು ನುಡಿಗಳು ಬೇರೆ. ಅಸೂಯೆ ಹೊಟ್ಟೆಕಿಚ್ಚಿನಿಂದ ಉರಿಯುವ ನಮ್ಮ ಮೇಧಾವಿ ಸಂಕುಲಕ್ಕೆ ಮಾತ್ರ ಈ ಮೂವರಿಗೂ ಸಿಕ್ಕ ಪುರಸ್ಕಾರದ ಬಗ್ಗೆ ಸಂಕಟ ಪಡ್ತಿರಲಿ... ಪಡ್ತಿರಲಿ... ಅವರ ಕಿಚ್ಚು ಆರದಿರಲಿ. ಅಂತಿಮವಾಗಿ ಯಾರನ್ನು ಸುಡಬೇಕೆಂಬುದು ಕಿಚ್ಚಿಗೇ ಗೊತ್ತಿದೆ.

–ಜೇಬರ್ ಮೈಸೂರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಶನಿವಾರ 28 ಜನವರಿ 2023

ಮೈಸೂರಲ್ಲಿ ಪ್ರಜಾಧ್ವನಿ ಯಾತ್ರೆ ಸಮಾವೇಶ: ರಾಜ್ಯದ ಆಲಿಬಾಬ 40 ಕಳ್ಳರ ಸರ್ಕಾರ ಕಿತ್ತಾಕಿ

ಕಾಂಗ್ರೆಸ್ ಸರ್ಕಾರ ತಂದರೆ ಮನೆ ಬಾಗಿಲಿಗೆ ಹತ್ತಾರು ಯೋಜನೆ

● ವಿಪಕ್ಷ ನಾಯಕ ಸಿದ್ದರಾಮಯ್ಯ ಭರವಸೆ ● ಕುಮಾರಸ್ವಾಮಿ ನಂಬಬೇಡಿ; ನಾವಂತೂ ಅವರನ್ನು ಮತ್ತೆ ಸೇರಿಸಲ್ಲ



ಮೈಸೂರು, ಜ.27(ಎಸ್‌ಬಿಡಿ)– ರಾಜ್ಯದಲ್ಲಿರುವ ಆಲಿಬಾಬ ಮತ್ತು ನಲವತ್ತು ಕಳ್ಳರ ಸರ್ಕಾರವನ್ನು ಕಿತ್ತೊಗೆದು ಕಾಂಗ್ರೆಸ್ ಸರ್ಕಾರ ರಚನೆಗೆ ಆಶೀರ್ವದಿಸಿ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಮನವಿ ಮಾಡಿದರು.

ಕಾಂಗ್ರೆಸ್‌ನ 'ಪ್ರಜಾಧ್ವನಿ ಯಾತ್ರೆ' ನಿನ್ನೆ (ಜ.26) ಮೈಸೂರಿಗೆ ಆಗಮಿಸಿದ್ದ ವೇಳೆ ಜೆ.ಕೆ.ಮೈದಾನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಲಿಬಾಬ ಮತ್ತು 40 ಕಳ್ಳರು ಎನ್ನುವಂತಿರುವ ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ಮತ್ತೆ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತಂದರೆ ಬಿಜೆಪಿ ನಿಲ್ಲಿಸಿರುವ ಎಲ್ಲಾ ಯೋಜನೆಗಳನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸುತ್ತೇವೆ. ಕಾರ್ಯಕರ್ತರ ರಣೋತ್ಸಾಹ ನೋಡಿದರೆ ಪೂರ್ವದಲ್ಲಿ ಸೂರ್ಯ ಉದಯಿಸುವುದು ಎಷ್ಟು ಸತ್ಯವೋ ನಾವು ಅಧಿಕಾರಕ್ಕೆ ಬರುವುದು ಅಷ್ಟೇ ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿ ಮನೆಗೆ ಮಾಸಿಕ 200 ಯೂನಿಟ್ ಉಚಿತ ವಿದ್ಯುತ್, ಮನೆಯ ಯಜಮಾನಿಗೆ 2 ಸಾವಿರ ರೂ. ಸಹಾಯ ಧನ, ತಲಾ 10 ಕೆಜಿ ಉಚಿತ ಅಕ್ಕಿ, ಶಾದಿ ಭಾಗ್ಯ, ಶೂ ಭಾಗ್ಯ ಮುಂತಾದ ಅನೇಕ ಯೋಜನೆಗಳನ್ನು ನೀಡುತ್ತೇವೆ. ಆದ್ದರಿಂದ ಮತದಾರ ಬಂಧುಗಳು ಯಾವುದೇ ಸಿದ್ಧಾಂತ ಇಲ್ಲದ ಜೆಡಿಎಸ್ ಹಾಗೂ ಭ್ರಷ್ಟತೆಯಿಂದ ಕೂಡಿದ ಬಿಜೆಪಿ ಬೆಂಬಲಿಸುವ ಬದಲು ನಮಗೆ ಮತ ಹಾಕಿ. ಹೊಟೇಲ್‌ಗಳಲ್ಲಿ ಊಟ, ತಿಂಡಿಗೆ ದರಪಟ್ಟಿ ಹಾಕಿದಂತೆ, ರಾಜ್ಯದ ಬಿಜೆಪಿ ಸರ್ಕಾರ ಹುದ್ದೆಗಳಿಗೆ ಮತ್ತು ವರ್ಗಾವಣೆಗೆ ದರ ನಿಗದಿಪಡಿಸಿದೆ. ನಿಮಗೆ ಕೆಲಸ ಮಾಡುವ ಸರ್ಕಾರ ಬೇಕೋ, ಬೇಡವೋ ನಿರ್ಧರಿಸಿ. ಒಂದು ವೇಳೆ ನಾವು ಕೊಟ್ಟ ಭರವಸೆ ಈಡೇರಿಸದಿದ್ದರೆ ಸನ್ಯಾಸಾಶ್ರಮ ಪಡೆಯುವುದಾಗಿ ಪುನರುಚ್ಚರಿಸಿದರು.

ಹೋಟೆಲ್‌ನಲ್ಲೇ ಕಾಲ ಕಳೆದ: ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಉದ್ದೇಶದಿಂದ 35 ಶಾಸಕರಿದ್ದ ಜೆಡಿಎಸ್‌ನ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದೆವು. ಆದರೆ ಅವರು ಶಾಸಕರು, ಸಚಿವರು, ನಮ್ಮ ಕಾಂಗ್ರೆಸ್ ಮುಖಂಡರು ಹಾಗೂ ಸಮನ್ವಯ ಸಮಿತಿ ಅಧ್ಯಕ್ಷನಾಗಿದ್ದ ನನ್ನನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಅಧಿಕಾರದಲ್ಲಿ ಇದ್ದಷ್ಟು ದಿನ ಹೊಟೇಲ್‌ನಲ್ಲಿಯೇ ಕಾಲ ಕಳೆದರು. ಈಗ ನೋಡಿದರೆ ಕಾಂಗ್ರೆಸ್ ಶಾಸಕರನ್ನು ಸಿದ್ದರಾಮಯ್ಯ ಅವರೇ ಕಳುಹಿಸಿದ್ದಾಗಿ ಗೂಬೆ ಕೂರಿಸುವ ಯತ್ನ ನಡೆಸಿದ್ದಾರೆ. ಹಾಗಾದರೆ ಜೆಡಿಎಸ್‌ನ ನಾಲ್ವರು ಶಾಸಕರನ್ನು ಕುಮಾರಸ್ವಾಮಿ ಕಳುಹಿಸಿದರೆ? ನಮ್ಮ ಮೇಲೆ ಗೂಬೆ ಕೂರಿಸಲು ಇವರಿಗೆ ಮಾನ, ಮರ್ಯಾದೆ, ನಾಚಿಕೆ, ಹೇಸಿಗೆ ಆಗುವುದಿಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮತ್ತೆ ಸೇರಿಸಲ್ಲ: ಸರ್ಕಾರ ಮಾಡಪ್ಪ ಎಂದು ಅಧಿಕಾರ ಕೊಟ್ಟರೆ ಅಧಿಕಾರ ಕಳೆದುಕೊಂಡ. ಈಗ ಪಂಚರತ್ನ ಯಾತ್ರೆ ಮಾಡುತ್ತಿದ್ದಾರೆ. ಅಧಿಕಾರದಲ್ಲಿ ಇದ್ದಾಗ ಕುಮಾರಸ್ವಾಮಿಗೆ ಪಂಚರತ್ನ ಯಾತ್ರೆ ನೆನಪಾಗಲಿಲ್ಲವೇ? ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕುಮಾರಸ್ವಾಮಿಯೇ ಕಾರಣ. ಕೋಮುವಾದಿಗಳ ಜತೆ ಸೇರಿ ಅಧಿಕಾರ ನಡೆಸಿದ ಅವರು ತಾವು ಜಾತ್ಯಾತೀತರು ಎಂದು ಹೇಳಿಕೊಳ್ಳುತ್ತಾರೆ. ಅದು ಹೇಗೆ ಸಾಧ್ಯ? ಆದ್ದರಿಂದ ಅವರನ್ನ ನಂಬಬೇಡಿ. ನಾವಂತು ಅವರನ್ನು ಮತ್ತೆ ಸೇರಿಸುವುದಿಲ್ಲ. ನಮ್ಮ ಪಕ್ಷದ ಹೈಕಮಾಂಡ್‌ಗೆ ಜೆಡಿಎಸ್ ಅಪನಂಬಿಕೆಯ ಪಕ್ಷ ಹೊಂದಾಣಿಕೆ ಬೇಡ ಎಂದು ಕಳೆದ ಬಾರಿಯೇ ಹೇಳಿದ್ದೆ ಆದರೆ ನಿರ್ಲಕ್ಷ್ಯಿಸಿದ ಪರಿಣಾಮ ಜನರು ತೊಂದರೆ ಅನುಭವಿಸುವಂತಾಯಿತು. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ 20–22 ಸ್ಥಾನ ಗೆದ್ದರೆ ಹೆಚ್ಚು ಎಂದು ವ್ಯಂಗ್ಯವಾಡಿದರು.

15 ಸ್ಥಾನಗಳಲ್ಲೂ ಗೆಲುವು: ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ 15ರಲ್ಲಿ 15 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ. ನಮ್ಮ ಮೊದಲ ಅವಧಿಯಲ್ಲಿ 12 ಸ್ಥಾನ ಗೆದ್ದಿದ್ದೆವು. ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರ, ಜನವಿರೋಧಿ ಕ್ರಮಗಳಿಂದ ಜನ ಬೇಸತ್ತಿದ್ದಾರೆ. ಈ ಸರ್ಕಾರ ಎಷ್ಟು ಬೇಗ ತೊಲಗಿದರೂ ಅಷ್ಟೂ ಒಳ್ಳೆಯದಾಗುತ್ತೆ ಎಂದುಕೊಳ್ಳುತ್ತಿದ್ದಾರೆ. ಬಿಜೆಪಿಗೆ ಜನರ ಆಶೀರ್ವಾದ ಇರಲಿಲ್ಲ. ಹೆಚ್ಚು ಮತ ನಮಗೆ ಬಂದಿದ್ದವು. ಆದರೆ ಬಿಜೆಪಿ ಮುಖಂಡರು ಆಪರೇಷನ್ ಕಮಲದ ಮೂಲಕ ಹಿಂಬಾಗಿಲ ಮೂಲಕ ಅಧಿಕಾರಕ್ಕೆ ಬಂದರು ಎಂದು ಹೇಳಿದರು.

ಕಾಂಗ್ರೆಸ್ ಕೊಡುಗೆ ಅಪಾರ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಮರಳು ಗಾಡಿನಂತೆ ಇದ್ದ ದೇಶವನ್ನು ಸಮೃದ್ಧಗೊಳಿಸಿದ್ದು ಕಾಂಗ್ರೆಸ್ ಸರ್ಕಾರ. ಭವ್ಯ ಭಾರತದ ನಿರ್ಮಾಣಕ್ಕೆ ಕಾಂಗ್ರೆಸ್ ಕೊಡುಗೆ ಅಪಾರವಾಗಿದೆ. ಕರ್ನಾಟಕದ ಪ್ರಗತಿಗೂ ಕಾಂಗ್ರೆಸ್ ಕಾರಣ. ದೀರ್ಘ ಕಾಲ ಮುಖ್ಯಮಂತ್ರಿ ಆಗಿದ್ದ ಡಿ.ದೇವರಾಜ ಅರಸು ಅವರು ಹಾವನೂರು ವರದಿ, ಉಳುವವನೇ ಭೂಮಿಯ ಒಡೆಯ ಮುಂತಾದ ಕಾರ್ಯಕ್ರಮ ನೀಡಿದರು. ಸಿದ್ದರಾಮಯ್ಯನವರೂ ರಾಜ್ಯದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕಣ್ಣ ಮುಂದೆ ಬಿಜೆಪಿಯ ವೈಫಲ್ಯದ ಸರಮಾಲೆ ಇದೆ ಈಗ ಕಾಂಗ್ರೆಸ್‌ಗೆ ಪೂರಕ ವಾತಾವರಣ ಇದೆ. ಚುನಾವಣೆ ಬಂದಾಗ ಮಾತ್ರ ಜನ ಸಂಕಲ್ಪ ಯಾತ್ರೆ ನಡೆಸುವ ಬಿಜೆಪಿ ಅಧಿಕಾರಕ್ಕೆ ಬಂದರೆ ಧನ ಸಂಕಲ್ಪ ಯಾತ್ರೆ ಮಾಡುತ್ತಾರೆ. ಹಾಗಾಗಿ ನಾವು ನಮ್ಮ ಸರ್ಕಾರದ ಅವಧಿಯಲ್ಲಿನ ಕಾರ್ಯಕ್ರಮವನ್ನು ಮನೆ ಮನೆಗೆ ತಲುಪಿಸಬೇಕು ಎಂದು ನುಡಿದರು.

ಉತ್ಸಾಹ ಕ್ಷೀಣಿಸಬಾರದು: ಶಾಸಕ ತನ್ವೀರ್ ಸೇಠ್ ಮಾತನಾಡಿ, ಕಾಂಗ್ರೆಸ್ ಕಾರ್ಯಕರ್ತರಲ್ಲಿರುವ ರಣೋತ್ಸಾಹ ಮತ ಚಲಾಯಿಸುವವರೆಗೂ ಹೀಗೆಯೇ ಇರಬೇಕು. ಅಲ್ಪಸಂಖ್ಯಾತರ ಅಭಿವೃದ್ಧಿಗಿದ್ದ 456 ಕೋಟಿ ರೂ. ಅನುದಾನವನ್ನು ಸಿದ್ದ ರಾಮಯ್ಯ ಅವರು 3 ಸಾವಿರ ಕೋಟಿಗೆ ಹೆಚ್ಚಿಸಿದರು. ಆದರೆ ಈ ಬಿಜೆಪಿ ಸರ್ಕಾರದ ಯಾವುದೇ ಯೋಜನೆಯೂ ನೇರವಾಗಿ ಜನರಿಗೆ ಮುಟ್ಟುತ್ತಿಲ್ಲ. ಯುವಸಮುದಾಯ ಉದ್ಯೋಗಕ್ಕಾಗಿ ಕೈ ಚಾಚುವ ಪರಿಸ್ಥಿತಿ ಬಂದಿದೆ. ಸರ್ಕಾರಿ ಹುದ್ದೆಗಳ ಮಾರಾಟ ಆಗುತ್ತಿದೆ. ಇಂತಹ ಸರ್ಕಾರ ಬೇಕಾ ಎಂದು ಜನರೇ ಗಂಭೀರವಾಗಿ ಚಿಂತಿಸುತ್ತಿದ್ದು, ಬದಲಾವಣೆಗೆ ನಿರ್ಧರಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮೈಸೂರು ಉಸ್ತುವಾರಿ ರೋಸಿ ಜಾನ್, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಎಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಯುವ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ನಳಪಾಡ್, ಮಾಜಿ ಶಾಸಕರಾದ ಕೆ.ವೆಂಕಟೇಶ್, ವಾಸು, ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್, ಮಾಜಿ ಸಂಸದ ಶಿವಣ್ಣ, ಕೆಪಿಸಿಸಿ ಎಸ್ಸಿ ವಿಭಾಗದ ಅಧ್ಯಕ್ಷ ಧರ್ಮಸೇನ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಪಂ ಮಾಜಿ ಸದಸ್ಯ ಡಿ.ರವಿಶಂಕರ್, ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು ಪಾಕ್ ಹಾರಕ್ಕೆ ಕೊರಳೊಡ್ಡಲು ಸಿದ್ದರಾಮಯ್ಯ ನಕಾರ: ಕಿತ್ತುತಿಂದ ಕಾರ್ಯಕರ್ತರು

ಮೈಸೂರು, ಜ.27(ಎಸ್‌ಬಿಡಿ)– 'ಪ್ರಜಾಧ್ವನಿ' ಯಾತ್ರೆ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸ್ವಾಗತಿಸಲು 'ಮೈಸೂರು ಪಾಕ್' ನಿಂದ ಬೃಹತ್ ಹಾರ ಸಿದ್ಧಪಡಿಸಲಾಗಿತ್ತು. ಆದರೆ ತಿನಿಸಿನಿಂದ ಮಾಡಿದ್ದ ಹಾರಕ್ಕೆ ಕೊರಳೊಡ್ಡಲು ನಯವಾಗಿಯೇ ನಿರಾಕರಿಸಿದರು. ಹೀಗೆಲ್ಲಾ ತಿನ್ನುವ ವಸ್ತುಗಳನ್ನು ನಷ್ಟ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಆ ಹಾರ ಸ್ವಲ್ಪ ಕೈಗೆಟುಕುತ್ತಿದ್ದಂತೆ ನೆರೆದಿದ್ದ ಸಾವಿರಾರು ಕಾರ್ಯಕರ್ತರು ಅದನ್ನು ಕಿತ್ತುಕೊಂಡರು. ಈ ವೇಳೆ ನೂಕುನುಗ್ಗಲು ಉಂಟಾಯಿತು.



ನೆಚ್ಚಿನ ರಾಜಕೀಯ ನಾಯಕರಿಗೆ ತರಹೇವಾರಿ ಹಾರ ಹಾಕಿ ಸ್ವಾಗತಿಸುವ ಟ್ರೆಂಡ್ ಇತ್ತೀಚೆಗೆ ಹೆಚ್ಚಾಗಿದೆ. ಮಂಡ್ಯದಲ್ಲಿ ಜೆಡಿಎಸ್ 'ಪಂಚರತ್ನ' ರಥಯಾತ್ರೆ ವೇಳೆ ಮಾಜಿ ಸಿಎಂ ಕುಮಾರಸ್ವಾಮಿ ವಿಭಿನ್ನವಾದ ಹಾರಗಳನ್ನು ಹಾಕಿದ್ದು ದಾಖಲೆಯಾಗಿದೆ. ಹಾಗೆಯೇ ಸಿದ್ದರಾಮಯ್ಯನವರ ಅಭಿಮಾನಿ ಕಾಳಿಸಿದ್ದನಹುಂಡಿಯ ಜೈಸ್ವಾಮಿ ಅದರಂತೆ 750 ಕೆಜಿ 'ಮೈಸೂರು ಪಾಕ್' ಹಾಗೂ 250 ಕೆಜಿ ಹೂವಿನಿಂದ ಬೃಹತ್ ಹಾರ ಮಾಡಿಸಿದ್ದರು. ಇದಕ್ಕಾಗಿ 2.50 ಲಕ್ಷ ರೂ. ವ್ಯಯಿಸಿದ್ದರು.

ಟಾಂಗಾ ಮೆರವಣಿಗೆ: ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಜೆ.ಕೆ.ಮೈದಾನದ ಮುಖ್ಯದ್ವಾರದಿಂದ ವೇದಿಕೆವರೆಗೆ ಟಾಂಗಾದಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು. ಕಾರ್ಯಕ್ರಮ ವೇಳೆ ವಿವಿಧ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳು ಹಾಗೂ ಹಲವು ನಾಯಕರ ಭಾವಚಿತ್ರವಿರುವ ಪ್ಲೇಕಾರ್ಡ್ ಅನ್ನು ಅವರವರ ಅಭಿಮಾನಿಗಳು ಪ್ರದರ್ಶಿಸುತ್ತಿದ್ದರು. ಇದನ್ನು ಗಮನಿಸಿದ ಸಿದ್ದರಾಮಯ್ಯ ಸಿಟ್ಟಾಗಿ ಯಾರೂ ಪ್ಲೇ ಕಾರ್ಡ್ ಪ್ರದರ್ಶಿಸಬಾರದು ಎಂದು ತಾಕೀತು ಮಾಡಿದರು. ಈ ರಾಜಕೀಯ ರಣರಂಗಕ್ಕೆ ನಮ್ಮ ನಾಯಕರು ರಣಕಹಳೆ ಮೊಳಗಿಸಲಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಪ್ರಕಟಿಸಿದರು. ಆದರೆ ಯಾರಿಗೂ ಕಹಳೆ ಊದಲು ಸಾಧ್ಯವಾಗಲಿಲ್ಲ. ಅನಿವಾರ್ಯವಾಗಿ ಕ್ಯಾಸೆಟ್ ಮೂಲಕ ರೆಕಾರ್ಡಿಂಗ್ ಕಹಳೆ ಮೊಳಗಿಸಬೇಕಾಯಿತು.

ದೇಶದಲ್ಲೇ ಈಗ ಕರ್ನಾಟಕ ಭ್ರಷ್ಟಾಚಾರದ ರಾಜಧಾನಿ

● ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ ● ನಾವು ಅಧಿಕಾರಕ್ಕೆ ಬಂದರೆ ನಿಮ್ಮ ಮನೆಗೆ ಗೃಹಲಕ್ಷ್ಮಿ, ಗೃಹಜ್ಯೋತಿ ಬರುತ್ತಾರೆ

ಮೈಸೂರು, ಜ.27(ಎಸ್‌ಬಿಡಿ)– ಬಿಜೆಪಿ ಸರ್ಕಾರ ಕರ್ನಾಟಕವನ್ನು ಭ್ರಷ್ಟಾಚಾರದ ರಾಜಧಾನಿಯಾಗಿ ಮಾಡಿದೆ. ಜೆಡಿಎಸ್‌ಗೂ ಅಧಿಕಾರ ಕೊಟ್ಟು ನೋಡಿದ್ದೀರಿ. ಈಗ ನಮ್ಮನ್ನು ಆಶೀರ್ವದಿಸಿ, ನಿಮ್ಮ ಆಶಯದಂತೆ ಉತ್ತಮ ಸರ್ಕಾರ ನೀಡುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

> ನಾವು ಗೌರವದಿಂದ ಜೀವನ ನಡೆಸಲು ಸಂವಿಧಾನ ಉಳಿಸಿಕೊಳ್ಳಬೇಕು. ಸಂವಿಧಾನ ಇಲ್ಲದಿದ್ದರೆ ಮೋದಿ ಪ್ರಧಾನಿಯಾಗಲು, ಮುರ್ಮು ರಾಷ್ಟ್ರಪತಿಯಾಗಲು, ಸಿದ್ದರಾಮಯ್ಯ ಸಿಎಂ ಆಗಲು ಆಗುತ್ತಿರಲಿಲ್ಲ. ಈಶ್ವರಪ್ಪ ಕುರಿ ಕಾಯಬೇಕಿತ್ತು. ನಾವು ಸಂವಿಧಾನ ಬದಲಿಸಲು ಬಿಡುವುದಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಸಂಘ ಪರಿವಾರದ ಶಕ್ತಿಯನ್ನು ಧ್ವಂಸ ಮಾಡಬೇಕು. ಕೋಮುಗಲಭೆ ವೇಳೆ ಮಕ್ಕಳಿಗೆ ಚಾಕು, ಚೂರಿ ಕೊಡಿ ಎಂದು ಪ್ರೇರೇಪಿಸುವವರಿಗೆ ಮತ್ತೆ ಅಧಿಕಾರ ಸಿಗಬಾರದು.
> -ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ

ಮೈಸೂರಿನ ಜೆ.ಕೆ.ಮೈದಾನದಲ್ಲಿ ಗುರುವಾರ 'ಪ್ರಜಾಧ್ವನಿ ಯಾತ್ರೆಯಲ್ಲಿ ಮಾತನಾಡಿದ ಅವರು, ರಾಜ್ಯ ಬಿಜೆಪಿಯ ಭ್ರಷ್ಟಾಚಾರದ ಬಗ್ಗೆ 'ಪಾಪದ ಪುರಾಣ' ಪುಸ್ತಕ ಮಾಡಿದ್ದೇವೆ ಈಗಾಗಲೇ ಜೆಡಿಎಸ್‌ಗೆ ಅಧಿಕಾರ ಕೊಟ್ಟು ನೋಡಿದ್ದೀರಿ. ಈಗ ನಮ್ಮನ್ನು ಆಶೀರ್ವದಿಸಿ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಗೃಹಲಕ್ಷ್ಮೀ, ಗೃಹ ಜ್ಯೋತಿ ಯೋಜನೆ ಜಾರಿಗೊಳಿಸುತ್ತೇವೆ. ನಿಮ್ಮ ಆಶಯದಂತೆ ಉತ್ತಮ ಸರ್ಕಾರ ನೀಡುತ್ತೇವೆ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಹೆಚ್ಚುವರಿಯಾಗಿ ಉತ್ಪಾದಿಸಲಾಗುತ್ತಿರುವ ವಿದ್ಯುತ್ ಅನ್ನು ಬೇರೆ ರಾಜ್ಯಗಳಿಗೆ ಮಾರಾಟ ಮಾಡಲಾಗುತ್ತಿದೆ. ಅದನ್ನು ನಾವು ಪ್ರತಿ ಮನೆಗೆ 200 ಯೂನಿಟ್ ಉಚಿತವಾಗಿ ನೀಡುತ್ತೇವೆ. 1 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆ ಹೆಸರಿನಲ್ಲಿ ತಲಾ 2 ಸಾವಿರ ಮಾಸಿಕ ಸಹಾಯ ಧನ ನೀಡುತ್ತೇವೆ. ನಾವು ಆಯೋಜಿಸಿರುವುದು ಕಾಂಗ್ರೆಸ್ ಯಾತ್ರೆ ಅಲ್ಲ. ಜನರ ಧ್ವನಿ, ಜನರ ಭಾವನೆಯ ಯಾತ್ರೆ ಈಗ ರಾಜ್ಯದ ಜನತೆ ಬಿಜೆಪಿ ಸರ್ಕಾರ ಕಿತ್ತೊಗೆಯುವ ಸಂಕಲ್ಪ ಮಾಡಿದ್ದಾರೆ. ನಾವು ಈ ಯಾತ್ರೆ ನಡೆಸುತ್ತಿರುವುದು ಅಧಿಕಾರಕ್ಕಾಗಿ ಅಲ್ಲ, ನಿಮಗಾಗಿ ಎಂಬುದನ್ನು ಮರೆಯಬೇಡಿ ಎಂದರು.

ಜೆಡಿಎಸ್‌ಗೆ ಜನಾಶೀರ್ವಾದ ಇಲ್ಲದಿದ್ದರೂ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅಧಿಕಾರ ನೀಡಿದೆವು. ಅವರ ಯೋಗಕ್ಕಿಂತ ಜನರ ಯೋಗಕ್ಷೇಮ ಮುಖ್ಯ ಎಂಬ ಉದ್ದೇಶದಿಂದ ನಾವು ಮುಖ್ಯಮಂತ್ರಿ ಸ್ಥಾನ ತ್ಯಾಗ ಮಾಡಿದೆವು. ನಮಗೆ ಅಧಿಕಾರದ ಆಸೆ ಇಲ್ಲ. ಜೆಡಿಎಸ್‌ಗೆ ಅವಕಾಶ ಕೊಟ್ಟಾಗಿದೆ. ಈಗ ಜನರಿಗೆ ಜೆಡಿಎಸ್ ಮೇಲೆ ವಿಶ್ವಾಸ ಹೊರಟು ಹೋಗಿದೆ. ನಮಗೆ ಅವಕಾಶ ಕೊಡಿ. ನಾವು ನಿಮ್ಮ ಸೇವೆ ಮಾಡುತ್ತೇವೆ. ಜೆಡಿಎಸ್ ಆಗಲಿ, ಬಿಜೆಪಿ ಆಗಲಿ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬುದು ಭ್ರಮೆ. ಕರ್ನಾಟಕವನ್ನು ಭ್ರಷ್ಟಾಚಾರದ ರಾಜಧಾನಿ ಮಾಡಿದ ಬಿಜೆಪಿ, ಅಧಿಕಾರಕ್ಕೆ ಮುನ್ನ ನೀಡಿದ್ದ 600ರಲ್ಲಿ 550 ಭರವಸೆ ಈಡೇರಿಸಿಲ್ಲ. ಈ ಸರ್ಕಾರಕ್ಕೆ ಕಣ್ಣು, ಕಿವಿ, ಹೃದಯ ಇಲ್ಲ. ಆದರೆ ಕೋವಿಡ್ ಸಂದರ್ಭದಲ್ಲಿ ಆಕ್ಸಿಜನ್ ಇಲ್ಲದೆ ಮೃತಪಟ್ಟ 36 ಮಂದಿ ಕುಟುಂಬದವರಿಗೆ ಕಾಂಗ್ರೆಸ್ ವತಿಯಿಂದ ತಲಾ 1 ಲಕ್ಷ ರೂ. ನೀಡಿದೆವು ಎಂದು ತಿಳಿಸಿದರು.

ನೀವಿಂದು ನಮಗೆ ನೀಡಿದ ಸ್ವಾಗತದಿಂದ ಅತೀವ ಸಂತಸವಾಗಿದೆ. ಇಡೀ ರಾಜ್ಯದ ಜನರು ವಿಧಾನಸೌಧದ ಮೂರನೇ ಮಹಡಿಗೆ ನಮ್ಮನ್ನು ಕಳುಹಿಸಲು ತೀರ್ಮಾನಿಸಿದ್ದಾರೆಂಬ ನಂಬಿಕೆಯನ್ನು ಗಟ್ಟಿಗೊಳಿಸಿದೆ ಎಂದು ಅವರು ಭಾವೋದ್ವೇಗದಿಂದ ನುಡಿದ ಅವರು, ಮೈಸೂರು, ಹಾಸನ, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ ನಮ್ಮ ಶಾಸಕರ ಸಂಖ್ಯೆ ಕಡಿಮೆ ಇದ್ದರೂ ವಿಧಾನಪರಿಷತ್ ಚುನಾವಣೆಯಲ್ಲಿ ನಮ್ಮನ್ನು ಆಶೀರ್ವದಿಸಿದ್ದೀರಿ. ಇತ್ತೀಚೆಗೆ ಜೆಡಿಎಸ್‌ನ 20 ಮಂದಿ ಕಾಂಗ್ರೆಸ್ ಸೇರಿದ್ದಾರೆ. ಅವರೆಲ್ಲ ದಡ್ಡರೇ? ಈ ಬಾರಿ ಚುನಾವಣೆಯಲ್ಲಿ ಸೋತರೆ ಜೆಡಿಎಸ್ ವಿಸರ್ಜಿಸುವುದಾಗಿ ಕುಮಾರಸ್ವಾಮಿ ಅವರು ಹೇಳಿದ್ದಾರೆ. ಅವರು ವಿಸರ್ಜಿಸುವವರೆಗೆ ನೀವು ಏಕೆ ಕಾಯುತ್ತೀರಿ ಎಂದು ಕಾರ್ಯಕರ್ತರನ್ನು ಪ್ರಶ್ನಿಸುವ ಮೂಲಕ ಚುನಾವಣೆಗೆ ಹುರಿದುಂಬಿಸಿದರು.

ಮೈಸೂರಿನಿಂದಲೇ ತೀರ್ಮಾನವಾಗಲಿ: ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ದೇಶದ ರಾಜ ಕಾರಣದಲ್ಲಿ ಹೊಸ ಇತಿಹಾಸ ನಿರ್ಮಿಸುವ ತೀರ್ಮಾನ ಮೈಸೂರಿನಿಂದಲೇ ಆಗಲಿ. ಮತ್ತೆ ಭಾರತ ನಂಬರ್ 1 ಸ್ಥಾನಕ್ಕೆ ಬರಲಿ ಎಂದರು. ನಮ್ಮ ಪ್ರಜಾಧ್ವನಿ ಯಾತ್ರೆ ಸರ್ಕಾರಕ್ಕೆ ಕೇಳಿಸುತ್ತಿದೆಯಾ? ಬಿಜೆಪಿ ಸರ್ಕಾರ ಕಿತ್ತೊಗೆದು ಕಾಂಗ್ರೆಸ್ ಸರ್ಕಾರ ಸ್ಥಾಪಿಸುವ ಕಾಲ ಬಂದಿದೆ. ಸಂವಿಧಾನದ ಸಮಾನತೆಯ ಆಧಾರದ ಮೇಲೆ ಸರ್ಕಾರ ನಡೆಸುವ ಬದಲು ತಾರತಮ್ಯ ನೀತಿ ಅನುಸರಿಸುತ್ತಿದೆ ಜನರಿಗೆ ಉತ್ತರದಾಯಿತ್ವವಾಗಿರಬೇಕಾದ ಸರ್ಕಾರ ಶೇ.40ರಷ್ಟು ಕಮಿಷನ್ ಮೇಲೆ ನಂತಿದೆ. ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ಭ್ರಷ್ಟಾಚಾರದ ಬಗ್ಗೆ ಪತ್ರ ಬರೆದರು ಪ್ರಧಾನಿ ಕ್ರಮ ಕೈಗೊಳ್ಳಲಿಲ್ಲ. ಅನೇಕ ಗುತ್ತಿಗೆ ದಾರರು ಮೃತಪಟ್ಟರು, ಅವರನ್ನು ಬದುಕಿಸಲು ಸಿಎಂಗೆ ಸಾಧ್ಯವೇ ಎಂದು ಅವರು ಪ್ರಶ್ನಿಸಿದರು.

ಮಂಡ್ಯದಲ್ಲಿ ಸಚಿವ ಆರ್.ಅಶೋಕ್ ವಿರುದ್ಧ ಗೋ ಬ್ಯಾಕ್ ಅಭಿಯಾನ

ಮಂಡ್ಯ, ಜ.27– ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಮಂಡ್ಯ ಜಿಲ್ಲಾ ನೂತನ ಉಸ್ತುವಾರಿ ಸಚಿವರಾಗಿ ನೇಮಿಸಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಸ್ವಪಕ್ಷೀಯ ಮುಖಂಡರು, ಕಾರ್ಯಕರ್ತರು ತಮ್ಮದೇ ಪಕ್ಷದ ಸಚಿವರ ವಿರುದ್ಧ ಗೋ ಬ್ಯಾಕ್ ಹಾಗೂ ಬಾಯ್ಕಾಟ್ ಅಭಿಯಾನ ಆರಂಭಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಸಚಿವ ಆರ್.ಅಶೋಕ್ ವಿರುದ್ಧ ಬಿಜೆಪಿ ಕಾರ್ಯಕರ್ತರು ಕೆಂಡಕಾರುತ್ತಾ ಗೋ ಬ್ಯಾಕ್ ಚಳವಳಿ ಆರಂಭಿಸಿದ್ದರೆ, ಇತ್ತ ಮಂಡ್ಯ ನಗರದ ವಿವಿಧ ಬೀದಿಗಳ ಗೋಡೆಗಳ ಮೇಲೆ ಆರ್.ಅಶೋಕ್ ಗೋಬ್ಯಾಕ್, ಬಾಯ್ಕಾಟ್ ಎಂಬ ಪೋಸ್ಟರ್‌ಗಳನ್ನು ಅಂಟಿಸಿ ಅಭಿಯಾನ ನಡೆಸುತ್ತಿದ್ದಾರೆ.

ಜೆಡಿಎಸ್ ಜೊತೆ ಹೊಂದಾಣಿಕೆ ರಾಜಕೀಯ: ಸಚಿವ ಆರ್.ಅಶೋಕ್ ಜೆಡಿಎಸ್ ಜೊತೆ ಹೊಂದಾಣಿಕೆ ರಾಜಕಾರಣ ಮಾಡುತ್ತಾರೆ. ಇದನ್ನು ಬಿಜೆಪಿ ಕಾರ್ಯಕರ್ತರು ಸಹಿಸಿಕೊಳ್ಳಲು ಸಾಧ್ಯವಿಲ್ಲ. ನೀವು ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದರಿಂದ ಜಿಲ್ಲೆಯಲ್ಲಿ ಬಿಜೆಪಿ ಬೆಳೆಯಲು ಸಾಧ್ಯವಾಗಿಲ್ಲ. ಆದ್ದರಿಂದ ದಯವಿಟ್ಟು ನೀವು ವಾಪಸ್ ಹೋಗಿ ಎಂದು ಅಭಿಯಾನದ ಮೂಲಕ ಕಿಡಿಕಾರಿದ್ದಾರೆ.

ಮಂಡ್ಯ ಬಿಟ್ಟು ಹೋಗಿ: ನಗರದ ವಿವಿ ರಸ್ತೆ, ಆರ್.ಪಿ. ರಸ್ತೆ, ಸುಭಾಷ್ ನಗರದ ಗೋಡೆ ಮೇಲೆ ಪೋಸ್ಟರ್‌ಗಳನ್ನು ಅಂಟಿಸಿ ಮಂಡ್ಯ ಬಿಟ್ಟು ಹೋಗಿ ಅಶೋಕ್ ಎಂದು ಪೋಸ್ಟರ್‌ನಲ್ಲಿ ಬರೆಯಲಾಗಿದೆ. ಆರ್.ಅಶೋಕ್ ವಿರುದ್ಧ ಹಿಂದೆಯೂ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದವು.



ಬಹಿರಂಗ ಅಸಮಾಧಾನ ಹೊರಹಾಕಿದ ಸಿದ್ದರಾಮಯ್ಯ: ಬಿಜೆಪಿ ರಾಜ್ಯ ಕಾರ್ಯಕಾರಿಣಿ ಹಾಗೂ ರಾಷ್ಟ್ರೀಯ ಪರಿಷತ್ ಸದಸ್ಯ ಡಾ.ಸಿದ್ದರಾಮಯ್ಯ ಬಹಿರಂಗವಾಗಿ ಅಶೋಕ್ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ.

ಅಶೋಕ್ ಮೇಲೆ ಹೊಂದಾಣಿಕೆ ರಾಜಕಾರಣದ ಆರೋಪವಿದೆ. ಈ ಹಿಂದೆ ರಾಜಕೀಯ ಹೊಂದಾಣಿಕೆ ಮಾಡಿಕೊಂಡಿದ್ದರಂತೆ. ಇದರಿಂದ ಪಕ್ಷದ ಹಿರಿಯ ನಾಯಕರನ್ನು ಸರಿಯಾಗಿ ನಡೆಸಿಕೊಳ್ಳಲ್ಲ. ಚುನಾವಣೆ ಹೊಸ್ತಿಲಲ್ಲಿ ಜಿಲ್ಲಾ ಉಸ್ತುವಾರಿ ಬದಲಾವಣೆ ಅವಶ್ಯಕತೆ ಇರಲಿಲ್ಲ. ನನಗೆ ಸಾಕಷ್ಟು ಕಾರ್ಯಕರ್ತರು ಕರೆ ಮಾಡುತ್ತಿದ್ದಾರೆ. ಮತ್ತೆ ಹೊಂದಾಣಿಕೆ ಬಗ್ಗೆ ಆತಂಕ, ದುಗುಡ ಹೆಚ್ಚಾಗಿದೆ. ನಮಗೆ ಪಕ್ಷ ಹಾಗೂ ಕಾರ್ಯಕರ್ತರು ಮುಖ್ಯ ಎಂದಿದ್ದಾರೆ. ಜಿಲ್ಲೆಯಲ್ಲಿ ಬಿಜೆಪಿ ಸದೃಢವಾಗಿದೆ. ಸಚಿವ ಕೆ. ಗೋಪಾಲಯ್ಯ ಉತ್ತಮವಾಗಿ ಕೆಲಸ ಮಾಡುತ್ತಿದ್ದರು. ಹೊಂದಾಣಿಕೆ ರಾಜಕಾರಣ ಮಾಡಬಾರದು ಎಂದು ಜಿಲ್ಲೆಗೆ ಅಮಿತ್ ಶಾ ಭೇಟಿ ನೀಡಿದ ಸಂದರ್ಭ ಸ್ಪಷ್ಟವಾಗಿ ಎಚ್ಚರಿಸಿದ್ದರು ಎಂದರು.

ಹೊಂದಾಣಿಕೆ ರಾಜಕಾರಣ ಮಾಡಲ್ಲ



ಮಂಡ್ಯ: ಹೊಂದಾಣಿಕೆ ರಾಜಕಾರಣ ಮಾಡಲ್ಲ. ಇದು ನಮ್ಮ ಪಕ್ಷದ ಸಂಸ್ಕೃತಿ ಅಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಅಶೋಕ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಇಲ್ಲ. ಉಸ್ತುವಾರಿ ಸಚಿವರಾಗಿ ಜಿಲ್ಲೆಗೆ ಆಗಮಿಸಿದ ವೇಳೆ 2 ಸಾವಿರ ಬೈಕ್‌ನಲ್ಲಿ ಮೆರವಣಿಗೆ ಮಾಡಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದರು. ಮಂಡ್ಯಕ್ಕೆ ಒಂದು ಶಕ್ತಿ ಬಂದಿದೆ. ಪ್ರಬಲವಾಗಿ ಬಂದಾಗ ಈ ರೀತಿ ಅಪಪ್ರಚಾರ ಬರುತ್ತಿದೆ ಅಷ್ಟೇ. ಈ ರೀತಿ ಅಪಪ್ರಚಾರ ಮಾಡುತ್ತಿರುವುದು ಕಾಂಗ್ರೆಸ್ ಅಥವಾ ಜೆಡಿಎಸ್‌ನವರ ಅಂತ ನೋಡೋಣ ಎಂದರು.

ನಮ್ಮ ಕಾರ್ಯಕರ್ತರನ್ನು ಜೊತೆಯಾಗಿ ಕರೆದೊಯ್ಯುವ ಕೆಲಸ ಮಾಡುತ್ತೇನೆ. ಬಹಳಷ್ಟು ಬದಲಾವಣೆ ತರುತ್ತೇನೆ. ಇದುವರೆಗೂ ಯಾರೂ ಅಸಮಾಧಾನ ವ್ಯಕ್ತಪಡಿಸಿಲ್ಲ. ನಾನು ಬಂದಿರುವುದಕ್ಕೆ ಕೆಲವರಿಗೆ ಭಯ ಹುಟ್ಟಿದೆ. ಬೇರೆ ಪಕ್ಷದವರು ಎತ್ತಿ ಕಟ್ಟುತ್ತಿದ್ದಾರೆ. ನಮ್ಮ ಪಕ್ಷದವರು ಯಾರು ಈ ರೀತಿ ಮಾಡಲ್ಲ. ನನ್ನ ಮೇಲೆ ಷಡ್ಯಂತ್ರ ರೂಪಿಸುವ ಧೈರ್ಯ ಯಾರಿಗೂ ಇಲ್ಲ ಎಂದು ವಿರೋಧ ಪಕ್ಷಗಳತ್ತ ಕಿಡಿಕಾರಿದರು.

ಗೌಡರ ಕುಟುಂಬ ಎದುರು ಹಾಕಿಕೊಂಡು ಮುಖ್ಯಮಂತ್ರಿ ಮಾಡಿದ್ದಕ್ಕೆ ನನಗೆ 'ಆ ಜನ್ಮ ವೈರಿ' ಪಟ್ಟ: ಸಿಆರ್‌ಎಸ್ ಕಿಡಿ



ಮಂಡ್ಯ, ಜ.27– ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನನ್ನನ್ನು ಆ ಜನ್ಮ ವೈರಿ ಎಂದಿದ್ದಾರೆ. 2006ರಲ್ಲಿ ಹೆಚ್.ಡಿ. ದೇವೇಗೌಡ ಹಾಗೂ ಅವರ ಕುಟುಂಬ ಎದುರು ಹಾಕಿಕೊಂಡು ಕುಮಾರಸ್ವಾಮಿ ಅವರನ್ನು ಸಿಎಂ ಮಾಡಿದ್ದಕ್ಕೆ ಅವರಿಗೆ ನಾನು ಆ ಜನ್ಮ ವೈರಿಯಾಗಿದ್ದೇನೆ ಎಂದು ಮಾಜಿ ಸಚಿವ ಎನ್. ಚಲುವರಾಯಸ್ವಾಮಿ ಕಿಡಿಕಾರಿದರು.

ನಗರದ ಮಂಡ್ಯ ವಿವಿ ಆವರಣದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಅವರ ನಿಲುವುಗಳ ಬಗ್ಗೆ ನೇರವಾಗಿ ಮಾತನಾಡಿದರೆ, ನನಗೆ ಆ ಜನ್ಮ ವೈರಿ ಪಟ್ಟ ಕಟ್ಟುತ್ತಾರೆ. ಜಿಲ್ಲೆಯ ಜನ ಇನ್ನಾದರೂ ಪಕ್ಕದ ತುಮಕೂರು, ಹಾಸನ, ಮೈಸೂರು ನಗರ ನೋಡಬೇಕು. ಅಲ್ಲಿನ ಅಭಿವೃದ್ಧಿ ಮಂಡ್ಯದಲ್ಲಿ ಕಾಣುತ್ತಿಲ್ಲ. ಜಿಲ್ಲೆ ಅಭಿವೃದ್ಧಿಯಾಗಬೇಕೆಂದರೆ ಜೆಡಿಎಸ್ ಅನ್ನು ಜಿಲ್ಲೆ ಜನ ಕಿತ್ತೊಗೆಯಬೇಕೆಂದರು.

ಜೆಡಿಎಸ್‌ನ ಏಳಕ್ಕೆ ಏಳು ಶಾಸಕರನ್ನು ಜಿಲ್ಲೆ ಜನ ಗೆಲ್ಲಿಸಿದರು. ಆದರೆ ಮೈಷುಗರ್, ರೈತರ ಹೋರಾಟದ ಬಗ್ಗೆ ಜೆಡಿಎಸ್ ಶಾಸಕರು ತುಟಿ ಬಿಚ್ಚಲಿಲ್ಲ. ಮಳೆಯಿಂದ ರೈತರಿಗೆ ಸಾಕಷ್ಟು ಸಮಸ್ಯೆಯಾಗಿದ್ದರೂ, ಅವರ ಸಮಸ್ಯೆ ಏನೆಂದು ಕೇಳಲಿಲ್ಲ. ಹೀಗಿರುವಾಗ ಈ ಪಕ್ಷದ ಶಾಸಕರು ನಮಗೆ ಬೇಕೆ ಎಂದು ಪ್ರಶ್ನಿಸಿದರು.

80 ಸೀಟು ಗೆದ್ದ ನಾವು 37 ಸೀಟು ಗೆದ್ದ ಜೆಡಿಎಸ್‌ಗೆ ಸಿಎಂ ಪಟ್ಟ ಧಾರೆ ಎರೆದರೂ ಅದನ್ನು ಉಳಿಸಿಕೊಳ್ಳಲಾಗದೇ ಮತ್ತೆ ಮುಖ್ಯಮಂತ್ರಿಯಾಗಬೇಕೆಂದು ನಿಮ್ಮ ಬಳಿಗೆ ಕುಮಾರಸ್ವಾಮಿ ಬಂದಿದ್ದು, ತಕ್ಕ ಉತ್ತರ ನೀಡಿ ಅವರನ್ನು ಪಕ್ಕಕ್ಕಿಟ್ಟು ಕಾಂಗ್ರೆಸ್ ಬೆಂಬಲಿಸಿ ಎಂದರು.

ಮಾಜಿ ಸಚಿವ ಕೃಷ್ಣಭೈರೇಗೌಡ ಮಾತನಾಡಿ, 40 ಪರ್ಸೆಂಟ್ ಕಮೀಷನ್ ಒಡೆಯುವ ಆಸೆ ಕಾಂಗ್ರೆಸ್ ಪಕ್ಷಕ್ಕಿಲ್ಲ. ರಾಜ್ಯದ ಅಭಿವೃದ್ಧಿ, ಒಳ್ಳೆಯ ಯೋಜನೆ ನೀಡಬೇಕೆಂಬ ಉದ್ದೇಶದಿಂದ ಪ್ರಜಾಧ್ವನಿ ಯಾತ್ರೆ ಮಾಡುತ್ತಿದ್ದೇವೆ ಎಂದರು.

ಕೇಂದ್ರ ಬಿಜೆಪಿ ಸರ್ಕಾರ ಈವರೆಗೆ ಶ್ರೀಮಂತರ 12 ಲಕ್ಷ ಕೋಟಿ ಸಾಲ ಮನ್ನಾ ಮಾಡಿದೆ. ಬಡವರ ಎಷ್ಟು ಲಕ್ಷ ಕೋಟಿ ಸಾಲ ಮನ್ನಾ ಆಗಿದೆ ಎಂಬ ವಿವರ ನೀಡಲಿ. ಧರ್ಮ, ಜಾತಿ ಹೆಸರಲ್ಲಿ ದೇಶ ಇಬ್ಭಾಗ ಮಾಡಿರುವ ಬಿಜೆಪಿ ನಿಲುವು ಖಂಡಿಸಿ, ದೇಶ ಜೋಡಿಸಲು ರಾಹುಲ್‌ಗಾಂಧಿ ಭಾರತ್ ಜೋಡೋ ಯಾತ್ರೆ ನಡೆಸುತ್ತಿದ್ದಾರೆ ಎಂದರು. ಕುಮಾರಸ್ವಾಮಿಗೆ ಸಿಎಂ ಹುದ್ದೆ ಚನ್ನಪಟ್ಟಣದ ಬೊಂಬೆ ಯಂತೆ ಬೊಂಬೆಯಾಟವಾಗಿದ್ದು, ಈ ಭಾಗದ ಜನ ಈ ಬಾರಿ ಕುಮಾರಸ್ವಾಮಿ ಅವರ ಜೆಡಿಎಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಿ ಎಂದು ಮನವಿ ಮಾಡಿದರು.

ಕೇಂದ್ರ ಮಾಜಿ ಸಚಿವ ಕೆ.ರೆಹಮಾನ್‌ಖಾನ್ ಮಾತನಾಡಿ, ಬಿಜೆಪಿ ದೇಶದಲ್ಲಿ ಬಲಿಷ್ಠ ಪಕ್ಷವೆಂದು ಬಿಂಬಿಸುತ್ತಿದೆ. ಕೆಲವೇ ರಾಜ್ಯಗಳಲ್ಲಷ್ಟೇ ಅವರು ಸ್ವಂತ ಬಲದಿಂದ ಅಧಿಕಾರ ಹಿಡಿದಿರುವುದು. ಇನ್ನು ಸಾಕಷ್ಟು ಕಡೆ ಆಪರೇಷನ್ ಕಮಲ ಮಾಡಿ, ಅಧಿಕಾರ ಹಿಡಿದಿರುವ ಬಿಜೆಪಿಗೆ ಪ್ರಜಾಪ್ರಭುತ್ವದ ಬಗ್ಗೆ ಬೆಲೆಯೇ ಇಲ್ಲ. ರಾಜ್ಯದಲ್ಲೂ ಜನರಿಂದ ಆಯ್ಕೆಯಾದ ಸರ್ಕಾರ ಇದಲ್ಲ. ಬದಲಾಗಿ ಶಾಸಕರನ್ನು ಖರೀದಿಸಿ ನಡೆಸುತ್ತಿರುವ ಬಿಜೆಪಿ ಸರ್ಕಾರ ಮೊದಲು ತೊಲಗಬೇಕೆಂದರು.

ಕೆ.ಆರ್.ಪೇಟೆಯಲ್ಲಿ ಗಣರಾಜ್ಯೋತ್ಸವ



ಕೆ.ಆರ್.ಪೇಟೆ, ಜ.27– ದೇಶಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ನೀಡಿದ ಸಂವಿಧಾನ ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನವಾಗಿದೆ ಎಂದು ತಹಸೀಲ್ದಾರ್ ಎಂ.ವಿ.ರೂಪ ತಿಳಿಸಿದರು

ಪಟ್ಟಣದ ಪುರಸಭಾ ಕಚೇರಿ ಬಳಿಯ ಮೈದಾನದಲ್ಲಿ ತಾಲೂಕು ಆಡಳಿತ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಸಂವಿಧಾನ ಅಳವಡಿಸಿಕೊಂಡ ಉದ್ದೇಶ ದೇಶದ ಪ್ರತಿಯೊಬ್ಬ ನಾಗರಿಕರಿಗೂ ಮೂಲಭೂತ ಹಕ್ಕುಗಳಾದ ಸ್ವಾತಂತ್ರ್ಯ, ಸಮಾನತೆ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಇತರ ಹಕ್ಕುಗಳನ್ನು ನೀಡುವುದಾಗಿದೆ. ಬಲಿಷ್ಠ ಒಕ್ಕೂಟ ಸರ್ಕಾರ ರೂಪಿಸುವ, ಅತ್ಯುತ್ತಮ ಮಾದರಿ ಸಂವಿಧಾನ ಅಳವಡಿಸಿಕೊಂಡಿರುವುದು ನಮ್ಮ ದೇಶದ ಹೆಮ್ಮೆ ಸಂಕೇತ ಎಂದರು. ಸಮಾರಂಭದಲ್ಲಿ ಗ್ರಾಮ ಒನ್ ಸೇವಾ ಸಿಂಧು ಯೋಜನೆಯಡಿ ನಾಗರಿಕರಿಗೆ ಉತ್ತಮ ಸೇವೆ ಒದಗಿಸಿದ ಚೌಡೇನಹಳ್ಳಿ ಗ್ರಾಮ ಒನ್ ಸೇವಾ ಕೇಂದ್ರಕ್ಕೆ ಪ್ರಥಮ, ನೀತಿ ಮಂಗಲ ಕೇಂದ್ರಕ್ಕೆ ದ್ವಿತೀಯ, ಸಿಂಧುಘಟ್ಟ ಕೇಂದ್ರಕ್ಕೆ ತೃತೀಯ ಬಹುಮಾನವನ್ನು ತಾಲೂಕು ಆಡಳಿತ ಘೋಷಣೆ ಮಾಡಿದ್ದು, ಚೌಡೇನಹಳ್ಳಿ ಸಿ.ಆರ್.ಸ್ವಾಮಿ, ನೀತಿಮಂಗಲದ ಪವಿತ್ರ, ಸಿಂಧುಘಟ್ಟದ ಅಶೋಕ್ ಕುಮಾರ್ ಅವರಿಗೆ ತಹಸೀಲ್ದಾರ್ ಎಂ.ವಿ.ರೂಪಾ ಪ್ರಶಸ್ತಿ ಪತ್ರ ಮತ್ತು ಬಹುಮಾನ ನೀಡಿ ಗೌರವಿಸಿದರು.

ಈ ವೇಳೆ ಪುರಸಭಾಧ್ಯಕ್ಷೆ ಮಹಾದೇವಿ, ಉಪಾಧ್ಯಕ್ಷೆ ಗಾಯಿತ್ರಿ, ಬಿಇಓ ಆರ್.ಎಸ್.ಸೀತಾರಾಂ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್. ಯತೀಶ್, ಕ್ಷೇತ್ರ ಸಮನ್ವಯಾಧಿಕಾರಿ ಲಿಂಗರಾಜು, ತಾಲೂಕು ಆರೋಗ್ಯಾಧಿಕಾರಿ ಡಾ.ಶಿವಕುಮಾರ್, ಸಿಪಿಐ ಎಂ.ಕೆ.ದೀಪಕ್, ಬಿಸಿಎಂ ಅಧಿಕಾರಿ ಎಂ.ಎನ್. ವೆಂಕಟೇಶ್, ತಾಲೂಕು ಕಸಾಪ ಅಧ್ಯಕ್ಷ ಎಚ್.ಆರ್. ಪೂರ್ಣಚಂದ್ರ ತೇಜಸ್ವಿ, ಕರವೇ ಅಧ್ಯಕ್ಷ ಹೊನ್ನೇನಹಳ್ಳಿ ವೇಣು ಸೇರಿದಂತೆ ಇತರರಿದ್ದರು.

ಸಿಎಸ್‌ಪಿ ನೇತೃತ್ವದಲ್ಲಿ ರೈತ ಸಂಘ ತೊರೆದು ಜೆಡಿಎಸ್ ಸೇರ್ಪಡೆ



ಪಾಂಡವಪುರ, ಜ.27– ಪಟ್ಟಣದ ಮುಸ್ಲಿಂ ಸಮುದಾಯದ ಮುಖಂಡರು ರೈತ ಸಂಘ ತೊರೆದು ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡರು.

ಮುಖಂಡ ಎಲೆಕೆರೆ ಸಮಿಉಲ್ಲಾ ಸೇರಿದಂತೆ ಹಲವರು ಪಟ್ಟಣದಲ್ಲಿ ಸಿ.ಎಸ್.ಪುಟ್ಟರಾಜು ಅವರಿಂದ ಜೆಡಿಎಸ್ ಪಕ್ಷದ ಟವಲ್ ಹಾಗೂ ಹೂವಿನ ಹಾರ ಹಾಕಿಸಿಕೊಳ್ಳುವ ಮೂಲಕ ಅಧಿಕೃತವಾಗಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಜಾತಿ, ಧರ್ಮದ ಹೆಸರಲ್ಲಿ ದೇಶದಲ್ಲಿ ಸಂಘರ್ಷ ಸೃಷ್ಟಿಸಿ ರಾಜಕೀಯ ಷಡ್ಯಂತ್ರ ಮಾಡುತ್ತಿರುವ ಬಿಜೆಪಿಗೆ ತಕ್ಕಪಾಠ ಕಲಿಸುವ ನಿಟ್ಟಿನಲ್ಲಿ ದೇಶದಲ್ಲಿ ದೊಡ್ಡಮಟ್ಟದ ರಾಜಕೀಯ ಧೃವೀಕರಣವಾಗುತ್ತಿದೆ. ಅದರ ಭಾಗವಾಗಿ ಇಂದು ಪಾಂಡವಪುರದಲ್ಲಿ ಮುಸ್ಲಿಂ ಸಮುದಾಯದ ಪ್ರಭಾವಿ ಮುಖಂಡರಾದ ಎಲೆಕೆರೆ ಸಮಿಉಲ್ಲಾ ಸೇರಿದಂತೆ ಅವರ ನೇತೃತ್ವದಲ್ಲಿ ಹಲವು ಮುಖಂಡರು ನಮ್ಮ ನಾಯಕರಾದ ಹೆಚ್.ಡಿ.ದೇವೇಗೌಡ, ಹೆಚ್.ಡಿ. ಕುಮಾರಸ್ವಾಮಿ ಅವರ ಜನಪರ ಕಾರ್ಯ ಮೆಚ್ಚಿ ರೈತಸಂಘ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡಿದ್ದಾರೆ. ಕ್ಷೇತ್ರದಲ್ಲೂ ದೊಡ್ಡಮಟ್ಟದ ರಾಜಕೀಯ ಧೃವೀಕರಣ ನಡೆಯುತ್ತಿದೆ. ಇದೀಗ ಸಮಿಉಲ್ಲಾ ಹಾಗೂ ಬೆಂಬಲಿಗರ ಆಗಮನದಿಂದ ಪಕ್ಷಕ್ಕೆ ಬಲಬಂದಂತಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವ ಮೂಲಕ ಮುಸ್ಲಿಂ ಸಮುದಾಯ ಟಾರ್ಗೆಟ್ ಮಾಡುತ್ತಿರುವ ಬಿಜೆಪಿಗೆ ತಕ್ಕ ಪಾಠಕಲಿಸಲಾಗುವುದು ಎಂದರು.

ಮುಖಂಡ ಸಮಿಉಲ್ಲಾ ಮಾತನಾಡಿ, ನಾನು ಕಳೆದ 20 ವರ್ಷದಿಂದ ರೈತ ಸಂಘದಲ್ಲಿ ಗುರುತಿಸಿಕೊಂಡು ಕೆಲಸ ಮಾಡುತ್ತಿದೆ. ಇದೀಗ ಶಾಸಕ ಸಿ.ಎಸ್.ಪುಟ್ಟರಾಜು ಜನಪರ ಕಾರ್ಯ ಮೆಚ್ಚಿ ಜೆಡಿಎಸ್‌ಗೆ ಸೇರ್ಪಡೆಗೊಳ್ಳುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಪರ ಕೆಲಸ ಮಾಡುವ ಮೂಲಕ ಅವರಿಗೆ ರಾಜಕೀಯ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ ಎಂದರು.

ಇದೇ ವೇಳೆ ಮುಸ್ಲಿಂ ಸಮುದಾಯದ ಮುಖಂಡರಾದ ಸಮಿಉಲ್ಲಾ, ಕಲಂಪಾಷ, ನಸ್ರುಲ್ಲಾ ಶರೀಫ್, ಧರ್ಮಗುರು ಉಮರ್‌ಖಾದ್ರಿ, ಅಜೀಜ್‌ಪಾಷ, ಏಜಾಸ್, ಮುಂತಾಜ್ ಪಾಷ, ಮುನ್ನಾವರ್ ಪಾಷ, ಅಜೀಜ್ ಪಾಷ, ರಫೀಕ್, ಹತಉಲ್ಲಾ ಖಾನ್, ಮುಖ್ಯ ಗುರುಗಳಾದ ಉಮರ್‌ಖಾದ್ರಿ ಜೆಡಿಎಸ್ ಸೇರ್ಪಡೆಗೊಂಡರು.

ಈ ವೇಳೆ ಪುರಸಭೆ ಸದಸ್ಯರಾದ ಇಮ್ರಾನ್, ಸೋಮಶೇಖರ್, ಚಂದ್ರು, ಕೃಷ್ಣ, ಮುಖಂಡರಾದ ಟೌನ್‌ಚಂದ್ರು, ಆದರ್ಶ, ಕೆ.ಮನೋಹರ್, ಹರೀಶ್, ರಾಕೇಶ್ ಸೇರಿದಂತೆ ಹಲವರಿದ್ದರು.

ಪ್ಯಾಸೆಂಜರ್ ಆಟೋ ಕಳ್ಳನ ಬಂಧನ

ಮಂಡ್ಯ, ಜ.27– ಮೂರು ಪ್ಯಾಸೆಂಜರ್ ಆಟೋಗಳನ್ನು ಕಳವು ಮಾಡಿದ ಕಳ್ಳನನ್ನು ಶ್ರೀರಂಗ ಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ನಗರದ ಕೆಸರೆ ಸಮೀಪದ ರಾಜೇಂದ್ರ ನಗರದ ನಿವಾಸಿ ನರಸಿಂಹ(37) ಬಂಧಿತ ಆರೋಪಿ. ಈತ ಬೆಂಗಳೂರು ಗೋವಿಂದ ರಾಜ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂದು, ಮೈಸೂರಿನ ಲಷ್ಕರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂದು, ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಆರತಿ ಉಕ್ಕಡದ ಬಳಿ ಒಂದು ಪ್ಯಾಸೆಂಜರ್ ಆಟೋ ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ಬೆಳಕಿಗೆ ಬಂದಿದೆ.

ಆರತಿ ಉಕ್ಕಡ ದೇವಸ್ಥಾನದ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ಪ್ಯಾಸೆಂಜರ್ ಆಟೋವನ್ನು ಕಳವು ಮಾಡಿರುವ ಬಗ್ಗೆ ಜ.22 ರಂದು ಶ್ರೀರಂಗ ಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು. ಆರೋಪಿ ಪತ್ತೆಗಾಗಿ ಎಸ್‌ಐ ಮತ್ತು ಸಿಬ್ಬಂದಿ ತಂಡ ರಚಿಸಲಾಗಿತ್ತು. ಈ ತಂಡ ಆರೋಪಿ ಪತ್ತೆ ಹಚ್ಚಿದ್ದಾರೆ.

ಡಾ.ವಿಷ್ಣುವರ್ಧನ್ ಸ್ಮಾರಕ ಉದ್ಘಾಟನೆ ಹಿನ್ನೆಲೆ ಜಿಲ್ಲಾಧಿಕಾರಿ ಪರಿಶೀಲನೆ




ಮೈಸೂರು, ಜ.27– ತಾಲೂಕಿನ ಎಚ್.ಡಿ.ಕೋಟೆ ರಸ್ತೆ ಹಾಲಾಳು ಗ್ರಾಮದಲ್ಲಿ ನಿರ್ಮಿಸಿರುವ ಡಾ.ವಿಷ್ಣುವರ್ಧನ್ ಅವರ ಸ್ಮಾರಕವನ್ನು ಜ.29ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಇಂದು ಸ್ಥಳಕ್ಕೆ ಭೇಟಿ ನೀಡಿ, ಅಗತ್ಯ ಸಿದ್ಧತೆಗಳನ್ನು ಪರಿಶೀಲಿಸಿದರು.

ಸ್ಮಾರಕ ಉದ್ಘಾಟನಾ ಕಾರ್ಯಕ್ರಮ ಯಾವುದೇ ಲೋಪವಿಲ್ಲದಂತೆ ಜರುಗಬೇಕು. ಗಣ್ಯರು ಹಾಗೂ ಸಾರ್ವಜನಿಕರ ವಾಹನಗಳ ನಿಲುಗಡೆಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರು, ಊಟದ ವ್ಯವಸ್ಥೆ ಸಮರ್ಪಕವಾಗಿರಬೇಕು. ತರಾತುರಿಯಲ್ಲಿ ಕಾರ್ಯಕ್ರಮದ ದಿನ ತಯಾರಿ ಮಾಡಿಕೊಳ್ಳುವುದು ಸರಿಯಾಗುವುದಿಲ್ಲ. ಯಾವುದೇ ಗೊಂದಲವಾಗದಂತೆ ಮುಂಚಿತವಾಗಿಯೇ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಅಪರ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ, ಡಾ.ವಿಷ್ಣು ವರ್ಧನ್ ಸ್ಮಾರಕ ಪ್ರತಿಷ್ಠಾನದ ಕಾರ್ಯದರ್ಶಿ ವಿಜಯಾನಂದ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ನಟ ನಂದಮೂರಿ ತಾರಕ ರತ್ನ ತೀವ್ರ ಅಸ್ವಸ್ಥ; ಪ್ರಜ್ಞೆ ತಪ್ಪಿದ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲು

ಹೈದರಾಬಾದ್, ಜ.27– ತೆಲುಗು ಚಿತ್ರರಂಗದ ಖ್ಯಾತ ನಟ ಹಾಗೂ ರಾಜಕಾರಣಿ



ನಂದಮೂರಿ ತಾರಕ ರತ್ನ ಅವರು ತೀವ್ರವಾಗಿ ಅಸ್ವಸ್ಥಗೊಂಡಿದ್ದಾರೆ. ಇಂದು (ಜ.27) ಪಾದಯಾತ್ರೆಯಲ್ಲಿ ಭಾಗಿಯಾಗಿದ್ದ ಅವರಿಗೆ ಏಕಾಏಕಿ ಅನಾರೋಗ್ಯ ಉಂಟಾಗಿದೆ. ಪಾದಯಾತ್ರೆ ಆರಂಭವಾದ ಕೆಲವೇ ನಿಮಿಷಗಳಲ್ಲಿ ಅವರು ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ.

ಅವರನ್ನು ಕುಪ್ಪಂ ಬಳಿ ಇರುವ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ನಂದಮೂರಿ ತಾರಕ ರತ್ನ ಅವರನ್ನು ಬೆಂಗಳೂರಿಗೆ ಕರೆತರುವ ಸಾಧ್ಯತೆ ಕೂಡ ಇದೆ ಎನ್ನಲಾಗುತ್ತಿದೆ. ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಪುತ್ರ ನರಾ ಲೋಕೇಶ್ ಅವರು ಕುಪ್ಪಂನಲ್ಲಿ ಪಾದಯಾತ್ರೆ ಆರಂಭಿಸಿದ್ದಾರೆ. ಈ ಪಾದಯಾತ್ರೆಯಲ್ಲಿ ಭಾಗಿಯಾದಾಗ ತಾರಕ ರತ್ನ ಅಸ್ವಸ್ಥರಾಗಿದ್ದಾರೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಆಸ್ಪತ್ರೆಗೆ ಕರೆತಂದಾಗ ತಾರಕ ರತ್ನ ಅವರ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿತ್ತು. ಅವರಿಗೆ ಹಲವು ಬಗೆಯ ಪರೀಕ್ಷೆಗಳನ್ನು ಮಾಡಲಾಯಿತು. ಬಳಿಕ ಕೊಂಚ ಸುಧಾರಣೆ ಕಂಡಿದೆ ಎಂದು ಹೇಳಲಾಗುತ್ತಿದೆ. ಆದರೆ ಅಧಿಕೃತವಾಗಿ ಹೆಲ್ತ್ ಅಪ್‌ಡೇಟ್ ಇನ್ನಷ್ಟೇ ಸಿಗಬೇಕಿದೆ. ವಿಷಯ ತಿಳಿಯುತ್ತಿದ್ದಂತೆಯೇ ನಂದಮೂರಿ ಬಾಲಕೃಷ್ಣ ಅವರು ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ತಾರಕ ರತ್ನ ಆರೋಗ್ಯದ ಕುರಿತು ಅವರು ಮಾಹಿತಿ ಪಡೆದಿದ್ದಾರೆ. ತೆಲುಗಿನ ಅನೇಕ ಸಿನಿಮಾಗಳಲ್ಲಿ ನಂದಮೂರಿ ತಾರಕ ರತ್ನ ನಟಿಸಿದ್ದಾರೆ. 'ಒಕಟೋ ನಂಬರ್', 'ಕುರ್ರಾಡು', 'ಯುವ ರತ್ನ', 'ತಾರಕ್', 'ಭದ್ರಾದಿ ರಾಮುಡು', 'ನಂದೀಶ್ವರುಡು' ಮುಂತಾದ ಸಿನಿಮಾಗಳಲ್ಲಿ ಬಣ್ಣ ಹಚ್ಚಿರುವ ಅವರು ಟಾಲಿವುಡ್‌ನಲ್ಲಿ ಖ್ಯಾತಿ ಪಡೆದಿದ್ದಾರೆ. ಅವರು ಬೇಗ ಗುಣಮುಖರಾಗಲಿ ಎಂದು ಅಭಿಮಾನಿಗಳು ಪ್ರಾರ್ಥಿಸುತ್ತಿದ್ದಾರೆ.

ಜಾನುವಾರು ಜಾತ್ರೆ, ಸಂತೆ ನಿಷೇಧ

ಮೈಸೂರು,ಜ.27– ಜಿಲ್ಲೆಯಲ್ಲಿ ಜಾನುವಾರುಗಳಲ್ಲಿ ಚರ್ಮ ಗಂಟು ರೋಗ ಮತ್ತಷ್ಟು ಹರಡುವುದನ್ನು ತಡೆಗಟ್ಟಲು ಮುಂಜಾಗೃತಾ ಕ್ರಮವಾಗಿ ತಿ.ನರಸೀಪುರದ ಮುಡುಕುತೊರೆ ಜಾತ್ರೆಯಲ್ಲಿ ಜಾನುವಾರು ಜಾತ್ರೆ, ಸಂತೆಯನ್ನು ಜಿಲ್ಲಾಧಿಕಾರಿಗಳ ಆದೇಶದಂತೆ ಸಂಪೂರ್ಣವಾಗಿ ನಿಷೇಧಿಸಿದೆ. ಮುಡುಕುತೊರೆ ಶ್ರೀ ಭ್ರಮರಾಂಬಸಮೇತ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಅಭಿವೃದ್ಧಿ ಕೆಲಸವು ಪ್ರಗತಿಯಲ್ಲಿರುವುದರಿಂದ ಆಗಮಶಾಸ್ತ್ರ ರೀತ್ಯ ಬ್ರಹ್ಮರಥೋತ್ಸವ ಮತ್ತು ಉತ್ಸವಾದಿಗಳು ಇರುವುದಿಲ್ಲ. ದೇವರ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಹಾಗೂ ಭಕ್ತಾದಿಗಳು ದೇವಾಲಯದ ಆಡಳಿತದೊಂದಿಗೆ ಸಹಕರಿಸಬೇಕೆಂದು ಶ್ರೀ ವೈದ್ಯನಾಥೇಶ್ವರಸ್ವಾಮಿ ಮತ್ತು ಸಮೂಹ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಂತೂ ಬೋನಿಗೆ ಬಿದ್ದ ತಿ.ನರಸೀಪುರದ ಭಯಾನಕ ಚಿರತೆ

- ಕೊನೆಯದಾಗಿ ಬಲಿ ಪಡೆದ ಬಾಲಕನ ಶವ ಸಿಕ್ಕ ಸ್ಥಳದಲ್ಲಿ ಸೆರೆ
- ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ರವಾನೆ

ಮೈಸೂರು,ಜ.27(ಎಂಟಿವೈ)– ಗ್ರಾಮೀಣ ಜನರ ಬಲಿ ಪಡೆಯುತ್ತಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿದೆ. ಇತ್ತೀಚೆಗೆ ಬಾಲಕನ ಮೃತದೇಹ ಸಿಕ್ಕಿದ ಸ್ಥಳದಲ್ಲಿಡಲಾಗಿದ್ದ, ಬೋನ್‌ಗೆ 5 ವರ್ಷದ ಚಿರತೆ ಸೆರೆ ಸಿಕ್ಕಿದೆ. ಆದರೂ ದಾಳಿ ಮಾಡಿದ ಚಿರತೆ ಇದೇನಾ ಎಂಬ ಅನುಮಾನ ಹಾಗೂ ಆತಂಕ ಮುಂದು ವರೆದಿದೆ. ಹಾಗಾಗಿ, ಅರಣ್ಯ ಸಿಬ್ಬಂದಿ ಇನ್ನಷ್ಟು ದಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಜ.21ರಂದು ತಿ.ನರಸೀಪುರ ತಾಲೂಕಿನ ಹೊರಳಹಳ್ಳಿ ಗ್ರಾಮದ 11 ವರ್ಷದ ಬಾಲಕ ಜಯಂತ್ ಮೃತದೇಹ ದೊರೆತ ಸ್ಥಳದಲ್ಲಿ ಇಡಲಾಗಿದ್ದ ಬೋನ್‌ಗೆ ಜ.26ರ ಮುಂಜಾನೆ 2.30ರಿಂದ 3.30ರ ನಡುವೆ 5 ವರ್ಷದ ಗಂಡು ಚಿರತೆ ಸೆರೆ ಸಿಕ್ಕಿದೆ. ಜನರ ಮೇಲೆ ದಾಳಿ ನಡೆಸುತ್ತಿದ್ದ ಚಿರತೆಯೇ ಸೆರೆ ಸಿಕ್ಕಿದೆ ಎಂದು ಅರಣ್ಯ ಇಲಾಖೆ ಸ್ಪಷ್ಟಪಡಿಸಿದೆ. ಆದರೆ ಇದು ಆ ಚಿರತೆ ಅಲ್ಲ ಎಂದು ಸ್ಥಳೀಯರು ಅನುಮಾನ ಪಟ್ಟಿದ್ದರು. ಅರಣ್ಯಾಧಿಕಾರಿಗಳು ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆ ಸಿಕ್ಕಿದ ಚಿರತೆ ಹಾಗೂ ಬೋನ್‌ನಲ್ಲಿದ್ದ ಚಿರತೆಯ ಎರಡೂ ಚಿತ್ರಗಳ ಮೇಲೆ ಸಾಮಾನ್ಯವಾಗಿ ಇರುವ ಮಾರ್ಕ್‌ಗಳನ್ನು ಗುರುತು ಮಾಡಿ ಜನರಿಗೆ ತೋರಿಸಿದರು. ಇದರಿಂದ ಜನರು ಸೆರೆ ಸಿಕ್ಕಿದ್ದು ದಾಳಿ ನಡೆಸಿದ ಚಿರತೆ ಎಂದು ಸದ್ಯಕ್ಕೆ ಸಹಮತಿಸಿದ್ದಾರೆ.

ತುಮಕೂರು ಬೋನಿಗೆ ಬಿದ್ದ ಚಾಣಾಕ್ಷ: ಕಳೆದ 10 ದಿನದಿಂದ ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿಸಿದ ಚಿರತೆ, ತುಮಕೂರಿನಿಂದ ತರಲಾಗಿದ್ದ ಬೋನ್‌ಗೆ ಬಿದ್ದಿದೆ. ಸೆರೆ ಹಿಡಿದಿದೆ. ಈ ಚಿರತೆ ಸೆರೆ ಹಿಡಿಯಲು ವಿವಿಧೆಡೆ 18 ಬೋನ್ ಇಡಲಾಗಿತ್ತು. ಎರಡು ದಿನಕ್ಕೊಮ್ಮೆ ನಾನಾ ಕಡೆ ಜಾನುವಾರು ಬಲಿ ಪಡೆಯುತ್ತಿತ್ತು. ಅಂತಿಮವಾಗಿ ಚಿರತೆ ಸೆರೆ ಹಿಡಿಯಲೇಬೇಕೆಂದು ನಿರ್ಧರಿಸಿದ್ದ ಅರಣ್ಯ ಸಿಬ್ಬಂದಿ, ತುಮಕೂರಿನಿಂದ ತರಲಾಗಿದ್ದ ದೊಡ್ಡ ಬೋನ್ ಅನ್ನು ಬಾಲಕ ಜಯಂತ್ ಮೃತದೇಹ ಸಿಕ್ಕಿದ ಸ್ಥಳದಲ್ಲಿ ಅಳವಡಿಸಿ, ಅದರೊಳಗೆ ಪ್ರಾಣಿಗಳ ಕಳೇಬರ ತಂದು ಇಟ್ಟಿದ್ದರು. ಜಾನುವಾರುಗಳ ಕೊಳೆತ ಮಾಂಸ ಭಕ್ಷಿಸಲು ಜ.26ರ ಮುಂಜಾನೆ ಬಂದು ಸೆರೆಯಾಗಿದೆ.

ಚಿರತೆ ನೋಡಲು ಮುಗಿಬಿದ್ದ ಜನ: ಚಿರತೆ ಸೆರೆ ಸಿಕ್ಕಿದೆ ಎಂಬ ವಿಚಾರ ತಿಳಿಯುತ್ತಿದ್ದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಭಾರೀ ಸಂಖ್ಯೆಯಲ್ಲಿ ಸ್ಥಳಕ್ಕೆ ಆಗಮಿಸಿದರು. ತಂಡೋಪತಂಡವಾಗಿ ಆಗಮಿಸಿದ ಜನ, ಬೋನ್‌ನಲ್ಲಿದ್ದ ಚಿರತೆಯನ್ನು ವೀಕ್ಷಿಸಲು ಮುಗಿಬಿದ್ದರು. ಇದರಿಂದ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಚಿರತೆ ಕೊಲ್ಲಲು ಬಿಗಿಪಟ್ಟು: ಇದೇ, ಜನರ ಮೇಲೆ ದಾಳಿ ಮಾಡುತ್ತಿದ್ದ ಚಿರತೆ ಎಂದು ದೃಢಪಡುತ್ತಿದ್ದಂತೆಯೇ ಸಂತ್ರಸ್ತ ನಾಲ್ಕು ಕುಟುಂಬದ ಸದಸ್ಯರು, ಸ್ಥಳೀಯ



> "ಜನರ ಮೇಲೆ ದಾಳಿ ನಡೆಸುತ್ತಿದ್ದ ಚಿರತೆಯೇ ಸೆರೆ ಸಿಕ್ಕಿದೆ. ಅದನ್ನು ಖಚಿತಪಡಿಸಿಕೊಳ್ಳಲಾಗಿದೆ. ಸೆರೆ ಸಿಕ್ಕಾಗ ಹಾಗೂ ಸೆರೆ ಸಿಗುವ ಮುನ್ನ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆ ಸಿಕ್ಕಿರುವ ದೃಶ್ಯಗಳು ಅದನ್ನು ಖಚಿತಪಡಿಸಿವೆ. ಜನ ಆತಂಕ ಹಾಗೂ ಅನುಮಾನ ಪಡುವ ಅಗತ್ಯವಿಲ್ಲ. ಸೆರೆ ಸಿಕ್ಕ ಚಿರತೆಯನ್ನು ಬನ್ನೇರುಘಟ್ಟಕ್ಕೆ ಕೊಂಡೊಯ್ಯಲಾಗಿದೆ.
> – ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ

ಗ್ರಾಮಸ್ಥರು ಅದನ್ನು ಕೊಲ್ಲುವಂತೆ ಆಗ್ರಹಿಸಿದರು. ಅದು, ನಮ್ಮ ಕುಟುಂಬದ ಸದಸ್ಯರನ್ನು ಕೊಂದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅಮಾಯಕರು ಬಲಿಯಾಗಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಉದ್ರಿಕ್ತರನ್ನು ಸಮಾದಾನ ಮಾಡಲು ಹರಸಾಹಸ ಪಟ್ಟರು. ಅಲ್ಲದೆ, ಆಕ್ರೋಶಗೊಂಡಿದ್ದ ಜನರ ನಡುವೆ ಚಿರತೆಯನ್ನು ಸುರಕ್ಷಿತವಾಗಿ ಸಾಗಿಸುವುದೇ ದೊಡ್ಡ ಸಾಹಸವಾಗಿತ್ತು. ಕೊನೆಗೂ ಜನರ ಮನವೊಲಿಸಿ ಸೆರೆ ಸಿಕ್ಕ ಚಿರತೆಯನ್ನು ತಿ.ನರಸೀಪುರದಿಂದ ಸುರಕ್ಷಿತವಾಗಿ ಬನ್ನೇರುಘಟಕ್ಕೆ ಕೊಂಡೊಯ್ಯಲಾಯಿತು.


ಗುಂಡಿಕ್ಕಲು ಆದೇಶಿಸಲಾಗಿತ್ತು: ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕಳೆದ 3 ತಿಂಗಳಿಂದ ನಾಲ್ಕು ಪ್ರಕರಣದಲ್ಲಿ ಒಂದೇ ಚಿರತೆ ಮೂವರನ್ನು ಕೊಂದಿರುವ ಶಂಕೆ ದಟ್ಟವಾಗಿತ್ತು. 2022ರ ಅ.31ರಂದು ತಾಲೂಕಿನ ಎಂ.ಎಲ್.ಹುಂಡಿಯಲ್ಲಿ ಚಿರತೆಗೆ ಬಲಿಯಾದ 20 ವರ್ಷದ ಮಂಜುನಾಥ್ ಪ್ರಕರಣ ಹೊರತುಪಡಿಸಿದರೆ, ಡಿ.1ರಂದು ಎಂ.ಕೆಬ್ಬೆಹುಂಡಿ ಮೇಘನ (22), 2023ರ ಜ.20ರಂದು ಕನ್ನನಾಯಕನ ಹಳ್ಳಿಯ ಸಿದ್ದಮ್ಮ(60), ಜ.21ರಂದು ಹೊರಳಹಳ್ಳಿ ಗ್ರಾಮದ 11 ವರ್ಷದ ಬಾಲಕ ಜಯಂತ್ ಮೇಲೆ ದಾಳಿ ನಡೆಸಿದ ಚಿರತೆ ಒಂದೇ ಆಗಿರುವುದನ್ನು ತಜ್ಞರು ದೃಢಪಡಿಸಿದ್ದರು. ಈ ಮೂರು ಪ್ರಕರಣಗಳು ಒಂದೂವರೆ ಕಿ.ಮಿ. ಅಂತರದಲ್ಲೇ ನಡೆದಿರುವುದು ಒಂದೇ ಚಿರತೆಯ ಕೃತ್ಯವನ್ನು ಸಾಬೀತು ಮಾಡಿತ್ತು. ಈ ಹಿನ್ನೆಲೆಯಲ್ಲಿ ಅನಿವಾರ್ಯವಾದಲ್ಲಿ ಕಂಡಲ್ಲಿ ಗುಂಡಿಕ್ಕುವಂತೆ ಆದೇಶಿಸಲಾಗಿತ್ತು. ಆದರೂ, ಸುರಕ್ಷಿತವಾಗಿ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಕಟ್ಟೆಚ್ಚರ: ತಿ.ನರಸೀಪುರ ತಾಲೂಕಿನ ಹೊರಳಹಳ್ಳಿ ಗ್ರಾಮದ ಜಮೀನಲ್ಲಿ ಚಿರತೆ ಬೋನ್‌ಗೆ ಬಿದ್ದಿದ್ದರೂ ಜನರಲ್ಲಿ ಮಾತ್ರ ಆತಂಕ ಮುಂದುವರೆದಿದೆ. ಚಿರತೆ ದಾಳಿಗೆ ಒಂದೇ ತಾಲೂಕಲ್ಲಿ ನಾಲ್ವರು ಬಲಿಯಾಗಿರುವ ಆತಂಕದಿಂದ ಜನ ಹೊರ ಬಂದಿಲ್ಲ. ಈ ಭಾಗದಲ್ಲಿ ಇನ್ನಷ್ಟು ಚಿರತೆಗಳಿದ್ದು, ಅವುಗಳನ್ನು ಸೆರೆ ಹಿಡಿದು, ಸ್ಥಳಾಂತರಿಸುವಂತೆ ಒತ್ತಾಯಿಸಿದ್ದಾರೆ. ಜನರ ಒತ್ತಾಯದ ಮೇರೆಗೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಇಡಲಾಗಿರುವ ಬೋನ್‌ಗಳನ್ನು ಇನ್ನಷ್ಟು ದಿನ ಅಲ್ಲಿಯೇ ಇಡಲು ನಿರ್ಧರಿಸಲಾಗಿದೆ. ಅಲ್ಲದೆ, ವಿವಿಧ ಗ್ರಾಮಗಳಲ್ಲಿ ಕಟ್ಟೆಚ್ಚರ ವಹಿಸಲು ಸಿಬ್ಬಂದಿಗಳಿಗೆ ಸೂಚನೆ ನೀಡಲಾಗಿದೆ. ಚಿರತೆ ಹಾವಳಿ ಸಂಬಂಧ ಸುತ್ತಮುತ್ತಲಿನ ಗ್ರಾಮಸ್ಥರಿಂದ ದೂರು ಬಂದರೆ ತಕ್ಷಣ ಸ್ಪಂದಿಸುವಂತೆ ಸೂಚನೆ ನೀಡಲಾಗಿದೆ.

ಪ್ರಯೋಗಾಲಯಕ್ಕೆ ಸ್ಯಾಂಪಲ್: ಸೆರೆ ಸಿಕ್ಕಿರುವ ಚಿರತೆ ಬಾಲಕ ಸೇರಿದಂತೆ ಮೂವರ ಬಲಿ ಪಡೆದ ಚಿರತೆ ಎಂದು ದೃಢಪಟ್ಟಿದ್ದರೂ, ವೈಜ್ಞಾನಿಕವಾಗಿ ಅದನ್ನು ಖಚಿತಪಡಿಸಿಕೊಳ್ಳಲು ಅರಣ್ಯ ಇಲಾಖೆ ಮುಂದಾಗಿದೆ. ಸೆರೆ ಸಿಕ್ಕ ಚಿರತೆಯ ಮಲ–ಮೂತ್ರದ ಸ್ಯಾಂಪಲ್ ಅನ್ನು ಪ್ರಯೋಗಾಲಯಕ್ಕೆ ರವಾನಿಸಲಾಗಿದ್ದು, ಅದರಲ್ಲಿ ಮಾನವನ ಮಾಂಸದ ಅಂಶ ಇದೆಯೇ ಎಂದು ಖಚಿತಪಡಿಸಿಕೊಳ್ಳಲು ಅರಣ್ಯ ಇಲಾಖೆ ನಿರ್ಧರಿಸಿದೆ. ಇದರಿಂದ ಸೆರೆ ಸಿಕ್ಕಿರುವ ಚಿರತೆ ಬಗ್ಗೆ ಜನರಲ್ಲಿ ಮೂಡಿರುವ ಅನುಮಾನಕ್ಕೆ ತೆರೆ ಎಳೆಯಲು ಸಹಕಾರಿಯಾಗಲಿದೆ.

ಇಂದು ಫೀಲ್ಡ್ ಮಾರ್ಷಲ್ ಕಾರ್ಯಪ್ಪರ 124ನೇ ಜನ್ಮದಿನ ಆಚರಣೆ

ಮೈಸೂರು, ಜ.27– ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ



ಶನಿವಾರ(ಜ.28) ಬೆಳಗ್ಗೆ 8.30ಕ್ಕೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ 124ನೇ ಜನ್ಮದಿನ ಆಚರಣೆ ಹಮ್ಮಿಕೊಳ್ಳಲಾಗಿದೆ. ಕೊಡವ ಸಮಾಜ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ಸಹಯೋಗದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರು, ಮಾಜಿ ಶಾಸಕ ವಾಸು, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಮಾಜಿ ಮೇಯರ್‌ಗಳಾದ ಎಂ.ಜೆ.ರವಿಕುಮಾರ್, ಶ್ರೀಕಂಠಯ್ಯ, ಪಾಲಿಕೆ ಸದಸ್ಯರಾದ ಎಂ.ಯು.ಸುಬ್ಬಯ್ಯ, ಪ್ರಮಿಳಾ ಭರತ್, ಕೊಡವ ಸಮಾಜದ ಅಧ್ಯಕ್ಷರಾದ ಮೇಚಂಡ ಶಶಿ ಪೊನ್ನಪ್ಪ, ಕೊಡವ ಸಮಾಜ ಕಲ್ಚರಲ್–ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಡ ಡಿ.ಮುತ್ತಪ್ಪ, ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ಅಧ್ಯಕ್ಷ ನಾಯಕಂಡ ತಿಮ್ಮಯ್ಯ ಹಾಗೂ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಲಿದ್ದಾರೆ.

ಇಂದು ಪ.ಮಲ್ಲೇಶರಿಗೆ ನುಡಿ–ನಮನ

ಮೈಸೂರುಮ ಜ.27– ಮೈಸೂರು ನಗರ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಹಿರಿಯ ಸಮಾಜವಾದಿ ಹಾಗೂ ಕನ್ನಡಪರ ಹೋರಾಟಗಾರ ದಿವಂಗತ ಪ.ಮಲ್ಲೇಶ್ ಅವರಿಗೆ ನುಡಿ–ನಮನ ಕಾರ್ಯಕ್ರಮವನ್ನು ವಿಜಯನಗರ ಒಂದನೇ ಹಂತದ ಜಿಲ್ಲಾ ಸಾಹಿತ್ಯ ಭವನದಲ್ಲಿ ಶನಿವಾರ(ಜ.28) ಮಧ್ಯಾಹ್ನ 12ಕ್ಕೆ ಏರ್ಪಡಿಸಲಾಗಿದೆ. ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಸಾಹಿತಿ ಕಾತಾ ಚಿಕ್ಕಣ್ಣ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮು, ಹಿರಿಯ ಕನ್ನಡಪರ ಹೋರಾಟಗಾರ ಸಾ.ರಾ.ಸುದರ್ಶನ್, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್(ಜನ್ನಿ), ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಮೋಹನ್‌ಕುಮಾರ್ ಗೌಡ ನುಡಿನಮನ ಸಲ್ಲಿಸಲಿದ್ದು, ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ.

ನಾಳೆ ಪ್ರಗತಿಪರ ಒಕ್ಕೂಟದಿಂದ ನುಡಿ–ನಮನ

ಮೈಸೂರು, ಜ.27– ಮೈಸೂರಿನ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಜ.29ರಂದು ಹಿರಿಯ ಸಮಾಜವಾದಿ ಪ.ಮಲ್ಲೇಶ್‌ರಿಗೆ ನುಡಿನಮನ ಹಮ್ಮಿಕೊಳ್ಳಲಾಗಿದೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರಗತಿಪರ ಚಿಂತಕ ಪ್ರೊ.ಕಾಳಚನ್ನೇಗೌಡ, ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಸಾಹಿತಿ ದೇವನೂರು ಮಹಾದೇವ, ಪ್ರೊ.ರವಿವರ್ಮ ಕುಮಾರ್, ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್, ಶಬೀರ್, ಪ್ರೊ.ಕಾಳೇಗೌಡ ನಾಗವಾರ, ಕೃಷ್ಣಪ್ರಸಾದ್ ಮಾಯಸಂದ್ರ, ಪ್ರಸನ್ನ ಹೆಗ್ಗೋಡು, ಬೆಟ್ಟಯ್ಯ ಕೋಟೆ, ರಶ್ಮಿಕೋಟಿ ಸೇರಿದಂತೆ ಅನೇಕ ಪ್ರಗತಿಪರರು ಪ.ಮಲ್ಲೇಶ್ ಕುರಿತು ಮಾತನಾಡಲಿದ್ದು, ಹೊರೆಯಾಲ ದೊರೆಸ್ವಾಮಿ, ಸಂತೋಷ್ ಕೌಲಗಿ, ನಾ.ದಿವಾಕರ್, ಪುರುಷೋತ್ತಮ್, ಬಡಗಲಪುರ ನಾಗೇಂದ್ರ, ಪ್ರೊ.ಶಿವಪ್ಪ, ಹೊಸಕೋಟೆ ಬಸವರಾಜು, ಉಗ್ರನರಸಿಂಹೇಗೌಡ, ಈ.ಧನಂಜಯ ಎಲಿಯೂರು, ಕೆ.ಆರ್.ಗೋಪಾಲಕೃಷ್ಣ, ಡಾ.ಹರೀಶ್‌ಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ. ಇದೇ ವೇಳೆ ಪ.ಮಲ್ಲೇಶ್ ಅವರ ಹೋರಾಟ ಕುರಿತು ಪ್ರೊ.ರವಿಕುಮಾರ್ ಸಿದ್ಧಪಡಿಸಿರುವ 'ಸಾಕ್ಷ್ಯಚಿತ್ರ' ಪ್ರದರ್ಶಿಸಲಾಗುವುದು ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಚಿಂತಕರಾದ ಉಗ್ರನರಸಿಂಹೇಗೌಡ, ಹೊಸಕೋಟೆ ಬಸವರಾಜು, ಗೋಪಾಲ್, ಡಾ.ಹರೀಶ್, ಧನಂಜಯ ಎಲಿಯೂರು, ಶಂಭುಲಿಂಗಸ್ವಾಮಿ, ಚಂದ್ರಶೇಖರ್ ಮೇಟಿ ಮತ್ತಿತರರಿದ್ದರು.

ಸರ ಕದ್ದ ಖದೀಮರು

ತಿ.ನರಸೀಪುರ, ಜ.27–ಸಾಮಾನು ಖರೀದಿಸುವ ನೆಪದಲ್ಲಿ ಖದೀಮರು ತರಕಾರಿ ಅಂಗಡಿ ಮಾಲೀಕಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ತಿ.ನರಸೀಪುರದ ಕೆ.ಹೆಚ್.ಬಿ. ಕಾಲೋನಿಯಲ್ಲಿ ನಡೆದಿದೆ. ಇಲ್ಲಿನ ತರಕಾರಿ ಅಂಗಡಿ ಮಾಲೀಕಿ ಮಹದೇವಿ(61) ಸರ ಕಳೆದುಕೊಂಡವರಾಗಿದ್ದು, ಇವರು ಜ.25ರಂದು ಬೆಳಗ್ಗೆ 9.15ರಲ್ಲಿ ತಮ್ಮ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಟೊಮೊಟೋ ಖರೀದಿಸಿ, 500 ರೂ. ಮುಖಬೆಲೆಯ ನೋಟನ್ನು ಕೊಟ್ಟು ಚಿಲ್ಲರೆ ಪಡೆದು ಸ್ವಲ್ಪ ದೂರ ಹೋಗಿದ್ದಾರೆ. ಅವರಲ್ಲಿ ಓರ್ವ ಅನತಿ ದೂರದಲ್ಲಿ ಬೈಕ್ ಸ್ಟಾರ್ಟ್ ಮಾಡಿಕೊಂಡು ನಿಂತಿದ್ದರೆ ಮತ್ತೋರ್ವ ಅಂಗಡಿಗೆ ವಾಪಸ್ ಬಂದು ಅವಲಕ್ಕಿ ಮತ್ತು ಮೆಣಸಿನಕಾಯಿ ಕೊಡುವಂತೆ ಕೇಳಿದ್ದಾನೆ. ಮಹದೇವಿ ಅವರು ಮೆಣಸಿನಕಾಯಿ ಕೊಡುತ್ತಿದ್ದ ವೇಳೆ ಅವರ ಕತ್ತಿನಲ್ಲಿದ್ದ 80 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಓಡಿ ಹೋಗಿ, ಬೈಕ್‌ನಲ್ಲಿ ಹತ್ತಿ ಪರಾರಿಯಾಗಿದ್ದಾನೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕ ಜನಸಂದಣಿ ಇರುವ ಜಿಲ್ಲೆಯ ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮೇಲ್ದರ್ಜೆಗೆ

74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಘೋಷಣೆ





ಮೈಸೂರು, ಜ. 27(ಆರ್‌ಕೆ)– ಹೆಚ್ಚು ಜನಸಂದಣಿ ಇರುವ ಮೈಸೂರು ಜಿಲ್ಲೆಯ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಜಿಲ್ಲಾಡಳಿತದಿಂದ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ 74ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ಪರೇಡ್ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಅತೀ ಹೆಚ್ಚು ರೋಗಿಗಳು ಬರುವ ಹಾಗೂ ಸದಾ ದಟ್ಟಣೆ ಇರುವ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅಗತ್ಯ ಮೂಲ ಸೌಕರ್ಯ ನೀಡಿ ಮೇಲ್ದರ್ಜೆಗೇರಿಸಲಾಗುವುದು ಎಂದರು. 2022–23ನೇ ಸಾಲಿನಲ್ಲಿ 6 ನಮ್ಮ ಕ್ಲಿನಿಕ್‌ಗಳು ಮಂಜೂರಾಗಿದ್ದು, ಆ ಪೈಕಿ 5 ಕಾರ್ಯಾರಂಭ ಮಾಡಿವೆ. ಉಳಿದ ಒಂದು ಆರಂಭವಾಗಬೇಕಿದೆ. ಈಗಾಗಲೇ 25 ಕೇಂದ್ರಗಳಿಗೆ ತಲಾ 20 ಲಕ್ಷ ರೂ.ಗಳ ವೆಚ್ಚದಲ್ಲಿ ಅಮೃತ ಆರೋಗ್ಯ ಯೋಜನೆಯಡಿ ಮೂಲ ಸೌಲಭ್ಯ ನೀಡಿ ಉನ್ನತೀಕರಿಸಲಾಗಿದೆ ಎಂದು ತಿಳಿಸಿದರು.

ಮೈಸೂರು–ಬೆಂಗಳೂರು ಹೆದ್ದಾರಿ ಪ್ರಗತಿಯಲ್ಲಿದ್ದು, ಈಗಾಗಲೇ ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಬೈಪಾಸ್‌ಗಳು ಮುಕ್ತಗೊಂಡಿದ್ದು, 90 ನಿಮಿಷಗಳಲ್ಲಿ ಎರಡೂ ನಗರಗಳಿಗೆ ತಲುಪಬಹುದಾಗಿದೆ ಎಂದ ಸಚಿವರು, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸುವ ಕಾರ್ಯ ಆರಂಭವಾಗಿದೆಯಲ್ಲದೆ, ಸ್ವಂತ ಮನೆಗಳಿಲ್ಲದವರನ್ನು ಗುರ್ತಿಸಿ ಮನೆ ನೀಡಲು ಯೋಜನೆ ರೂಪಿಸಿದೆ ಎಂದರು. 401 ಕೆರೆಗಳನ್ನು ಉದ್ಯೋಗ ಖಾತರಿ ಯೋಜನೆಯಡಿ ಅಭಿವೃದ್ಧಿಗೊಳಿಸಲು ಕ್ರಮ ವಹಿಸಲಾಗಿದೆ. ಈಗಾಗಲೇ 190 ಕೆರೆಗಳನ್ನು ಪುನರುಜ್ಜೀವನಗೊಳಿಸಲಾಗಿದೆ. ಮಾರ್ಚ್ ಅಂತ್ಯದೊಳಗೆ ಉಳಿದ ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಸ್ವಚ್ಛ ಭಾರತ್ ಮಿಷನ್‌ನಲ್ಲಿ 3,95,807 ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ 4,373 ಶೌಚಾಲಯ ನಿರ್ಮಿಸುವ ಗುರಿ ಇದೆ ಎಂದು ಸೋಮಶೇಖರ್ ಇದೇ ವೇಳೆ ನುಡಿದರು. ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಗೆ 2022–23ನೇ ಸಾಲಿನಲ್ಲಿ 265 ವಿವೇಕ ಶಾಲಾ ಕೊಠಡಿ ಮಂಜೂರಾಗಿದ್ದು, 39.75 ಕೋಟಿ ರೂ. ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದೆ. ಸಮಾನತೆ, ಸಹಬಾಳ್ವೆ, ಸಾಮಾಜಿಕ ನ್ಯಾಯ ಪರಿಕಲ್ಪನೆಯಡಿ ನಮ್ಮ ಸರ್ಕಾರ ಕಾರ್ಯಕ್ರಮ ರೂಪಿಸಿದೆ. ಡಾ.ಬಿ.ಆರ್. ಅಂಬೇಡ್ಕರ್ ಹೇಳಿದಂತೆ ನ್ಯಾಯವೆಂದರೆ ಸ್ವಾತಂತ್ರ್ಯ, ಸೌಹಾರ್ದ ಪರಿಕಲ್ಪನೆಯನ್ನು ಸಾಕಾರಗೊಳಿಸುವುದೇ ನಮ್ಮ ಧ್ಯೇಯ ಎಂದು ಅವರು ನುಡಿದರು.

ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ಮೈಲ್ಯಾಕ್ ಅಧ್ಯಕ್ಷ ಆರ್. ರಘು ಕೌಟಿಲ್ಯ, ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ. ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಸಿಇಓ ಬಿ.ಆರ್. ಪೂರ್ಣಿಮಾ, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಸೇರಿದಂತೆ ಹಲವು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗಮನ ಸೆಳೆದ ಪಥಸಂಚಲನ, ಶಾಲಾ ಮಕ್ಕಳ ನೃತ್ಯ ಪ್ರದರ್ಶನ





ಮೈಸೂರು, ಜ.27(ಆರ್‌ಕೆ)– ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಗುರುವಾರ ನಡೆದ 74ನೇ ಗಣರಾಜ್ಯೋತ್ಸವದಲ್ಲಿ ಪೊಲೀಸ್ ತುಕಡಿಗಳ ಪಥಸಂಚಲನ ಎಲ್ಲರ ಗಮನ ಸೆಳೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿದರು. ಪ್ರಧಾನ ದಳಪತಿಯಾದ ಅಶ್ವಾರೋಹಿ ದಳದ ಎಸಿಪಿ ಕೆ.ಎನ್.ಸುರೇಶ್ ನೇತೃತ್ವದಲ್ಲಿ ಅಶ್ವಾರೋಹಿ ದಳ, ಕೆಎಸ್‌ಆರ್‌ಪಿ, ಸಿಎಆರ್, ಡಿಎಆರ್, ಮೈಸೂರು ನಗರದ ಸಿವಿಲ್ ಗೃಹರಕ್ಷಕ ದಳ, ಅಬಕಾರಿ, ಅರಣ್ಯ, ಅಗ್ನಿಶಾಮಕ ದಳದ ಶಿಸ್ತುಬದ್ಧ ಪರೇಡ್ ಪ್ರದರ್ಶಿಸಿದವು.

ಎನ್‌ಸಿಸಿ, ನೌಕಾದಳ, ವಾಯುದಳ, ಭೂ ಸೇನೆ ತುಕಡಿ, ಅಮೃತ ವಿದ್ಯಾಲಯ, ಪೊಲೀಸ್ ಪಬ್ಲಿಕ್ ಶಾಲೆ, ನವೋದಯ ಶಾಲೆ, ಸ್ಕೌಟ್ಸ್ ಅಂಡ್ ಗೈಡ್ಸ್, ಭಾರತೀಯ ಸೇವಾದಳ, ಪೂರ್ಣ ಚೇತನ ಪಬ್ಲಿಕ್ ಶಾಲಾ ಮಕ್ಕಳ ಪಥಸಂಚಲನ ಎಲ್ಲರ ಗಮನ ಸೆಳೆದವು. ನಂತರ ದೇಶಭಕ್ತಿ ಸಾರುವ ಶಾಲಾ ಮಕ್ಕಳ ನೃತ್ಯ ಪ್ರದರ್ಶನಕ್ಕೆ ಪ್ರೇಕ್ಷಕರು ಮೂಕವಿಸ್ಮಿತರಾದರು.

ಬಹುಮಾನ ವಿತರಣೆ: ಗಣರಾಜ್ಯೋತ್ಸವದಲ್ಲಿ ಅತ್ಯುತ್ತಮ ಪಥಸಂಚಲನ ನಡೆಸಿದ ಕೆಎಸ್‌ಆರ್‌ಪಿ ತುಕಡಿಯ ರುದ್ರಮುನಿ (ಪ್ರಥಮ), ದೇವರಾಜ ಉಪ ವಿಭಾಗದ ಪ್ರವೀಣ್ ಕುಮಾರ್ (ದ್ವಿತೀಯ) ಹಾಗೂ ಕೆಎಸ್‌ಆರ್‌ಪಿ ಚೇತನ (ತೃತೀಯ) ಬಹುಮಾನ ಪಡೆದರು. ಸಶಸ್ತ್ರ ರಹಿತ ವಿಭಾಗದಲ್ಲಿ ಎನ್‌ಸಿಸಿ ವಾಯು ದಳದ ಟಿ.ವಿ. ಋಷಿ (ಪ್ರ), ನೌಕಾದಳದ ಕೆ.ಆರ್. ಅನಿರುದ್ (ದ್ವಿ), ಭೂ ಸೇನೆಯ ಲೇಖನ (ತೃ), ಶಾಲಾ ವಿಭಾಗದಲ್ಲಿ ನವೋದಯ ಶಾಲೆಯ ಗೀತಾ (ಪ್ರ), ಭಾರತೀಯ ಶಾಲೆಯ ಸೇವಾ ದಳದ ಅಶ್ವಿನಿ (ದ್ವಿ), ಅಮೃತ ವಿದ್ಯಾಲಯದ ಎಂ.ಪ್ರತೀಕ್ಷಾ (ತೃ) ಅವರು ಬಹುಮಾನ ಪಡೆದುಕೊಂಡರು. ಸಂಜೆ ಕರ್ನಾಟಕ ಕಲಾ ಮಂದಿರದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿವಿಧ ಶಾಲಾ ಮಕ್ಕಳು ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆವರಣದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಅಧ್ಯಕ್ಷರಾದ ಯಶಸ್ವಿ ಎಸ್. ಸೋಮಶೇಖರ್ ಧ್ವಜಾರೋಹಣ ನೇರವೇರಿಸಿ, ಸಂದೇಶ ನೀಡಿದರು. ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಮುಡಾ ಸದಸ್ಯರು ಹಾಗು ಅಧಿಕಾರಿವರ್ಗ ಇನ್ನಿತರರು ಉಪಸ್ಥಿತರಿದ್ದರು



ಮೈಸೂರು ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದಲ್ಲಿ 74ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ನಿಲಯದ ಅಧ್ಯಕ್ಷ ಎಂ.ಪ್ರಫುಲ್ ಕುಮಾರ್ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಆಶಾ ಮಂಜುನಾಥ್, ನಿಲಯದ ಕಾರ್ಯದರ್ಶಿ ಎಂ.ಪಾಟೀಲ್, ಮಂಗಳಗೌರಿ, ಪ್ರಸಾದ್, ಪುಟ್ಟರಾಜು, ಶಂಕರ್ ನಾರಾಯಣ್, ಸುಭಾಷ್, ಲೋಕೇಶ್, ಜ್ಯೋತಿ ಮುಂತಾದವರು ಹಾಜರಿದ್ದರು.



ಮೈಸೂರು ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿ ರಾಯಣ್ಣ ಬಲಿದಾನ ದಿವಸ ಮತ್ತು ಗಣರಾಜ್ಯೋತ್ಸವವನ್ನು ಆಚರಿಸಿ, ಕನಕ ಅಂಚೆ ಬಳಗದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಅಂಚೆ ಸಹಾಯಕ ರಾಜು ಕಾಳೇಶ್ವರ, ಪಿ.ಬಸವರಾಜು, ಮಹದೇವ್, ಪ್ರದೀಪ್, ಮಂಜುನಾಥ, ವಿ.ಪ್ರಕಾಶ ಇಟ್ಟಿಗೆಗೂಡು, ಸಿ.ಮಂಜುನಾಥ್, ಹೆಚ್.ಎಲ್. ಕೆಂಡಗಣ್ಣ ಸ್ವಾಮಿ, ಚಂದ್ರಶೇಖರ, ಮರೀಗೌಡ ಹಾಗೂ ಇನ್ನಿತರರಿದ್ದರು.



ಮೈಸೂರಿನ ವಿವೇಕಾ ಸೋಷಿಯಲ್ ಕ್ಲಬ್‌ನಲ್ಲಿ 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ವೇಳೆ ನಗರ ಪಾಲಿಕೆ ಸದಸ್ಯೆ ಚಂಪಕ ಮಾಲಿನಿ, ಸಾಹಿತಿ ಹಾ.ತಿ. ಕೃಷ್ಣೇಗೌಡ, ಕ್ಲಬ್ ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಮತ್ತು ಇತರ ಪದಾಧಿಕಾರಿಗಳು ಹಾಜರಿದ್ದರು.



ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಮುಖ್ಯ ಶಿಕ್ಷಕ ಎನ್.ಪಿ. ಸತೀಶ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಶಿಕ್ಷಕರಾದ ಪ್ರಶಾಂತ್, ವಿನುತಾ ಶೇಖರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಡಿ.ಎ.ವಿ ಶಾಲೆಯ ಆವರಣದಲ್ಲಿ 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕರಾದ ಕುಮುದಾ ಶರತ್ ಧ್ವಜಾರೋಹಣಾ ನೆರವೇರಿಸಿದರು. ಶಾಲೆ ಅಧ್ಯಕ್ಷ ಎನ್. ಸಚ್ಚಿದಾನಂದ ಮೂರ್ತಿ, ಕಾರ್ಯದರ್ಶಿಗಳಾದ ಆರ್.ಆನಂದ್, ಸಿ.ಇ.ಓ ಶ್ರೀಮತಿ.ಜಯಶ್ರೀ.ಎಸ್.ಮೂರ್ತಿ, ಉಪಪ್ರಾಂಶುಪಾಲರಾದ ಶ್ರೀಮತಿ ಮಂಗಳ ಮತ್ತಿತರರು ಹಾಜರಿದ್ದರು.

ಜಾರಿಯಲ್ಲಿರುವ ಅಲಿಖಿತ ಸಂವಿಧಾನ: ಸಂಸದ ಶ್ರೀನಿವಾಸಪ್ರಸಾದ್ ಆತಂಕ

ಮೈಸೂರು, ಜ.27(ಆರ್‌ಕೆಬಿ)–ಅಸಮಾನತೆ, ಅಸ್ಪೃಶ್ಯತೆ ಪ್ರಕರಣಗಳು ಹೆಚ್ಚುತ್ತಿವೆ. ಇದೆಲ್ಲವೂ ನಮ್ಮಲ್ಲೂ ಅಲಿಖಿತ ಸಂವಿಧಾನ ಜಾರಿಯಲ್ಲಿರುವ ಪುರಾವೆಗಳು ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಆತಂಕ ವ್ಯಕ್ತಪಡಿಸಿದರು. ಮೈಸೂರಿನ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಸಮಾನತೆ–ಸ್ವಾಭಿಮಾನ–



ಸ್ವಾವಲಂಬನೆ ಪ್ರತಿಷ್ಠಾನ ಮತ್ತು ಸಮಾನತೆ ಪ್ರಕಾಶನ ಗುರುವಾರ ಆಯೋಜಿಸಿದ್ದ 'ಭಾರತ ಸಂವಿಧಾನದ ಆಶಯಗಳು' ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೋಲಾರ ಮತ್ತು ಕೊಪ್ಪಳದಲ್ಲಿ ದಲಿತರಿಗೆ ದಂಡ ಹಾಕಿದ ಪ್ರಕರಣಗಳು ಸಂವಿಧಾನದಲ್ಲಿ ವ್ಯಕ್ತಪಡಿಸಿರುವ ಆಶಯಗಳನ್ನು ಅಣಕಿಸುತ್ತಿಲ್ಲವೇ. ಸಂವಿಧಾನ ಜಾರಿಗೆ ಬಂದು 74 ವರ್ಷಗಳಾದರೂ ಇನ್ನೂ ಸರಿಯಾಗಿ ಅನುಷ್ಠಾನ ಮಾಡಲು ಸಾಧ್ಯವಾಗದೇ ಇರುವುದಕ್ಕೆ ಇವು ಸಾಕ್ಷ್ಯಗಳಲ್ಲವೇ ಎಂದು ಪ್ರಶ್ನಿಸಿದರು. ಸಂವಿಧಾನವನ್ನು ಪುನರ್ ಪರಿಶೀಲಿಸುವ ವಾಜಪೇಯಿ ಸರ್ಕಾರದ ನಿರ್ಧಾರ ಸೂಕ್ತವಾಗಿತ್ತು. ಆಚರಣೆಯಲ್ಲಿ ತಪ್ಪಾಗುತ್ತಿದ್ದರೆ ಸರಿಪಡಿಸಲು ಅದೂ ಒಂದು ಮಾರ್ಗ. ಮಾನವೀಯ ಹೃದಯದೊಂದಿಗೆ ಈಗಲೂ ಮಾಡಲಿ. ಆದರೆ, ಮಹಾ ಆಶಯಗಳು ನಾಶವಾಗಬಾರದು ಎಂದರು. ಮೈಸೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಕೃಷ್ಣ ಹೊಂಬಾಳ್ ಮಾತನಾಡಿದರು. ಶೇಷಣ್ಣ ಮತ್ತು ತಂಡದವರು ಸ್ಫೂರ್ತಿಗೀತೆ ಹಾಡಿದರು.

ಪ್ರತಿಷ್ಠಾನದ ಗೌರವಾಧ್ಯಕ್ಷ ಪ್ರೊ.ನೀಲಗಿರಿ ತಳವಾರ್, ಕಾರ್ಯದರ್ಶಿ ಮುಳ್ಳೂರು ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ದೆಹಲಿ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ ಪಥ ಸಂಚಲನ


ಮೈಸೂರು, ಜ.27(ಆರ್‌ಕೆಬಿ)– ಮೈಸೂರಿನ ದೆಹಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಪ್ರಾಂಶುಪಾಲರಾದ ಮಂಜು ಶರ್ಮಾ ಧ್ವಜಾರೋಹಣ ನೆರವೇರಿಸಿದರು. ನಂತರ ಸಿಎಸ್‌ಎಂ ಪುರಬ್ ಗೌಡ ಮತ್ತು ಗೋಲ್ಡನ್ ಸಾರ್ಜೆಂಟ್ ಕೀರ್ತನಾ ನೇತೃತ್ವದಲ್ಲಿ ಎನ್‌ಸಿಸಿ ಕೆಡೆಟ್‌ಗಳು ಪಥ ಸಂಚಲನ ನಡೆಸಿದರು.



ಕಳೆದ ನವೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದಿದ್ದ ಅಖಿಲ ಭಾರತ ಥಾಲ್ ಸೈನಿಕ ಶಿಬಿರ. (AITSC) ಸ್ಪರ್ಧೆಯಲ್ಲಿ ಎನ್‌ಸಿಸಿ ಕೆಡೆಟ್‌ಗಳು ಪದಕಗಳನ್ನು ಗೆದ್ದಿದ್ದರು. ಶೂಟಿಂಗ್‌ನಲ್ಲಿ ಕಂಪನಿ ಸಾರ್ಜೆಂಟ್ ಮೇಜರ್ ಪುರಬ್ ಗೌಡ– ಕಂಚಿನ ಪದಕ, ಸಾರ್ಜೆಂಟ್ ಕೀರ್ತನಾ ಚಿನ್ನದ ಪದಕ ಮತ್ತು ಬೆಂಗಳೂರಿನಲ್ಲಿ ನಡೆದ ಪೂರ್ವ ಆರ್‌ಡಿಸಿಯಲ್ಲಿ ಎಲ್‌ಸಿಪಿಎಲ್ ಜೋಶುವಾ ಇಯಾನ್ ಪೌ ಯು ಎರಡನೇ ಸ್ಥಾನ ಪಡೆದ ಇವರೆಲ್ಲರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಅಂತಾರಾಷ್ಟ್ರೀಯ ಜಾಂಬೂರಿಯಲ್ಲಿ ಭಾಗವಹಿಸಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳನ್ನು, ಮಾರ್ಗದರ್ಶಕರೊಂದಿಗೆ ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ರಾಷ್ಟ್ರದ ಏಕತೆಯಲ್ಲಿ ವೈವಿಧ್ಯತೆಯ ಒಂದು ನೋಟವನ್ನು ನೀಡುವ ಅದ್ಭುತ ಹಾಡು ಮತ್ತು ನೃತ್ಯ ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲಿ ದೆಹಲಿ ಪಬ್ಲಿಕ್ ಶಾಲೆಯ ಎಎನ್‌ಓ ಎಂ.ಮಮತಾ ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರಿನ ಹೆಬ್ಬಾಳದ ಹೊರ ವರ್ತುಲ ರಸ್ತೆಯಲ್ಲಿರುವ ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಮತ್ತು ಪದವಿ ಕಾಲೇಜಿನಲ್ಲಿ 74ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಡಾ.ಕೆ. ಕಾಳಚೆನ್ನೇಗೌಡ, ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಕೆ. ಸೌಮ್ಯ ಈರಪ್ಪ, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎನ್. ಅರ್ಚನಾ ಸ್ವಾಮಿ, ಕಾಲೇಜಿನ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



74ನೇ ಗಣರಾಜ್ಯೋತ್ಸವದ ಪ್ರಯುಕ್ತ ಹುಯಿಲಾಳು ಗ್ರಾಮದ ಶ್ರೀ ಮನೆಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಮೈಸೂರು ಪುರಭವನದ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ಮೈಸೂರು ತಾಲೂಕು ಪ್ರಧಾನ ಕಾರ್ಯದರ್ಶಿ ಮತ್ತು ಗ್ರಾಪಂ ಸದಸ್ಯರಾದ ಬೊಮ್ಮೇನಹಳ್ಳಿ ಪಿ.ಮಹದೇವ, ಸಾಹುಕಾರ ಹುಂಡಿ ಸಿ.ಗೋಪಾಲ್ ಗೌಡ, ಜಟ್ಟಿಹುಂಡಿ ರಾಚಪ್ಪ, ಅಶೋಕ್‌ಗೌಡ ಮುಂತಾದವರು ಉಪಸ್ಥಿತರಿದ್ದರು.

ಅಸಮಾನತೆ ತೊಲಗಿಸಲು ಡಾ.ಅಂಬೇಡ್ಕರ್ ಅವಿರತ ಪ್ರಯತ್ನ

ಅಶೋಕಪುರಂನ ಡಾ.ಅಂಬೇಡ್ಕರ್ ಉದ್ಯಾನವನದಲ್ಲಿ ಗಣರಾಜ್ಯೋತ್ಸವ ಆಚರಣೆ

ಮೈಸೂರು, ಜ. 27– ದೇಶದಲ್ಲಿ ತುಂಬಿ ತುಳುಕುತ್ತಿದ್ದ ಅಸಮಾನತೆಯನ್ನು ಹೋಗಲಾಡಿಸಲು ಡಾ.ಬಿ.ಆರ್. ಅಂಬೇಡ್ಕರ್, ಸಂವಿಧಾನ ರಚಿಸುವ ಮೂಲಕ ಅದ್ಭುತ ಕೆಲಸ ಮಾಡಿದರು ಎಂದು ಸಾಹಿತಿ ಪ್ರೊ.ಕೆ.ಎಸ್. ಭಗವಾನ್ ಬಣ್ಣಿಸಿದರು.

ಅಶೋಕಪುರಂ ಅಭಿಮಾನಿಗಳ ಬಳಗವು ಅಶೋಕಪುರಂ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಗುರುವಾರ ಏರ್ಪಡಿಸಿದ್ದ ಸಂವಿಧಾನೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸಂವಿಧಾನ ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತಿತ್ತು ಎಂದರು.

ಅಂಬೇಡ್ಕರ್ ಅವರು ಸ್ವಾಭಿಮಾನಿ, ಹಠ, ಛಲದಿಂದ ಬೆಳೆದವರು. ಅವರಷ್ಟು ದೊಡ್ಡ ವಿದ್ವಾಂಸ ದೇಶದಲ್ಲಿ ಇಲ್ಲ. ಅಮೆರಿಕಾದ ಕೊಲಂಬಿಯಾ ವಿವಿಯ ಪ್ರಕಾರವೂ ಇಡೀ ವಿಶ್ವದಲ್ಲಿ ಅಂಬೇಡ್ಕರ್ ಅವರು ಜ್ಞಾನದಲ್ಲಿ ಮೊದಲ ಸ್ಥಾನದಲ್ಲಿ ಬರುತ್ತಾರೆ. ಜಾತಿ ಕಾರಣಕ್ಕೆ ಇವತ್ತಿಗೂ ಕೂಡ ತಾರತಮ್ಯ ಮಾಡಲಾಗುತ್ತಿದೆ ಎಂದು ವಿಷಾದಿಸಿದರು. ಪ್ರತಿಯೊಬ್ಬರೂ ಬಾಬಾ ಸಾಹೇಬರ ಬಗ್ಗೆ ಅರಿತುಕೊಳ್ಳಬೇಕು. ಧರ್ಮ, ಅಧರ್ಮದ ವ್ಯತ್ಯಾಸ ತಿಳಿಯಬೇಕು.

ಮುಂಬರುವ ಚುನಾವಣೆಯಲ್ಲಿ ಸಂವಿಧಾನ ವಿರೋಧಿಗಳನ್ನು ಸೋಲಿಸಬೇಕು. ಆ ಮೂಲಕ ಸಂವಿಧಾನ ರಕ್ಷಿಸಬೇಕು ಎಂದು ಅವರು ಹೇಳಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಭಾಷಾವಾರು ಪ್ರಾಂತ್ಯಗಳು ರಚನೆಯಾದ ನ.1 ರಂದು ಗಣರಾಜ್ಯೋತ್ಸವ ದಿನ, ನ.26 ರಂದು ಸಂವಿಧಾನ ಸಮರ್ಪಣಾ ದಿನ, ಜ.26 ರಂದು ಸಂವಿಧಾನ ದಿನ ಆಚರಿಸಿದರೆ ಅರ್ಥ ಬರುತ್ತದೆ ಎಂದರು. ಸಂವಿಧಾನ ಮತ್ತು ಪ್ರಜಾಪ್ರಭುತ್ವ ಎರಡೂ ಉಳಿಯಬೇಕು ಎಂದು ಅವರು ಹೇಳಿದರು. ಇತಿಹಾಸ ತಜ್ಞ ಪ್ರೊ.ಪಿ.ವಿ. ನಂಜರಾಜ ಅರಸ್ ಮಾತನಾಡಿ, ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರಾದರೂ, ಇತ್ತೀಚಿನ ದಿನಗಳಲ್ಲಿ ಕರಡು ರಚನಾ ಸಮಿತಿಯಲ್ಲಿದ್ದ ಬಿ.ಎನ್. ರಾವ್ ಅವರ ಹೆಸರನ್ನು ಬಿಜೆಪಿ– ಆರ್‌ಎಸ್‌ಎಸ್ ಕಾರ್ಯಸೂಚಿಯಂತೆ ಮುನ್ನಲೆಗೆ ತರಲಾಗುತ್ತಿದೆ. ಈ ಬಗ್ಗೆ ಎಚ್ಚೆತ್ತುಕೊಳ್ಳದಿದ್ದರೆ ಹೊಸ ಸಂವಿಧಾನ ರಚಿಸಿ, ಅಂಬೇಡ್ಕರ್ ಅವರ ಹೆಸರನ್ನು ಅಳಿಸಿ ಹಾಕುತ್ತಾರೆ ಎಂದರು. ಅಂಕಣಕಾರ ಬನ್ನೂರು ರಾಜು ಮಾತನಾಡಿ, ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ದೇಶದ ಆತ್ಮ ಇದ್ದಂತೆ. ಆತ್ಮಸಾಕ್ಷಿಗೆ ವಿರುದ್ಧವಾಗಿ ಸಂವಿಧಾನ ಹಾಳು ಮಾಡುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಂಬೇಡ್ಕರ್ ಅವರು ಕೇವಲ ಸಂವಿಧಾನ ರಚಿಸಲಿಲ್ಲ. ಪತ್ರಿಕೋದ್ಯಮ, ಸಾಮಾಜಿಕ ಚಳವಳಿ, ಹೋರಾಟ, ರಾಜಕೀಯ ಕ್ಷೇತ್ರಗಳ ಮೂಲಕ ಮಹಿಳೆಯರು, ಕಾರ್ಮಿಕರು, ರೈತರು, ದೀನ ದಲಿತರು, ಶೋಷಿತರ ಪರ ಕೆಲಸ ಮಾಡಿದ್ದಾರೆ ಎಂದರು. ನಗರಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಮುಖಂಡರಾದ ಪದ್ಮ ರಾಜಣ್ಣ, ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್ ಸಂವಿಧಾನ ಪೀಠಿಕೆ ಬೋಧಿಸಿದರು. ಬಳಗದ ಸಿದ್ದಸ್ವಾಮಿ ಪ್ರಾಸ್ತಾವಿಕ ಭಾಷಣ ಮಾಡಿದರು. ಅಶೋಕ ಶಾಲೆಯ ಶಿಕ್ಷಕ ರಮೇಶ್, ಶ್ರೀನಿವಾಸ ಹಾಗೂ ವಿದ್ಯಾರ್ಥಿಗಳು ಗೀತೆಗಳನ್ನು ಹಾಡಿದರು. ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ಹಾಗೂ ಸಿಹಿ ವಿತರಿಸಲಾಯಿತು.





ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಸಮರ್ಥನಂ ವಿಶೇಷ ಮಕ್ಕಳ ಶಾಲೆಯ ಆವರಣದಲ್ಲಿ 74ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಮಾನವ ಸಂಪನ್ಮೂಲ ಅಧಿಕಾರಿ ಗಿರೀಶ್ ಸುಂದ್ರೇಗೌಡ, ಮೈಸೂರು ವಿಭಾಗದ ಮುಖ್ಯಸ್ಥರಾದ ಶಿವರಾಜು, ವಿಶೇಷ ಶಿಕ್ಷಕರಾದ ಭ್ರಮಾರಂಭ, ಪಿ. ಪದ್ಮ, ಹೆಚ್.ವಿದ್ಯಾವತಿ ಪೋಷಕರಾದ ರೇಖಾ, ರಾಘವೇಂದ್ರ, ಪವಿತ್ರ, ಅಂಕಣ್ಣಸ್ವಾಮಿ ಹಾಜರಿದ್ದರು.



ಮೈಸೂರಿನ ಹಿನಕಲ್‌ನಲ್ಲಿರುವ ವಾತ್ಸಲ್ಯ ಸೇವಾಶ್ರಮದಲ್ಲಿ 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಭಾವಚಿತ್ರಕ್ಕೆ ಸಂಸ್ಥಾಪಕ ಅಧ್ಯಕ್ಷ ಎಸ್.ರವಿಕುಮಾರ್ ಪುಷ್ಪಾರ್ಚನೆ ಮಾಡಿದರು. ಚಿತ್ರದಲ್ಲಿ ಕಾರ್ಯದರ್ಶಿ ಹಿರಿಯ ಶುಶ್ರೂಷಕಿ ಶ್ರೀಮತಿ ನಾಗರತ್ನ, ಶ್ರೀಮತಿ ಶಶಿಕಲಾ ಹಾಗೂ ಆಶ್ರಮದ ಹಿರಿಯ ಜೀವಿಗಳನ್ನು ಕಾಣಬಹುದು.

ನಾಡ ಪೆದ ಆಶಾ ಕೊಡವ ಚಿತ್ರಕ್ಕೆ ಅಂತರ್ರಾಷ್ಟ್ರೀಯ ಗ್ರ್ಯಾಂಡ್‌ಗ್ಲೋರಿ ಫಿಲ್ಮ್ ಪ್ರಶಸ್ತಿ

ಮಡಿಕೇರಿ, ಜ.27– ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ 'ನಾಡ ಪೆದ ಆಶಾ' ಕೊಡವ ಚಿತ್ರಕ್ಕೆ 'ಅಂತರ್ರಾಷ್ಟ್ರೀಯ ಗ್ರ್ಯಾಂಡ್ ಗ್ಲೋರಿ ಫಿಲ್ಮ್



ಪ್ರಶಸ್ತಿ' ಲಭಿಸಿದೆ. ಮಣಿಪುರದಲ್ಲಿ ನಡೆದ ಐಜಿಜಿಎಫ್‌ಎ ಇಂಫಾಲಾ ಇಂಡಿಯಾ ಸಿನಿಮೋತ್ಸವದಲ್ಲಿ ಅತ್ಯುತ್ತಮ ಚಲನಚಿತ್ರ, ಅತ್ಯುತ್ತಮ ಪ್ರಾಯೋಗಿಕ ಚಿತ್ರ ಹಾಗೂ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಈ ಚಿತ್ರದ ನಾಯಕ ನಟ ಬೊಳ್ಳಜಿರ ಬಿ.ಅಯ್ಯಪ್ಪ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಲಭಿಸಿದೆ.

ಸಿನಿಮೋತ್ಸವದಲ್ಲಿ 1145 ಚಿತ್ರಗಳು ಪ್ರದರ್ಶನ ಕಂಡಿದ್ದು, ವಿವಿಧ ವಿಭಾಗಗಳಲ್ಲಿ ಆಯ್ಕೆಯಾದ ಚಿತ್ರಗಳಲ್ಲಿ 'ನಾಡ ಪೆದ ಆಶಾ' ಕೂಡ ಒಂದು. ಸ್ತ್ರೀ ಪ್ರಧಾನ ಕಥಾವಸ್ತುವಿನ 'ನಾಡ ಪೆದ ಆಶಾ' 2021ರ ಸೆಪ್ಟೆಂಬರ್ ತಿಂಗಳಿನಲ್ಲಿ ಬಿಡುಗಡೆಗೊಂಡು ಕೊಡಗು ಜಿಲ್ಲೆಯಾದ್ಯಂತ 123 ಯಶಸ್ವಿ ಪ್ರದರ್ಶನಗಳನ್ನು ಕಂಡಿದೆ.

ಮಾ.18 ರಿಂದ ನಾಪೋಕ್ಲುವಿನಲ್ಲಿ ಅಪ್ಪಚೆಟ್ಟೋಳಂಡ ಹಾಕಿ ಹಬ್ಬ

ನಾಪೊಕ್ಲು, ಜ. 27– ಕೊಡವ ಹಾಕಿ ಪಂದ್ಯಾವಳಿ ಕೊಡಗು ಜಿಲ್ಲೆಯಲ್ಲಿಯೇ ಅತೀ ದೊಡ್ಡ ಕ್ರೀಡೆ. ಅಲ್ಲದೆ 'ಕೊಡವ ಹಾಕಿ ನಮ್ಮೆ' ಎಂದು ಪ್ರಸಿದ್ಧಿಯಾಗಿದೆ. ಕೋವಿಡ್ ಸಾಂಕ್ರಾಮಿಕದವರೆಗೆ ಸುಮಾರು 22 ವರ್ಷಗಳಿಂದ ಈ ವಾರ್ಷಿಕ ಹಾಕಿ ಹಬ್ಬ ಅತ್ಯಂತ ವಿಜೃಂಭಣೆಯಿಂದ ನಡೆದುಕೊಂಡು ಬಂದಿದೆ.



ಈ ಬಾರಿ ಕೊಡವ ಹಾಕಿ ಅಕಾಡೆಮಿಯು ಕರ್ನಾಟಕ ಸರ್ಕಾರದ ಸಹಕಾರದೊಂದಿಗೆ ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಮೈದಾನದಲ್ಲಿ ಮಾರ್ಚ್ 18 ರಿಂದ ಏಪ್ರಿಲ್ ಮಧ್ಯದವರೆಗೆ ಅಪ್ಪಚೆಟ್ಟೋಳಂಡ ಹಾಕಿ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ. 2023ರ ಈ ದೊಡ್ಡ ಹಾಕಿ ಪಂದ್ಯಾವಳಿಯ ಆಯೋಜನೆಯ ಜವಾಬ್ದಾರಿಯನ್ನು ಅಪ್ಪಚೆಟ್ಟೋಳಂಡ ಕುಟುಂಬಕ್ಕೆ ನೀಡಲಾಗಿದೆ. ಈ ಹಾಕಿ ಹಬ್ಬವನ್ನು ಹಿಂದೆಂದಿಗಿಂತಲೂ ದೊಡ್ಡದಾಗಿ ಮತ್ತು ವಿಶೇಷವಾಗಿ ಆಚರಿಸಲು ಉದ್ದೇಶಿಸಲಾಗಿದೆ ಎಂದು ಅಪ್ಪಚೆಟ್ಟೋಳಂಡ ಹಾಕಿ ಕಪ್ ಅಕಾಡೆಮಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ಕು ವರ್ಷಗಳ ನಂತರ ಈ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಸುಮಾರು 2 ಲಕ್ಷ ಹಾಕಿ ಪ್ರಿಯರು, ಅಭಿಮಾನಿಗಳು ಪಾಲ್ಗೊಳ್ಳುವುದರೊಂದಿಗೆ ಪಂದ್ಯಾವಳಿಗೆ ಸಮುದಾಯದ ಬೆಂಬಲವು ಹೆಚ್ಚಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಇದರಿಂದಾಗಿ ಈ ಪಂದ್ಯಾವಳಿಯು ಅಂತಾರಾಷ್ಟ್ರೀಯ ಮಾನ್ಯತೆ ಪಡೆಯುವುದರೊಂದಿಗೆ, ಈ ಕ್ರೀಡಾಕೂಟದಲ್ಲಿ ಅತೀ ಹೆಚ್ಚು ತಂಡಗಳು ಭಾಗವಹಿಸುತ್ತಿದ್ದು, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಗಿನ್ನೆಸ್ ವಿಶ್ವ ದಾಖಲೆಯನ್ನು ಮುರಿಯಲಿದೆ.

ಈ ಪಂದ್ಯಾವಳಿ ಆಯೋಜನೆಗೆ ಸುಮಾರು 2 ಕೋಟಿ ರೂ. ವೆಚ್ಚವಾಗಲಿದೆ. ಸ್ಥಳ ಬಾಡಿಗೆ, ಊಟೋಪಚಾರ, ಪರವಾನಗಿ, ಆಸನ ವ್ಯವಸ್ಥೆ ಮತ್ತು ಹೆಚ್ಚಿನ ವೆಚ್ಚಗಳೊಂದಿಗೆ ಸಂಸ್ಥೆಯು ಪ್ರಾಯೋಜಕತ್ವನ್ನು ಬಯಸಿದ್ದು, ಈ ಪಂದ್ಯಾವಳಿಯನ್ನು ಅತೀ ಯಶಸ್ವಿಯಾಗಿ ನಡೆಸುವ ಗುರಿಯನ್ನು ಹೊಂದಿದ್ದು, ಸಮುದಾಯ ಮತ್ತು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಲಾಗಿದೆ.

ಇಂದು ಫೀ.ಮಾ. ಕೆ.ಎಂ.ಕಾರ್ಯಪ್ಪ ಅವರ 124 ನೇ ಜನ್ಮ ದಿನಾಚರಣೆ



ಮಡಿಕೇರಿ, ಜ.27– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ 124 ನೇ ಜನ್ಮ ದಿನಾಚರಣೆಯನ್ನು ಜ.28ರಂದು ಬೆಳಗ್ಗೆ 10.30 ಗಂಟೆಗೆ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆ ಬಳಿ ಆಚರಿಸಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಎಂ.ಪಿ.ಸುಜಾ ಕುಶಾಲಪ್ಪ ಮುಂತಾದವರು ಭಾಗವಹಿಸಲಿದ್ದಾರೆ.

ಇಂದು ಬೆಟ್ಟಗೇರಿಯಲ್ಲಿ ಕನ್ನಡ ಹಬ್ಬ

▸ ಮಡಿಕೇರಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ▸ ದ್ವಾರಗಳ ಉದ್ಘಾಟನೆ, ಸಾಂಸ್ಕೃತಿಕ ಮೆರವಣಿಗೆ, ಸಮ್ಮೇಳನ ಉದ್ಘಾಟನೆ, ಸಾಹಿತ್ಯಗೋಷ್ಠಿ ಸಂಭ್ರಮ



ಮಡಿಕೇರಿ, ಜ.27– ಮಡಿಕೇರಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನ ಜ.28 ರಂದು ಡಾ.ವಿಜಯ್ ಪೂಣಚ್ಚ ತಂಬಂಡ ಅವರ ಸರ್ವಾಧ್ಯಕ್ಷತೆಯಲ್ಲಿ ಬೆಟ್ಟಗೇರಿಯಲ್ಲಿ ನಡೆಯಲಿದ್ದು, ಇದಕ್ಕಾಗಿ ಈಗಾಗಲೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನವೀನ್ ಅಂಬೇಕಲ್, ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಬೆಟ್ಟಗೇರಿ ಉದಯ ವಿದ್ಯಾಸಂಸ್ಥೆಯ ಸಹಕಾರದೊಂದಿಗೆ ಕನ್ನಡದ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದ್ದು, ಅಂದು ಬೆಳಗ್ಗೆ ಉದಯ ವಿದ್ಯಾಸಂಸ್ಥೆಯಲ್ಲಿ ಬೆಟ್ಟಗೇರಿ ಗ್ರಾಪಂ ಅಧ್ಯಕ್ಷ ನಾಪಂಡ ರ್‍ಯಾಲಿ ಮಾದಯ್ಯ ರಾಷ್ಟ್ರ ಧ್ವಜಾರೋಹಣ, ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ಕನ್ನಡ ಸಾಹಿತ್ಯ ಪರಿಷತ್ತು ಧ್ವಜಾರೋಹಣ, ಕಸಾಪ ತಾಲೂಕು ಅಧ್ಯಕ್ಷ ನವೀನ್ ಅಂಬೆಕಲ್ಲು ಕನ್ನಡ ಧ್ವಜಾರೋಹಣ ನೆರವೇರಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ದೊರೆಯಲಿದೆ ಎಂದರು.

ದ್ವಾರಗಳ ಉದ್ಘಾಟನೆ: ಬೆಳಗ್ಗೆ 8.30ಕ್ಕೆ ಏಕಕಾಲಕ್ಕೆ ಗಣ್ಯರ ನೆನಪಿನ ದ್ವಾರ ಉದ್ಘಾಟನೆಯಾಗಲಿದೆ. ಹೊಸೂರು ಜೋಯಪ್ಪ ನೆನಪಿನ ದ್ವಾರವನ್ನು ಡಿಸಿಸಿ ಬ್ಯಾಂಕ್ ನಿವೃತ್ತ ಸಹಾಯಕ ವ್ಯವಸ್ಥಾಪಕ ತೋರೆರ ಎಂ.ಮುದ್ದಯ್ಯ ಅವರು, ಕೆ.ಸಿ.ರಾಮಮೂರ್ತಿ ಮತ್ತು ಚೌರೀರ ಎಂ.ಪೆಮ್ಮಯ್ಯ ನೆನಪಿನ ದ್ವಾರವನ್ನು ಸಾಹಿತಿ ಬೈತಡ್ಕ ಜಾನಕಿ ಬೆಳ್ಯಪ್ಪ, ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ನೆನಪಿನ ದ್ವಾರವನ್ನು, ಬೆಟ್ಟಗೇರಿ ಉದಯ ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷ ಕೊಡಪಾಲು ಎಸ್.ಗಣಪತಿ ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಾಂಸ್ಕೃತಿಕ ಮೆರವಣಿಗೆ: ಬೆಟ್ಟಗೇರಿ ನಾಪೋಕ್ಲು ಕೂಡು ರಸ್ತೆಯಿಂದ ವೇದಿಕೆಯವರೆಗೆ ಸಮ್ಮೇಳನಾಧ್ಯಕ್ಷ ಡಾ.ವಿಜಯ್ ಪೂಣಚ್ಚ ತಂಬಂಡ ಅವರ ಭವ್ಯ ಮೆರವಣಿಗೆ ವಿವಿಧ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಬೆಳಗ್ಗೆ 9.15 ಗಂಟೆಗೆ ಆರಂಭಗೊಳ್ಳಲಿದ್ದು, ಬೆಟ್ಟಗೇರಿ ಉದಯ ವಿದ್ಯಾಸಂಸ್ಥೆಯ ಅಧ್ಯಕ್ಷ ತಳೂರು ಕಿಶೋರ್ ಕುಮಾರ್ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆಂದರು. ಮೆರವಣಿಗೆ ಬಳಿಕ ಫೀ.ಮಾ.ಕೆ.ಎಂ ಕಾರ್ಯಪ್ಪ ಮುಖ್ಯ ದ್ವಾರ, ಪುಸ್ತಕ ಮಳಿಗೆ ಹಾಗೂ ವಿವಿಧ ಒಕ್ಕೂಟಗಳ ಮಳಿಗೆ, ನೀರ್ಕಜೆ ಮಹಾಬಲೇಶ್ವರ ಭಟ್ ಸಭಾಂಗಣ, ಡಾ.ಕೋಡಿ ಕುಶಾಲಪ್ಪ ಗೌಡ ವೇದಿಕೆಯನ್ನು ಗಣ್ಯರು ಉದ್ಘಾಟಿಸಲಿದ್ದಾರೆ ಎಂದರು.

ಸಾಹಿತ್ಯ ಗೋಷ್ಠಿ: ಮಧ್ಯಾಹ್ನ 2 ಗಂಟೆಯಿಂದ 3 ಗಂಟೆವರೆಗೆ ಮೂರು ಸಾಹಿತ್ಯ ಗೋಷ್ಠಿಗಳು 'ಯುವ ಪೀಳಿಗೆ ಮತ್ತು ಸಾಹಿತ್ಯ', 'ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆ' ಮತ್ತು 'ಸಾಹಿತ್ಯ ಕ್ಷೇತ್ರದಲ್ಲಿ ತಂತ್ರಜ್ಞಾನ' ವಿಷಯದ ಮೇಲೆ ನಡೆಯಲಿದೆಯೆಂದು ವಿವರಿಸಿದರು. ಮಧ್ಯಾಹ್ನ 3 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಸೋಮವಾರಪೇಟೆ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪನ್ಯಾಸಕಿ ಶಿವದೇವಿ ಅವನೀಶ್ಚಂದ್ರ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಲಿದೆ. ಬಳಿಕ ಸಂಜೆ 4 ಗಂಟೆಯಿಂದ ಬಹಿರಂಗ ಅಧಿವೇಶನ ನಡೆಯಲಿದ್ದು, ಮಡಿಕೇರಿ ತಾಲೂಕು ಅಧ್ಯಕ್ಷ ನವೀನ್ ಅಂಬೆಕಲ್ಲು ಅಧ್ಯಕ್ಷತೆ ವಹಿಸಲಿದ್ದಾರೆ. ಗೌರವ ಕಾರ್ಯದರ್ಶಿ ಕೆ.ಯು. ರಂಜಿತ್ ನಿರ್ಣಯ ಮಂಡನೆ ಮಾಡಲಿದ್ದಾರೆ. ಇದೇ ಸಂದರ್ಭ ಸಾಹಿತಿ ಬಾರಿಯಂಡ ಆರ್.ಜೋಯಪ್ಪ ಅಧ್ಯಕ್ಷತೆಯಲ್ಲಿ ನಡೆಯುವ ಸನ್ಮಾನ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 14 ಮಂದಿಯನ್ನು ಸನ್ಮಾನಿಸಿ ಗೌರವಿಸಲಾಗುತ್ತದೆಂದು ತಿಳಿಸಿದರು. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಮ್ಮೇಳನಾಧ್ಯಕ್ಷ ಡಾ. ವಿಜಯ್ ಪೂಣಚ್ಚ ತಂಬಂಡ ಆಶಯ ನುಡಿಗಳನ್ನಾಡಲಿದ್ದಾರೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಾಹಿತಿ ಕೆ.ಆರ್.ಗಂಗಾಧರಗೌಡ ಸಮಾರೋಪ ಭಾಷಣ ಮಾಡಲಿದ್ದಾರೆ.

ಸಮ್ಮೇಳನ ಉದ್ಘಾಟನೆ

ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಸಮ್ಮೇಳನದ ಸಭಾ ಕಾರ್ಯಕ್ರಮವನ್ನು ವಿರಾಜಪೇಟೆ ಕ್ಷೇತ್ರದ ಶಾಸಕ ಕೆ.ಜಿ.ಬೋಪಯ್ಯ ಉದ್ಘಾಟಿಸಲಿದ್ದು, ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ.ಕೇಶವ ಕಾಮತ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಸಮ್ಮೇಳನಾಧ್ಯಕ್ಷ ಡಾ. ವಿಜಯ್ ಪೂಣಚ್ಚ ತಂಬಂಡ, ನಿಕಟ ಪೂರ್ವ ಸಮ್ಮೇಳನಾಧ್ಯಕ್ಷ ಸಾಹಿತಿ ಕಿಗ್ಗಾಲು ಗಿರೀಶ್ ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ 2021–22ನೇ ಸಾಲಿನ ಹತ್ತನೇ ತರಗತಿ ಮತ್ತು ಪದವಿ ಪೂರ್ವ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಶೇ.100 ಅಂಕ ಪಡೆದ ತಾಲೂಕಿನ ವಿದ್ಯಾರ್ಥಿಗಳಿಗೆ ಅಭಿನಂದನೆ ಮತ್ತು ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದರು.

ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆಯೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಎಸ್.ಐ.ಮುನೀರ್ ಅಹಮದ್, ಮಡಿಕೇರಿ ತಾಲೂಕು ಗೌರವ ಕಾರ್ಯದರ್ಶಿಗಳಾದ ಕೆ.ಯು.ರಂಜಿತ್, ಕಡ್ಲೇರ ತುಳಸಿ ಮೋಹನ್, ಸಂಘಟನಾ ಕಾರ್ಯದರ್ಶಿ ಪುದಿಯನೆರವನ ರಿತೀಶ್ ಮಾದಯ್ಯ, ಬೆಟ್ಟಗೇರಿ ಉದಯ ವಿದ್ಯಾಸಂಸ್ಥೆಯ ಅಧ್ಯಕ್ಷ ತಳೂರು ಕಿಶೋರ್ ಕುಮಾರ್ ಉಪಸ್ಥಿತರಿದ್ದರು.

ಸಿಎನ್‌ಸಿಯಿಂದ ಅಂತರಾಷ್ಟ್ರೀಯ ಹತ್ಯಾಕಾಂಡ ಸ್ಮರಣೆ ದಿನ ಆಚರಣೆ

ಮಡಿಕೇರಿ, ಜ.27– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಡಿಕೇರಿಯ ಕೋಟೆ ಆವರಣ, ಯವಕಪಾಡಿಯ ನಾಲ್ ನಾಡ್ ಅರಮನೆ ಮತ್ತು ದೇವಟ್ ಪರಂಬುವಿನಲ್ಲಿ



'ಅಂತರ ರಾಷ್ಟ್ರೀಯ ಹತ್ಯಾಕಾಂಡದ ಸ್ಮರಣೆ ದಿನ' ವನ್ನು ಆಚರಿಸಿತು. ಮೂರು ಪ್ರದೇಶಗಳಿಗೆ ಭೇಟಿ ನೀಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಹಾಗೂ ಪ್ರಮುಖರು ಹತ್ಯೆಗೀಡಾದ ಕೊಡವರಿಗೆ ಪುಷ್ಪ ನಮನದೊಂದಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಅರಸರ ಆಳ್ವಿಕೆಯ ಕಾಲದಲ್ಲಿ ರಾಜಕೀಯ ಷಡ್ಯಂತ್ರದಿಂದ ಕೊಡವರ ನರಮೇಧವಾಗಿದೆ. ದೇವಟ್ ಪರಂಬುವಿನಲ್ಲಿ ಸಾವಿರಾರು ಕೊಡವರು ಬಲಿಯಾಗಿದ್ದಾರೆ. ಬುಡಕಟ್ಟು ಜನಾಂಗ ಕೊಡವರ ಹತ್ಯೆ ಘೋರ ದುರಂತವಾಗಿದ್ದು, ಅಂತರ ರಾಷ್ಟ್ರೀಯ ಮಟ್ಟದ ಸ್ಮಾರಕ ನಿರ್ಮಾಣ ಮಾಡುವ ಅಗತ್ಯವಿದೆ. ಆ ಮೂಲಕ ಮಡಿದವರಿಗೆ ಗೌರವ ಸಲ್ಲಿಸುವ ಕಾರ್ಯ ನಡೆಯಬೇಕು ಎಂದು ನಾಚಪ್ಪ ಇದೇ ಸಂದರ್ಭ ಒತ್ತಾಯಿಸಿದರು.

ಟಿಪ್ಪು ಸೋಲಿನ ಸೇಡು ತೀರಿಸಿಕೊಳ್ಳಲು ಸಾವಿರಾರು ಅಮಾಯಕ ನಿರಾಯುಧ ಕೊಡವ ಯೋಧರನ್ನು ಕುತಂತ್ರದಿಂದ ಹತ್ಯೆ ಮಾಡಿದನು. ಬದುಕುಳಿದವರನ್ನು ಶ್ರೀರಂಗಪಟ್ಟಣಕ್ಕೆ ಎಳೆದೊಯ್ದು ಕಿರುಕುಳ ನೀಡಿದನು ಎಂದು ಆರೋಪಿಸಿದರು.

ಮಡಿಕೇರಿ ಕೋಟೆ, ನಾಲ್ ನಾಡ್ ಅರಮನೆ ಮತ್ತು ದೇವಟ್ ಪರಂಬುವಿನ ದುರಂತ ನರಮೇಧಗಳನ್ನು ಕೊಡವ ಬುಡಕಟ್ಟು ಸಮುದಾಯ ಮರೆಯಲು ಸಾಧ್ಯವಿಲ್ಲ. ಈ ಮೂರು ಕರಾಳ ಅಧ್ಯಾಯವನ್ನು 'ಯುಎನ್‌ಓ'ದ ಅಂತರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು. ಮಡಿಕೇರಿ ಕೋಟೆ, ನಾಲ್ ನಾಡ್ ಅರಮನೆ ಮತ್ತು ದೇವಟ್ ಪರಂಬುವಿನಲ್ಲಿ ಸ್ಮಾರಕವನ್ನು ಸ್ಥಾಪಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

72 ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ



ಮಡಿಕೇರಿ, ಜ.27– ಮಡಿಕೇರಿ ನಗರದಲ್ಲಿ ವಸತಿ ಯೋಜನೆಯಡಿ 72 ಫಲಾನುಭವಿಗಳಿಗೆ ಮಂಜೂರಾತಿ ಪತ್ರವನ್ನು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ವಿತರಿಸಿದರು.

ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಸತಿ ಯೋಜನೆಯ ಮಂಜೂರಾತಿ ಪತ್ರವನ್ನು ವಿತರಿಸಿದರು. ಇದಕ್ಕೂ ಮೊದಲು ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಶಾಸಕರು, ವಿದ್ಯುತ್ ಸಂಪರ್ಕ, ಖಾತೆ ಬದಲಾವಣೆ, ಮಳೆಹಾನಿ ಪರಿಹಾರ, ಇಂದಿರಾ ಆವಾಸ್ ಯೋಜನೆಯಡಿ ಮನೆ ನಿರ್ಮಾಣ..., ಹೀಗೆ 7 ಅರ್ಜಿಗಳು ಬಂದಿದ್ದು, ವಿದ್ಯುತ್ ಸಂಪರ್ಕ ಮತ್ತು ಖಾತೆ ಬದಲಾವಣೆ ಸಂಬಂಧ 15 ದಿನದಲ್ಲಿ ಬಗೆಹರಿಸಲಾಗುವುದು. ಹಾಗೆಯೇ ಮಳೆಹಾನಿ ಪರಿಹಾರ ಸಂಬಂಧ ಪರಿಶೀಲಿಸಲು ತಹಶೀಲ್ದಾರರಿಗೆ ಸೂಚಿಸಲಾಗುವುದು. ಜೊತೆಗೆ ಇಂದಿರಾ ಅವಾಸ್ ಯೋಜನೆಯಡಿ ಮನೆ ನಿರ್ಮಾಣಕ್ಕೆ ಅವಕಾಶ ಮಾಡಲಾಗುವುದು ಎಂದರು. ಮಡಿಕೇರಿ ನಗರಸಭೆ ವ್ಯಾಪ್ತಿಗೆ ನಗರೋತ್ಥಾನ ಯೋಜನೆಯಡಿ 40 ಕೋಟಿ ರೂ., 15 ನೇ ಹಣಕಾಸು ಯೋಜನೆಯಡಿ 1.48 ಕೋಟಿ ರೂ., ಹಾಗೆಯೇ ನಗರಸಭೆಯಿಂದ 1.15 ಕೋಟಿ ರೂ., ಹೀಗೆ ವಿವಿಧ ವಿಭಾಗದ ಅನುದಾನ ಬಿಡುಗಡೆಯಾಗಿದ್ದು, ಮಡಿಕೇರಿ ನಗರದ ಅಭಿವೃದ್ಧಿಗೆ ಹೆಚ್ಚಿನ ಹಣ ಬಿಡುಗಡೆ ಆಗಿದೆ ಎಂದು ಶಾಸಕರು ವಿವರಿಸಿದರು.

'ಮಡಿಕೇರಿ ನಗರಕ್ಕೆ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡುವ ನಿಟ್ಟಿನಲ್ಲಿ 20 ಕೋಟಿ ರೂ. ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಶಾಸಕರು ತಿಳಿಸಿದರು.

ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ ನಗರಸಭೆಗೆ 20 ಕೋಟಿ, ಸೋ.ಪೇಟೆ ಪ.ಪಂ.ಗೆ 35 ಕೋಟಿ ಮತ್ತು ಕುಶಾಲನಗರ ಪುರಸಭೆಗೆ 40 ಕೋಟಿ ರೂ. ಹೆಚ್ಚಿನ ಹಣ ಬಿಡುಗಡೆ ಆಗಿದೆ ಎಂದರು.

'ಈಗಿರುವ ಕಾವೇರಿ ಕಲಾಕ್ಷೇತ್ರದ ಕಟ್ಟಡವನ್ನು ತೆರವುಗೊಳಿಸಿ, ಹೊಸ ಕಟ್ಟಡ ನಿರ್ಮಾಣ ಮಾಡುವ ನಿಟ್ಟಿನಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಒಂದು ಸಾವಿರ ಜನರು ಕುಳಿತುಕೊಳ್ಳುವ ಸುಸಜ್ಜಿತ ನೂತನ ಕಾವೇರಿ ಕಲಾಕ್ಷೇತ್ರ ನಿರ್ಮಾಣಕ್ಕೆ ಮುಖ್ಯಮಂತ್ರಿ ಅವರು ಕೊಡಗು ಜಿಲ್ಲೆಗೆ ಆಗಮಿಸುವ ಸಂದರ್ಭದಲ್ಲಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಅಪ್ಪಚ್ಚು ರಂಜನ್ ಹೇಳಿದರು.'

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಸದಸ್ಯರಾದ ಕಲಾವತಿ, ಮಂಜುಳ, ಶಾರದ ನಾಗರಾಜ್, ಚಿತ್ರಾವತಿ, ಉಷಾ ಕುಮಾರಿ, ಸಬಿತಾ, ಮಹೇಶ್ ಜೈನಿ, ಸತೀಶ, ಅರುಣ್ ಶೆಟ್ಟಿ ಕುನ್ ಕಾವೇರಪ್ಪ ಪೌರಾಯುಕ್ತ ವಿಜಯ ಇತರರು ಇದ್ದರು. ನಗರಸಭೆಯ ಸಿಎಒ ಶೈಲಾ ನಿರೂಪಿಸಿದರು. ಹೇಮಾ ಪ್ರಾರ್ಥಿಸಿದರು. ಎಇಇ ಸೌಮ್ಯ ವಂದಿಸಿದರು.

ರಾಜ್ಯದ ಜನರಿಗೆ ಬಿಜೆಪಿ ಸುಳ್ಳಿನ ಭರವಸೆ

ಪ್ರಜಾಧ್ವನಿ ಯಾತ್ರೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ



> ಬಿಜೆಪಿಯವರು ವಾರಕ್ಕೊಮ್ಮೆ ರಾಜ್ಯಕ್ಕೆ ಪ್ರಧಾನಿ ಮೋದಿಯನ್ನು ಕರೆದುಕೊಂಡು ಬರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಚಾಮರಾಜನಗರಕ್ಕೂ ಮೋದಿ ಬರಬಹುದು. ಆಗ ನೀವೆಲ್ಲ ಅವರನ್ನು ಅಚ್ಚೇದಿನ್ ಆಗಿಲ್ಲ, 15 ಲಕ್ಷ ನಮ್ಮ ಖಾತೆಗೆ ಬಂದಿಲ್ಲ, ನೀವು ನುಡಿದಂತೆ ನಡೆದಿಲ್ಲ ಎಂದು ಪ್ರಶ್ನಿಸಬೇಕು.
> -ಸಿದ್ದರಾಮಯ್ಯ, ಮಾಜಿ ಸಿಎಂ

ಚಾಮರಾಜನಗರ, ಜ.27– ರಾಜ್ಯ ಬಿಜೆಪಿ ಸರ್ಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ. ಸುಳ್ಳಿನ ಭರವಸೆ ನೀಡುತ್ತಿದೆ. ಈ ಸರ್ಕಾರದಿಂದ ದಲಿತರು, ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದವರು, ಮಹಿಳೆಯರು, ನಿರುದ್ಯೋಗಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಪ್ರತಿ ಪಕ್ಷದ ನಾಯಕ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ರೇಷ್ಮೆಗೂಡು ಪಕ್ಕದ ಮೈದಾನದಲ್ಲಿ ಗುರುವಾರ ಕಾಂಗ್ರೆಸ್‌ನ ಪ್ರಜಾಧ್ವನಿ ಯಾತ್ರೆಯ ಅಂಗವಾಗಿ ನಡೆದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿಯೇ ರಾಜ್ಯದ ಬಿಜೆಪಿ ಸರ್ಕಾರ ಅತ್ಯಂತ ದೊಡ್ಡ ಭ್ರಷ್ಟ ಸರ್ಕಾರವಾಗಿದೆ. ನಮ್ಮ ಅವಧಿಯಲ್ಲಿ ಬಂದಂತ ಎಲ್ಲಾ ಆರೋಪಗಳನ್ನು ಸಿಬಿಐ ಮೂಲಕ ತನಿಖೆ ನಡೆಸಿ ಆರೋಪ ಮುಕ್ತಾಗಿದ್ದೇವೆ ಎಂದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ನಿಮಗೆ ಧಮ್ಮ್ ಇದ್ದರೇ, ತಾಕತ್ತು ಇದ್ದರೆ ನಿಮ್ಮ ಸರ್ಕಾರ ಹಾಗೂ ಕೆಲವು ಶಾಸಕರ ಮೇಲೆ ಬಂದಿರುವ ಆರೋಪಗಳನ್ನು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಿ ಎಂದು ಸವಾಲು ಹಾಕಿದರು.

ಅಧಿಕಾರಕ್ಕೆ ಬಂದ ದಿನವೇ ಪ್ರಾರಂಭ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ದಿನವೇ ಪ್ರತಿ ತಿಂಗಳು 10ಕೆ.ಜಿ. ಅಕ್ಕಿ ಹಾಗೂ ಪ್ರತಿ ಕುಟುಂಬಕ್ಕೂ 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲಾಗುವುದು ಎಂದು ಭರವಸೆ ನೀಡಿದರು.

ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನರ ಬದುಕಿಗೆ ಮತ್ತೆ ಬೆಳಕು ತರುವ ದೃಷ್ಟಿಯಿಂದ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು. ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ನೀಡಿದ್ದ 165 ಭರವಸೆಗಳನ್ನು ಈಡೇರಿಸಿದ್ದೇವೆ. ಈ ಮೂಲಕ ನುಡಿದಂತೆ ನಡೆದಿದ್ದೇವೆ. ಇಂದು ನೀಡುತ್ತಿರುವ ಭರವಸೆಯನ್ನು ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೇ ಪ್ರಾರಂಭಿಸುತ್ತೇವೆ ಎಂದು ತಿಳಿಸಿದರು.

ನಂತರ ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ಕಾಂಗ್ರೆಸ್‌ನಿಂದ ನಡೆಯುತ್ತಿರುವ ಪ್ರಜಾಧ್ವನಿ ಯಾತ್ರೆಯು ಜನರ ಸಮಸ್ಯೆಗಳ ಧ್ವನಿಯಾಗಿದೆ. ನಿಮ್ಮ ನೋವು, ಸಮಸ್ಯೆಗಳನ್ನು ಆಲಿಸಿಕೊಂಡು ಅದಕ್ಕೆ ಉತ್ತರ ನೀಡಲು ಈ ಯಾತ್ರೆಯನ್ನು ಆರಂಭಿಸಿದ್ದೇವೆ ಎಂದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಮಾತನಾಡಿ, ಹಿಂದಿನ ಸಿದ್ದರಾಮಯ್ಯ ಅವರ ಸರ್ಕಾರದ ಅವಧಿಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ 10 ಸಾವಿರ ಕೋಟಿ ಅನುದಾನವನ್ನು ನೀಡಲಾಗಿತ್ತು. ಅಲ್ಲದೇ ಜಿಲ್ಲೆಯಲ್ಲಿ ಕಾನೂನು ಕಾಲೇಜು, ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, 1400 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆ, ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹೀಗೆ ಹಲವು ಕಾರ್ಯಕ್ರಮಗಳು ಮಾಡಲಾಯಿತು ಎಂದರು.

ಶೀಘ್ರವೇ ಬಿಜೆಪಿ ಪಾಪದ ಪುರಾಣ ಬಿಡುಗಡೆ

ಚಾಮರಾಜನಗರ, ಜ.27– ಬಿಜೆಪಿ ಪಾಪದ ಪುರಾಣವೆಂಬ ಕಿರು ಹೊತ್ತಿಗೆಯನ್ನು ಶೀಘ್ರದಲ್ಲೇ ರಾಜ್ಯದ ಜನತೆಯ ಕೈಗೆ ತಲುಪಿಸಲಿದ್ದೇವೆ ಎಂದು ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.




ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೂರುವರೆ ವರ್ಷಗಳಿಂದ ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಡಬಲ್ ಇಂಜಿನ್ ಸರ್ಕಾರ ಎಂದು ಹೇಳಿಕೊಳ್ಳುತ್ತಿರುವ ಬಿಜೆಪಿ ಸರ್ಕಾರ ಜನರ ಪರವಾದ ಒಂದೇ ಒಂದು ಯೋಜನೆ ರೂಪಿಸಿಲ್ಲ. ಬದಲಿಗೆ ಭ್ರಷ್ಟಾಚಾರದಲ್ಲಿಯೇ ತೊಡಗಿದೆ. ಇವರ ದುರಾಡಳಿತದ ಪುಸ್ತಕವನ್ನು ಶೀಘ್ರದಲ್ಲಿಯೇ ನಮ್ಮ ಕಾರ್ಯಕರ್ತರು ರಾಜ್ಯದ ಪ್ರತಿಯೊಂದು ಮನೆಗೂ ತಲುಪಿಸಲಿದ್ದಾರೆ ಎಂದರು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ವೇಳೆ 600ಕ್ಕೂ ಹೆಚ್ಚು ಭರವಸೆಗಳನ್ನು ರಾಜ್ಯದ ಜನರಿಗೆ ನೀಡಿದರು. ಆದರೆ, ಇದರಲ್ಲಿ 50 ಭರವಸೆಯನ್ನು ಈಡೇರಿಸಿಲ್ಲ. ಪ್ರಧಾನಿ ಮೋದಿ ಅವರು ರೈತರ ಆದಾಯವನ್ನು ದ್ವಿಗುಣಗೊಳಿಸುತ್ತೇವೆ. ಪ್ರತಿಯೊಬ್ಬರ ಖಾತೆಗೂ 15 ಲಕ್ಷ ಹಣ ಹಾಕುತ್ತೇವೆ. ಹೊಸ ಉದ್ಯೋಗಗಳ ಸೃಷ್ಟಿಸಿ ನಿರುದ್ಯೋಗ ನಿವಾರಣೆ ಮಾಡುತ್ತೇವೆ ಎಂದೆಲ್ಲ ಹೇಳಿ ಜನರಿಗೆ ಮೋಸ ಮಾಡಿದರು ಎಂದು ಕಿಡಿಕಾರಿದರು.

ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ನೌಕರಿ: ಜಿಲ್ಲೆಯಲ್ಲಿ ಆಕ್ಸಿಜನ್ ದುರಂತದಿಂದ 36 ಮಂದಿ ಮೃತಪಟ್ಟರು. ಈ ಸಂಬಂಧ ಸೂಕ್ತ ತನಿಖೆಯನ್ನು ರಾಜ್ಯ ಸರ್ಕಾರ ಮಾಡಲಿಲ್ಲ. ಅಲ್ಲದೇ ಮೃತಪಟ್ಟವರ ಕುಟುಂಬಕ್ಕೆ ಸರಿಯಾಗಿ ಪರಿಹಾರವನ್ನೂ ನೀಡಲಿಲ್ಲ. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ನೌಕರಿ ಕೊಡಿಸುವ ಜೊತೆಗೆ, ದುರಂತಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಿಂಗ್ ಮೇಕರ್ ನಮಗೆ ಬೇಡ: ಜೆಡಿಎಸ್‌ನ ಹೆಚ್.ಡಿ. ದೇವೇಗೌಡ ಅವರು ಒಮ್ಮೆ ಮುಖ್ಯಮಂತ್ರಿ ಹಾಗೂ ಒಮ್ಮೆ ಪ್ರಧಾನಿಯಾಗಿದ್ದರು. ಕುಮಾರಸ್ವಾಮಿ ಎರಡು ಬಾರಿ ಸಿಎಂ ಆಗಿದ್ದರು. ಆದರೆ, ಇವರ ಆಳ್ವಿಕೆಯ ವೇಳೆ ಜನತೆಗೆ ಏನೂ ಮಾಡಿಲ್ಲ. ಕುಮಾರಸ್ವಾಮಿ ಅವರು ಕಿಂಗ್ ಮೇಕರ್ ಆಗಲು ಬಯಸುತ್ತಾರೆ. ಹೀಗಾಗಿ ನಮಗೆ ಕಿಂಗ್ ಮೇಕರ್ ಬೇಕಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಸ್ಯಾಂಟ್ರೋ ಕಾರಿಗೆ ಲಾರಿ ಡಿಕ್ಕಿ: ಪತ್ನಿ ಸಾವು, ಪತಿಗೆ ಗಾಯ



ಗುಂಡ್ಲುಪೇಟೆ, ಜ.27– ಪಟ್ಟಣದ ಹೊರವಲಯದಲ್ಲಿ ಸ್ಯಾಂಟ್ರೋ ಕಾರಿಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಗೃಹಿಣಿ ಸ್ಥಳದಲ್ಲೇ ಸಾವಿಗೀಡಾಗಿ ಪತಿ ಗಾಯಗೊಂಡಿರುವ ಘಟನೆ ಶುಕ್ರವಾರ ನಡೆದಿದೆ. ಪಟ್ಟಣದ ಹೊರವಲಯದ ಶೆಲ್ ಪೆಟ್ರೋಲ್ ಬಂಕ್ ಬಳಿ ಬೆಂಗಳೂರಿನಿಂದ ಊಟಿಗೆ ತೆರಳುತ್ತಿದ್ದ ಸ್ಯಾಂಟ್ರೋ ಕಾರಿಗೆ ಎದುರಿನಿಂದ ವೇಗವಾಗಿ ಬಂದ ತಮಿಳುನಾಡು ಮೂಲದ ಲಾರಿ ಡಿಕ್ಕಿ ಹೊಡೆದಿದೆ. ಇದರಿಂದ ನಂಜನಗೂಡು ತಾಲೂಕಿನ ಸಿದ್ದಯ್ಯನಹುಂಡಿ ಗ್ರಾಮದ ಸಮೃದ್ಧಿ (22) ಎಂಬ ಗೃಹಿಣಿ ಸ್ಥಳದಲ್ಲಿಯೇ ಮೃತಪಟ್ಟರೆ ಆಕೆಯ ಪತಿ ನಾಗೇಂದ್ರ ಸ್ವಾಮಿ (30)ಗೆ ತೀವ್ರ ಗಾಯಗಳಾಗಿದ್ದು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಅಪೋಲೋ ಅಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಗಳೂರಿನ ಬನಶಂಕರಿಯಲ್ಲಿ ವಾಸವಾಗಿದ್ದ ದಂಪತಿ ಊಟಿಗೆ ಪ್ರಯಾಣಿಸುತ್ತಿದ್ದರು. ಮೃತ ಸಮೃದ್ಧಿ ಎಪಿಎಂಸಿ ಮಾಜಿ ಅಧ್ಯಕ್ಷ ತಾಲೂಕಿನ ಹಸಗೂಲಿ ಗ್ರಾಮದ ಗಂಗಾಧರಪ್ಪ ಅವರ ಮೊಮ್ಮಗಳು. ಈ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನೆ ದಾಳಿ: ವ್ಯಕ್ತಿ ಕಾಲಿಗೆ ಗಂಭೀರ ಗಾಯ



ಗುಂಡ್ಲುಪೇಟೆ, ಜ.27– ಕಾಡಾನೆ ದಾಳಿಗೆ ವೃದ್ಧರೊಬ್ಬರ ಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿರುವ ಘಟನೆ ತಾಲೂಕಿನ ಗೋಪಾಲಪುರ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಬಂಡೀಪುರ ಹುಲಿ ಯೋಜನೆಯ ಗೋಪಾಲಸ್ವಾಮಿಬೆಟ್ಟ ತಪ್ಪಲಿನ ಗೋಪಾಲಪುರ ಗ್ರಾಮದ ನಾಗಪ್ಪ (65) ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಬೆಳ್ಳಂಬೆಳಗ್ಗೆ ಒಂಟಿ ಆನೆ ದಾಳಿ ನಡೆಸಿದೆ. ಆನೆಯನ್ನು ಕಂಡ ಮನೆಯವರು ಜೋರಾಗಿ ಕೂಗಿಕೊಂಡಾಗ ನಾಗಪ್ಪ ಅವರ ಕಾಲುಗಳನ್ನು ತುಳಿದುಹಾಕಿ ಕಾಡಿನತ್ತ ಓಡಿಹೋಗಿದೆ.

ಕೂಡಲೇ ಗಾಯಾಳುವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದೊಯ್ಯಲಾಗಿದೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿದ್ದರು.

ಕಾಂಗ್ರೆಸ್ ಪ್ರಜಾಧ್ವನಿ ಸಮಾವೇಶಕ್ಕೆ ಹರಿದು ಬಂದ ಜನಸಾಗರ

ಸಂಚಾರ ಅಸ್ತವ್ಯಸ್ತ, ರಾರಾಜಿಸಿದ ಕಾಂಗ್ರೆಸ್ ಬಾವುಟ, ಗಣ್ಯರ ದಂಡು



ಚಾಮರಾಜನಗರ, ಜ.27– ಜಿಲ್ಲಾ ಕೇಂದ್ರದಲ್ಲಿ ಎಐಸಿಸಿ ಹಾಗೂ ಕೆಪಿಸಿಸಿ ಸಹಯೋಗದಲ್ಲಿ ಜಿಲ್ಲಾ ಕಾಂಗ್ರೆಸ್‌ನಿಂದ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಿಂದ 20 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಚಾಮರಾಜನಗರ ತಾಲೂಕಿನ ಹಲವು ಗ್ರಾಮಗಳು ಸೇರಿದಂತೆ ಹನೂರು, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರಿನಿಂದ ಬಸ್, ಟೆಂಪೂ ಸೇರಿದಂತೆ ಖಾಸಗಿ ವಾಹನಗಳಲ್ಲಿ ಸಾವಿರಾರು ಜನರು ಆಗಮಿಸಿ, ನೆಚ್ಚಿನ ನಾಯಕರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಧ್ರುವನಾರಾಯಣ್, ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್ ಅವರ ಪರ ಘೋಷಣೆ ಕೂಗಿದರು.

ರಸ್ತೆ ಬಂದ್, ಸಂಚಾರ ಅಸ್ತವ್ಯಸ್ತ: ಕಾರ್ಯಕ್ರಮದ ಹಿನ್ನೆಲೆಯಲ್ಲಿ ಚಾಮರಾಜನಗರ ಹಾಗೂ ಸಂತೇಮರಳ್ಳಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 212ರಲ್ಲಿ ಜನದಟ್ಟಣೆ ಉಂಟಾಗಿ ಗಂಟೆಗೂ ಹೆಚ್ಚು ಕಾಲ ರಸ್ತೆ ಬಂದ್ ಆಗಿ, ಸವಾರರು ಪರದಾಡಬೇಕಾಯಿತು.

ರಾರಾಜಿಸಿದ ಕಾಂಗ್ರೆಸ್ ಬಾವುಟ: ಕಾಂಗ್ರೆಸ್‌ನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಕಾಂಗ್ರೆಸ್‌ನ ಬಾವುಟ ಹಾಗೂ ಫ್ಲೆಕ್ಸ್‌ಗಳು ರಾರಾಜಿಸಿದವು. ಎಲ್ಲೆಲ್ಲೂ ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿ ಪಕ್ಷದ ಪರ ಘೋಷಣೆ ಹಾಕುತ್ತಿದ್ದರು. ಅಲ್ಲದೇ ಸಂತೇಮರಳ್ಳಿ ವೃತ್ತ, ಭುವನೇಶ್ವರಿ ವೃತ್ತ ಸೇರಿದಂತೆ ಹಲವೆಡೆ ಬೃಹತ್ ಎಲ್‌ಇಡಿ ಟಿವಿ ಅಳವಡಿಸಿ ಕಾರ್ಯಕ್ರಮದ ನೇರ ಪ್ರಸಾರ ಮಾಡಲಾಯಿತು.

ವೇದಿಕೆಯಲ್ಲಿ ಗಣ್ಯರ ದಂಡು: ಕಾರ್ಯಕ್ರಮದಲ್ಲಿ ಕೆಪಿಸಿಸಿ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲ, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಆರ್. ನರೇಂದ್ರ, ವಿಧಾನ ಪರಿಷತ್‌ನ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೋಳಿ, ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷ ಮರಿಸ್ವಾಮಿ, ಮಾಜಿ ಸಂಸದ ಶಿವಣ್ಣ, ಸಿದ್ದರಾಜು, ಮಾಜಿ ಶಾಸಕರಾದ ಎಸ್. ಜಯಣ್ಣ, ಎ.ಆರ್. ಕೃಷ್ಣಮೂರ್ತಿ, ಎಸ್.ಬಾಲರಾಜ್, ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆ ಪುಷ್ಪಾ ಅಮರನಾಥ್, ಯುವ ಮುಖಂಡ ಗಣೇಶ್‌ಪ್ರಸಾದ್, ಯುವ ಕಾಂಗ್ರೆಸ್‌ನ ಅಧ್ಯಕ್ಷ ನಳಪಾಡ್, ಎಸ್‌ಸಿ ಬಸವರಾಜ್ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ: ಸಿದ್ದರಾಮಯ್ಯ ವಿಶ್ವಾಸ

ಚಾಮರಾಜನಗರ, ಜ.27– ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೂ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಅಷ್ಟೇ ಸತ್ಯವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿ, ಮುಂದಿನ ಚುನಾವಣೆಯಲ್ಲಿ ಜಿಲ್ಲೆಯ ಜನರು ಪಕ್ಷವನ್ನು ಬೆಂಬಲಿಸಬೇಕು. ಈ ಬಾರಿಯ ಚುನಾವಣೆಯಲ್ಲಿ ಅಭ್ಯರ್ಥಿಗಳು ಯಾರೇ ಆಗಲಿ, ಆದರೆ ನೀವು ನೀಡುವ ಮತ ಮಾತ್ರ ಮಲ್ಲಿಕಾರ್ಜುನ್ ಖರ್ಗೆಗೆ, ರಾಹುಲ್ ಗಾಂಧಿಗೆ, ಸಿದ್ದರಾಮಯ್ಯಗೆ, ಡಿ.ಕೆ. ಶಿವಕುಮಾರ್‌ಗೆ, ಧ್ರುವನಾರಾಯಣ್‌ಗೆ ಎಂಬುದನ್ನು ಮರೆಯಬೇಡಿ. ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಪಕ್ಷಕ್ಕೆ ಶಕ್ತಿ ತುಂಬಬೇಕು ಎಂದರು.

ಬಿಜೆಪಿ ಸುಳ್ಳಿನ ಫ್ಯಾಕ್ಟರಿ: ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಜನರಿಗೆ ಸುಳ್ಳಿನ ಭರವಸೆಗಳನ್ನು ನೀಡುವ ಮೂಲಕ ಸುಳ್ಳಿನ ಫ್ಯಾಕ್ಟರಿಯ ಸಕಾರವಾಗಿದೆ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿ ಮುಖಂಡರು ಮಾತು ಮಾತಿಗೂ ನಮ್ಮದು ಡಬಲ್ ಇಂಜಿನ್ ಸರ್ಕಾರ ಎನ್ನುತ್ತಾರೆ. ಆದರೆ, ಬಿಜೆಪಿ ಸರ್ಕಾರಕ್ಕೆ ಇಂಜಿನ್‌ನೇ ಇಲ್ಲ ಎಂದು ವ್ಯಂಗ್ಯವಾಡಿದರು. ಜಿಲ್ಲೆಯ ಉಸ್ತುವಾರಿ ಸಚಿವ ವಿ. ಸೋಮಣ್ಣ ಸೂರಿಲ್ಲದವರಿಗೆ ಸಮರ್ಪಕವಾಗಿ ವಸತಿ ನೀಡಲಿಲ್ಲ. ಬರಿ ಬಂಡಲ್ ಬಿಡುತ್ತಿದ್ದಾರೆ. ನಮ್ಮ ಸರ್ಕಾರದ ಅವಧಿಯಲ್ಲಿ ಐದು ಲಕ್ಷ ಜನರಿಗೆ ವಸತಿ ಸೌಲಭ್ಯ ನೀಡಿದ್ದೇವೆ ಎಂದು ತಿಳಿಸಿದರು.

ನಂತರ ಕೆಪಿಸಿಸಿ ಉಸ್ತುವಾರಿಗಳಾದ ರಣದೀಪ್ ಸಿಂಗ್ ಸುರ್ಜೆವಾಲ ಮಾತನಾಡಿ, ಬಿಜೆಪಿ ಸರ್ಕಾರ ಶೇ. 40ರಷ್ಟು ಕಮಿಷನ್ ಸರ್ಕಾರವಾಗಿದೆ. ಗುತ್ತಿಗೆದಾರರ ಸಂಘ ರಾಜ್ಯ ಶಾಸಕರ ವಿರುದ್ಧ ಕೇಂದ್ರಕ್ಕೆ ಪತ್ರ ಬರೆದಿದೆ. ಇಂದಿನ ಸರ್ಕಾರದಿಂದ ವಿಧಾನಸೌಧ ಪ್ರತಿಯೊಂದು ಗೋಡೆಯೂ ಲಂಚ–ಲಂಚ ಎಂದು ಹೇಳುತ್ತಿದೆ ಎಂದು ಆರೋಪಿಸಿದರು.

ಒಂದನೇ ಪುಟದಿಂದ

ಮನೆ ಯಜಮಾನಿಗೆ 2 ಸಾವಿರ ಘೋಷಣೆ

ಕಬ್ಬು ಅರೆಯುವಿಕೆ ಆರಂಭಿಸುತ್ತೇವೆ. ಜೊತೆಗೆ ಲಿಕ್ಕರ್, ಕೋಜನ್ ಘಟಕ ಪುನರಾರಂಭಿಸುತ್ತೇವೆ ಎಂದು ಭರವಸೆ ನೀಡಿದರು. ಗಂಡುಮೆಟ್ಟಿದ ನಾಡು ಮಂಡ್ಯದಲ್ಲಿ ರಾಜಕೀಯ ಬದಲಾವಣೆ ಗಾಳಿ ಬೀಸಿದೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ 5–6 ಸ್ಥಾನಗಳನ್ನು ಗೆಲ್ಲಲಿದ್ದು, ರಾಜ್ಯದಲ್ಲೂ ಬಹುಮತದಿಂದ ಅಧಿಕಾರಕ್ಕೆ ಬರಲಿದ್ದೇವೆ ಎಂದು ಭವಿಷ್ಯ ನುಡಿದ ಅವರು, ಮಂಡ್ಯ ಜಿಲ್ಲೆಯ ಜನರು ಜೆಡಿಎಸ್ ಹಾಗೂ ಬಿಜೆಪಿಯನ್ನು ನಂಬದಿರಿ. ಜಿಲ್ಲೆಯಲ್ಲಿ ನಮಗೂ ಹಾಗೂ ಜೆಡಿಎಸ್ ನಡುವೆ ಹಣಾಹಣಿ ನಡೆಯಲಿದ್ದು, ಕಳೆದ ಬಾರಿ ಕಾರಣಾಂತರಗಳಿಂದ 7 ಸೀಟು ಗೆದ್ದಿದ್ದ ಜೆಡಿಎಸ್‌ಗೆ ಈ ಬಾರಿ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಮಾಜಿ ಸಿಎಂ ಕುಮಾರಸ್ವಾಮಿ ಮೈತ್ರಿ ಸರ್ಕಾರ ಬೀಳಲು ಕಾರಣ ಸಿದ್ದರಾಮಯ್ಯ ಎಂಬ ಆರೋಪಿಸುತ್ತಾರೆ. ನಮ್ಮ ಪಕ್ಷದ ಅನೇಕ ಶಾಸಕರೇನೋ ಬಿಜೆಪಿ ಸೇರಿದರು. ನಿಮ್ಮ ಪಕ್ಷದ 3 ಮಂದಿ ಶಾಸಕರು ಸಹ ಬಿಜೆಪಿ ಸರ್ಕಾರ ಬರಲು ಕಾರಣರಾದರು. ನಿಮ್ಮ ಪಕ್ಷದ ಶಾಸಕರಿಗೆ ಬಿಜೆಪಿಗೆ ಹೋಗಿ ಎಂದು ನಾನು ಹೇಳಿದ್ದೆನಾ ಎಂದು ಪ್ರಶ್ನಿಸಿದ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಜನರ ನಡುವೆ, ಅಧಿಕಾರಿಗಳ ನಡುವೆ ಇರುವುದನ್ನು ಬಿಟ್ಟು ತಾಜ್ ವೆಸ್ಟೆಂಡ್‌ನಲ್ಲಿ ಐಷಾರಾಮಿ ಜೀವನ ನಡೆಸಲು ಹೋಗಿ ಸರ್ಕಾರ ಪತನವಾಗುವಂತೆ ಮಾಡಿಕೊಂಡರು ಎಂದು ಕಿಡಿಕಾರಿದರು. ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಲ್ಲ. ಹಾಗಿದ್ದರೂ ಕುಮಾರಸ್ವಾಮಿ 123 ಸ್ಥಾನ ಗೆಲ್ಲುತ್ತೇವೆ ಎಂದು ಹೇಳುತ್ತಾ ಇದ್ದಾರೆ. ನಾನು ಜೆಡಿಎಸ್‌ನಲ್ಲಿದ್ದಾಗಲೇ ಪಕ್ಷ 59 ಮಂದಿ ಗೆದ್ದಿತ್ತು. ಅದಾದ ಬಳಿಕ 29, 37 ಹೀಗೆ ಗೆಲ್ಲುತ್ತಾ ಬಂದಿದ್ದು, ಈ ಬಾರಿ ಜೆಡಿಎಸ್ 20–22 ಸೀಟು ಗೆದ್ದರೂ ದೊಡ್ಡ ಸಾಧನೆ. ಈ ನಿಟ್ಟಿನಲ್ಲಿ ಮಂಡ್ಯ ಜನ ಜೆಡಿಎಸ್ ಅನ್ನು ಸಂಪೂರ್ಣವಾಗಿ ತಿರಸ್ಕರಿಸಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು.

ಡಿಕೆಶಿಗೆ ಗೂಳಿ ಉಡುಗೊರೆ: ಸಮಾವೇಶ ಆರಂಭವಾಗುವ ಮುನ್ನ ಡಿಕೆಶಿ ಅಭಿಮಾನಿ ತಂದಿದ್ದ ಗೂಳಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಉಡುಗೊರೆಯಾಗಿ ನೀಡಿ, ಗೂಳಿಗೆ ಬಂಡೆ ಎಂದು ನಾಮಕರಣ ಮಾಡಲಾಯಿತು.

ಸ್ಥಳೀಯ ಮುಖಂಡರ ಪರಿಶ್ರಮದಿಂದ ಯಶಸ್ವಿ: ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಡಾ.ಕೃಷ್ಣ, ಕೀಲಾರ ರಾಧಾಕೃಷ್ಣ, ಗಣಿಗ ರವಿಕುಮಾರ್, ವಿಜಯರಾಮೇಗೌಡ, ಎಂ.ಎಸ್.ಚಿದಂಬರ್ ಸೇರಿದಂತೆ ಹಲವು ಮುಖಂಡರಿಗೆ ಪ್ರಜಾಧ್ವನಿ ಯಾತ್ರೆ ಯಶಸ್ವಿಗೆ ಒಂದೊಂದು ಜವಾಬ್ದಾರಿ ಕೊಡಲಾಗಿತ್ತು. ಎಲ್ಲಾ ಮುಖಂಡರು ಚಾಚು ತಪ್ಪದೇ ತಮ್ಮ ಜವಾಬ್ದಾರಿ ನಿರ್ವಹಿಸಿದ್ದರಿಂದ ಸಮಾವೇಶ ಸಂಪೂರ್ಣ ಯಶಸ್ವಿಯಾಯಿತು. ಇದೇ ವೇಳೆ ಜೆಡಿಎಸ್ ತೊರೆದು ಹಲವರು ಕಾಂಗ್ರೆಸ್ ಸೇರಿದರು.

ಒಂದೇ ಒಂದು ಅವಕಾಶ ಕೊಡಿ: ಡಿಕೆಶಿ

ನನಗೆ ರಾಜಕೀಯವಾಗಿ ಶಕ್ತಿ ಕೊಟ್ಟು ನಿಮ್ಮ ಸೇವೆ ಮಾಡಲು ಅವ ಕಾಶ ಕೊಡಿ ಎನ್ನುವ ಮೂಲಕ ಜಿಲ್ಲೆಯ ಒಕ್ಕಲಿಗ ಸಮುದಾಯದ ದೇವೇಗೌಡ, ಕುಮಾರಸ್ವಾಮಿ ಕೈ ಹಿಡಿದಂತೆ ಸಮುದಾಯದ ಜನರು ನನ್ನನ್ನು ಒಮ್ಮೆ ಕೈ ಹಿಡಿಯಬೇಕೆಂದು ಪರೋಕ್ಷವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು. ನಗರದ ಮಂಡ್ಯ ವಿಶ್ವವಿದ್ಯಾಲಯ ಆವರಣದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಪಕ್ಷದ ಬಹುನಿರೀಕ್ಷಿತ ಪ್ರಜಾಧ್ವನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಭಾಗದ ಜನರು ಸಮೃದ್ಧಿಯಿಂದಿರಬೇಕೆಂದು ಮೇಕೆದಾಟು ಹೋರಾಟ ಮಾಡಿದ್ದೇನೆ. ಇಂಧನ ಸಚಿವನಾಗಿದ್ದ ವೇಳೆ ವಿದ್ಯುತ್ ಸಮಸ್ಯೆಯಾಗಬಾರದು, ರೈತರಿಗೆ ಒಳಿತಾಗಬೇಕೆಂದು ಹಲವು ಜನಪರ ಕೆಲಸ ನಿರ್ವಹಿಸಿದ್ದು, ಈಗ ನಿಮ್ಮ ಸೇವೆ ಮಾಡಲು ನನಗೆ ರಾಜಕೀಯ ಶಕ್ತಿ ಕೊಡಿ ಎಂದರು.

ರಾಜ್ಯದಲ್ಲಿ ಪರಿಶುದ್ಧವಾದ ಸರ್ಕಾರ ಬರಬೇಕೆಂದು ನಾವೆಲ್ಲರೂ ಪ್ರಜಾಧ್ವನಿ ಯಾತ್ರೆ ನಡೆಸುತ್ತಿದ್ದು, 40 ವರ್ಷದಿಂದಲೂ ನಾನು ಮಂಡ್ಯ ಜಿಲ್ಲೆಯೊಂದಿಗೆ ಒಡನಾಟ ಇಟ್ಟುಕೊಂಡಿದ್ದೇನೆ. ಪಕ್ಕದ ಕನಕಪುರ ಬೇರೆ ಅಲ್ಲ. ಮಂಡ್ಯ ಜಿಲ್ಲೆ ಬೇರೆ ಅಲ್ಲ. ಎಸ್.ಎಂ.ಕೃಷ್ಣ, ಜಿ.ಮಾದೇಗೌಡರ ಕಾಲದಿಂದ ಮಂಡ್ಯ ಜಿಲ್ಲೆಯ ಬಗ್ಗೆ ನನಗೆ ಅಪಾರವಾದ ಸಂಪರ್ಕವಿದ್ದು, ಜಿಲ್ಲೆಯ 7 ತಾಲ್ಲೂಕಿನಲ್ಲೂ ನನಗೆ ಅಗಾಧವಾದ ಸಂಪರ್ಕವಿದೆ. ಇದು ಈ ಬಾರಿಯ ಚುನಾವಣೆಯಲ್ಲಿ ಅಭ್ಯರ್ಥಿಗಳ ಗೆಲುವಿಗೆ ವರದಾನವಾಗಲಿದೆ ಎಂದರು. ಈವರೆಗೆ ರಾಜ್ಯವನ್ನಾಳಿದ ಬಿಜೆಪಿ, ಜೆಡಿಎಸ್ ಜನರಿಗೆ ಕೊಟ್ಟ ಆಶ್ವಾಸನೆ ಈಡೇರಿಸಲಿಲ್ಲ. ಏಳಕ್ಕೆ ಏಳು ಸೀಟು ಗೆದ್ದ ಜೆಡಿಎಸ್ ಮಂಡ್ಯ ಜಿಲ್ಲೆಗೆ ಕೊಟ್ಟ ಕೊಡುಗೆಯಾದರೂ ಏನು. 2018ರಲ್ಲಿ ಕೋಮುವಾದಿ ಬಿಜೆಪಿಯನ್ನು ದೂರ ಇಡುವ ಸಲುವಾಗಿ 80 ಸೀಟು ಗೆದ್ದಿದ್ದ ನಾವು 37 ಸೀಟು ಗೆದ್ದಿದ್ದ ಜೆಡಿಎಸ್ ಬೆಂಬಲಿಸಿ ಕುಮಾರಸ್ವಾಮಿಗೆ ಸಿಎಂ ಹುದ್ದೆ ಬಿಟ್ಟುಕೊಟ್ಟೆವು. ಆದರೆ ರೈತರ ಸಮಸ್ಯೆ ಬಗೆಹರಿಸಲಿಲ್ಲ. ರಾಜ್ಯದ ಜನರ ಸಮಸ್ಯೆ ಬಗೆಹರಿಸದೇ ಅಧಿಕಾರ ಕಳೆದುಕೊಂಡರು ಎಂದು ಕಿಡಿಕಾರಿದರು. ಜನರಿಗೆ ಅನುಕೂಲವಾಗಲಿ ಎಂದು ಮೇಕೆದಾಟಿಗಾಗಿ ಪಾದಯಾತ್ರೆ ನಡೆಸಿದರೆ ನನ್ನ ಹಾಗೂ ಕಾಂಗ್ರೆಸ್ಸಿಗರ ವಿರುದ್ಧ ಬಿಜೆಪಿ ದೂರು ದಾಖಲು ಮಾಡುವ ಮೂಲಕ ರೈತ ವಿರೋಧಿ ಧೋರಣೆ ಅನುಸರಿಸಿತು. ಐಟಿ, ಇಡಿ, ಸಿಬಿಐ ಮೂಲಕ ನನ್ನನ್ನ ಕಟ್ಟಿ ಹಾಕಬಹುದೆಂದು ಬಿಜೆಪಿ ಕನಸು ಕಂಡಿದ್ದರೆ ಅವರ ಭ್ರಮೆ ಎಂದ ಅವರು, ಪಿಎಸ್‌ಐ ಹಗರಣದಿಂದ ಹಿಡಿದು ಇಂಜಿನಿಯರ್ ನೇಮಕ ಹಗರಣದವರೆಗೆ ಭ್ರಷ್ಟಾಚಾರದ ಕೂಪವಾಗಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಿರಿ ಎಂದು ಮನವಿ ಮಾಡಿದರು.

ಬೆಂಗಳೂರು– ಮೈಸೂರು ದಶಪಥ ಹೆದ್ದಾರಿಯನ್ನು ನಾವೇ ನಿರ್ಮಿಸಿರುವುದಾಗಿ ಬಿಜೆಪಿಯವರು ಬೊಬ್ಬೆ ಹಾಕುತ್ತಿದ್ದು, ಈ ಹಿಂದೆ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್, ಕೇಂದ್ರ ಭೂ ಸಾರಿಗೆ ಸಚಿವರಾಗಿದ್ದ ಆಸ್ಕರ್ ಫರ್ನಾಂಡೀಸ್ ಹಾಗೂ ಅಂದಿನ ಲೋಕೋಪಯೋಗಿ ಸಚಿವ ಹೆಚ್.ಸಿ.ಮಹದೇವಪ್ಪ ಅವರಿಂದ ಬೆಂಗಳೂರು–ಮೈಸೂರು ರಸ್ತೆಗೆ 16 ಸಾವಿರ ಕೋಟಿ ಬಿಡುಗಡೆಯಾಗಿ ರಸ್ತೆ ಕಾಮಗಾರಿ ಆರಂಭವಾಯಿತು. ಇದೀಗ ಬಿಜೆಪಿ ತಾನೇ ರಸ್ತೆ ಮಾಡಿರುವುದಾಗಿ ಹೇಳಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದರು. ಮಂಡ್ಯ ಜಿಲ್ಲೆಯ ಜನ ಜೆಡಿಎಸ್‌ಗೆ ಮತ ಕೊಡಬೇಡಿ. ಜೆಡಿಎಸ್‌ಗೆ ಮತ ಕೊಟ್ಟರೆ ಅದು ಬಿಜೆಪಿಗೆ ಕೊಟ್ಟಂತೆ. ನನ್ನ ಕೈ ಬಲಪಡಿಸಲು ಜಿಲ್ಲೆಯ ಏಳಕ್ಕೆ ಏಳು ಸೀಟನ್ನು ಕಾಂಗ್ರೆಸ್‌ಗೆ ಗೆಲ್ಲಿಸಿಕೊಡಿ. ಕಾಂಗ್ರೆಸ್ ಪಕ್ಷ ಪ್ರಜ್ಞಾವಂತರ ಪಕ್ಷವಾಗಿರುವುದಕ್ಕೆ ಸಿ.ಆರ್.ಮನೋಹರ್, ಬೆಮೆಲ್ ಕಾಂತರಾಜು, ವೈಎಸ್‌ವಿ ದತ್ತ ಕಾಂಗ್ರೆಸ್ ಸೇರ್ಪಡೆಯಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್.ವಿಶ್ವನಾಥ್, ಗುಬ್ಬಿ ವಾಸು, ಅರಸಿಕೆರೆ ಶಿವಲಿಂಗೇಗೌಡ ಕಾಂಗ್ರೆಸ್ ಸೇರಲಿದ್ದಾರೆ ಎಂದು ತಿಳಿಸಿದರು.

ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಮಾತನಾಡಿ, 25 ವರ್ಷಗಳ ನಂತರ ಒಕ್ಕಲಿಗ ಸಮುದಾಯಕ್ಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಿಕ್ಕಿದೆ. 1998ರಲ್ಲಿ ಎಸ್.ಎಂ.ಕೃಷ್ಣ ಕೆಪಿಸಿಸಿ ಅಧ್ಯಕ್ಷರಾಗಿದ್ದ ವೇಳೆ ಅವರಿಗೆ ಮುಖ್ಯಮಂತ್ರಿ ಸ್ಥಾನವೂ ಒಲಿದು ಬಂತು. ಈಗ ನಿಮ್ಮವರೇ ಆದ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದು, ಅವರಿಗೂ ಸಹ ರಾಜಕೀಯದಲ್ಲಿ ಉನ್ನತ ಹುದ್ದೆ ಸಿಗಬೇಕೆಂದರೆ ಮಂಡ್ಯ ಜಿಲ್ಲೆಯ ಜನ ಅವರ ಪರ ಇರಬೇಕೆಂದು ಮನವಿ ಮಾಡಿದರು.

ಬೈಪಾಸ್ ವಾಹನ ಸಂಚಾರಕ್ಕೆ ಮುಕ್ತ

ಚಾಲನೆ ಮಾಡಿ ಎಂದು ಪ್ರತಾಪ್ ಸಿಂಹ ಟ್ವೀಟ್‌ನಲ್ಲಿ ಸಲಹೆ ನೀಡಿದ್ದಾರೆ. ರಸ್ತೆ ವಿಸ್ತಾರವಾಗಿರುವುದರಿಂದ ಅತೀ ವೇಗದಲ್ಲಿ ವಾಹನ ಸಾಗುವ ಕಾರಣ ಈ ಹೆದ್ದಾರಿಯಲ್ಲಿ ಅಪಘಾತಗಳು ಸಂಭವಿಸುತ್ತವೆ. ಗಂಟೆಗೆ 110ರಿಂದ 120 ಕಿ.ಮೀ. ವೇಗದಲ್ಲಿ ಸಂಚರಿಸಲು ಶಕ್ತವಾಗುವಂತೆ ಈ ರಸ್ತೆಯನ್ನು ವಿನ್ಯಾಸ ಮಾಡಲಾಗಿದೆ. ಆದರೆ, ವಾಹನ ಚಾಲಕರು 150ರಿಂದ 160 ಕಿ.ಮೀ. ವೇಗದಲ್ಲಿ ಚಾಲನೆ ಮಾಡುತ್ತಿದ್ದು, ಕೇವಲ ಒಂದೂವರೆ ಗಂಟೆಯಲ್ಲಿ ಬೆಂಗಳೂರು–ಮೈಸೂರು ತಲುಪುತ್ತಿದ್ದಾರೆ. ಇದರಿಂದ ಸಹಜವಾಗಿ ಅಪಘಾತಗಳಾಗುತ್ತಿವೆ.

IHITMSಗೆ ಪ್ರಸ್ತಾವನೆ: ವೇಗ ನಿಯಂತ್ರಿಸಿ ಅಪಘಾತಗಳನ್ನು ತಪ್ಪಿಸಲು ಈ ಹೆದ್ದಾರಿಯಲ್ಲಿ ಇಂಟೆಲಿಜೆಂಟ್ ಹೈವೇ ಇನ್ಫರ್ಮೇಷನ್ ಅಂಡ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ ಅಳವಡಿಸಲು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದಾರೆ. ವೇಗ ಮಿತಿ ಮೀರಿದರೆ, ಅಪಘಾತ ಸಂಭವಿಸಿದರೆ ಅಥವಾ ರಸ್ತೆಯಲ್ಲಿ ಕಳ್ಳತನವಾದಲ್ಲಿ ಈ ಸಿಸ್ಟಂನಿಂದ ಪೊಲೀಸ್ ಠಾಣೆ, ಆಂಬುಲೆನ್ಸ್ ಹಾಗೂ ಪ್ರಾಧಿಕಾರದ ಕಚೇರಿಗೆ ತಕ್ಷಣ ಸಂದೇಶ ಹೋಗುತ್ತದೆ. ಅಲ್ಲದೇ ಕೇಸ್ ದಾಖಲಾಗಿ ದಂಡದ ನೋಟಿಸ್ ಜನರೇಟ್ ಆಗಿ ಆರ್‌ಸಿ ಮಾಲೀಕರಿಗೂ ಮಾಹಿತಿ ರವಾನೆಯಾಗಲಿದೆ. ಈ ವ್ಯವಸ್ಥೆಯಿಂದ ವೇಗ ನಿಯಂತ್ರಣ, ಅಪಘಾತ ತಡೆ ಹಾಗೂ ರಸ್ತೆಯ ಬ್ಯಾರಿಕೇಡ್, ಪೈಪ್‌ಲೈನ್‌ಗಳ ಕಳವು ಪ್ರಕರಣಕ್ಕೆ ಕಡಿವಾಣ ಹಾಕಿದಂತಾಗುತ್ತದೆ.

600 ಮೀ.ಗೆ ಸಿಸಿ ಕ್ಯಾಮರಾ: ಈ ಸಿಸ್ಟಂನಲ್ಲಿ ಮೈಸೂರು–ಬೆಂಗಳೂರು ನಡುವೆ ಪ್ರತೀ 600 ಮೀಟರ್‌ಗೊಂದರಂತೆ ದಶಪಥ ರಸ್ತೆಯ ಎರಡೂ ಕಡೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗುವುದು. ಅವುಗಳ ಸಹಾಯದಿಂದ ವಾಹನದ ವೇಗ, ಲೇನ್ ಡಿಸಿಪ್ಲಿನ್ ಉಲ್ಲಂಘನೆಯಾಗುವುದನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಲಾಗುವುದು. ಹಾಗೆಯೇ ಟೋಲ್ ಪ್ಲಾಜಾಗಳಲ್ಲಿ ಶುಲ್ಕ ಪಾವತಿಸಲು ವಾಹನಗಳು ಸಾಲಾಗಿ ನಿಲ್ಲುವುದನ್ನು ತಪ್ಪಿಸಲು ಇ–ಚಲನ್ ತಂತ್ರಜ್ಞಾನದ ಕಮಾಂಡ್ ಸೆಂಟರ್ ಸ್ಥಾಪಿಸಲಾಗುವುದು ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಅಪಘಾತ ಸಂಭವಿಸಿದ ತಕ್ಷಣ ಆಸ್ಪತ್ರೆ, ಫೈರ್ ಸ್ಟೇಷನ್, ಪೊಲೀಸ್ ಠಾಣೆ, ಪ್ರಾಧಿಕಾರಕ್ಕೆ ಮಾಹಿತಿ ತಲುಪುವುದರಿಂದ ಅತೀ ಶೀಘ್ರ (ಗೋಲ್ಡನ್ ಹವರ್) ಘಟನಾ ಸ್ಥಳ ತಲುಪಲು ಸಾಧ್ಯವಾಗುತ್ತದೆ. ಅಲ್ಲದೇ ಅಪಘಾತಕ್ಕೀಡಾದ ವಾಹನದ ನೋಂದಣಿ ಸಂಖ್ಯೆ ದಾಖಲಾಗುವುದರಿಂದ ಹಿಟ್ ಅಂಡ್ ರನ್ ಆದರೂ ಸುಲಭವಾಗಿ ವಾಹನ ಪತ್ತೆ ಮಾಡಲು ಅನುಕೂಲವಾಗುತ್ತದೆ.

ಬ್ಯಾರಿಕೇಡ್, ಪೈಪ್‌ಗಳ ಕಳವು: ಹೆದ್ದಾರಿಯ ಕೆಲವೆಡೆ ಅಳವಡಿಸಿರುವ ಕಬ್ಬಿಣದ ಬ್ಯಾರಿಕೇಡ್, ವಿಭಜಕದ ಸಲಕರಣೆಗಳು ಹಾಗೂ ನೀರಿನ ಪೈಪ್‌ಗಳನ್ನು ತುಂಡರಿಸಿ ಬಿಡದಿ, ರಾಮನಗರ ಮತ್ತು ಮಂಡ್ಯ ಬಳಿ ಕಳವು ಮಾಡಲಾಗಿದೆ. ರಸ್ತೆಯಲ್ಲಿ ಅಳವಡಿಸಿರುವ ರೇಲಿಂಗ್‌ಗಳು ದುಬಾರಿ ವೆಚ್ಚದ್ದಾಗಿರುವುದರಿಂದ ರಾತ್ರಿ ವೇಳೆ ಅವುಗಳನ್ನು ತುಂಡರಿಸಿ ಕಳವು ಮಾಡಲಾಗುತ್ತಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಸುರಕ್ಷತೆ ಹಾಗೂ ರಸ್ತೆ ಸೌಂದರ್ಯೀಕರಣಕ್ಕಾಗಿ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ. ಅದೇ ರೀತಿ ಫ್ಲೈಓವರ್‌ಗಳಲ್ಲಿ ಮಳೆ ನೀರು ಹರಿದು ಹೋಗಲು ಪೈಪ್‌ಲೈನ್‌ಗಳನ್ನು ಹಾಕಲಾಗಿದ್ದು, ಅವುಗಳನ್ನು ಕಳವು ಮಾಡುತ್ತಿರುವುದರಿಂದ ಸಿಸಿ ಕ್ಯಾಮರಾಗಳಿಂದ ಇಂತಹ ಕೃತ್ಯ ಪತ್ತೆ ಮಾಡಬಹುದಾಗಿದೆ. ಕೇಂದ್ರ ಸರ್ಕಾರವು ಇಂಟೆಲಿಜೆಂಟ್ ಹೈವೇ ಇನ್ಫರ್ಮೇಷನ್ ಅಂಡ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ ಪ್ರಸ್ತಾವನೆಗೆ ಒಪ್ಪಿಗೆ ನೀಡಿದಲ್ಲಿ ಯೋಜನೆಯನ್ನು ಜಾರಿಗೊಳಿಸಲು ಪ್ರಾಧಿಕಾರದ ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

ಮೈಸೂರಲ್ಲಿ 'ರಾಜ್ಯ ಜಾನಪದ ಪ್ರಪಂಚ' ಪ್ರಶಸ್ತಿ ಪ್ರದಾನ

ನಮ್ಮ ಸರ್ಕಾರ ಬಂದರೆ ಜಾನಪದ ಕ್ಷೇತ್ರದ ಉಳಿವಿಗೆ ವಿಶೇಷ ಅನುದಾನ

ನಾವೇ ಅಧಿಕಾರಕ್ಕೆ ಬರುತ್ತೇವೆಂಬ ವಿಶ್ವಾಸವಿದೆ: ಸಿದ್ದರಾಮಯ್ಯ



ಮೈಸೂರು, ಜ.27(ಆರ್‌ಕೆಬಿ)– ಮುಂದೆ ನಾವೇ ಅಧಿಕಾರಕ್ಕೆ ಬರುತ್ತೇವೆಂಬ ವಿಶ್ವಾಸವಿದೆ. ಹೀಗಾಗಿ ನಾಡಿನ ಜಾನಪದ ಸಂಪತ್ತನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ವಿಶೇಷ ಅನುದಾನ ನೀಡಲಾಗುವುದು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಲಲಿತಕಲಾ ಕಾಲೇಜಿನಲ್ಲಿ ಕನ್ನಡ ಜಾನಪದ ಪರಿಷತ್‌ನ ರಾಜ್ಯ ಮತ್ತು ಜಿಲ್ಲಾ ಘಟಕ ಜಂಟಿಯಾಗಿ ಆಯೋಜಿಸಿದ್ದ ರಾಜ್ಯ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಾನಪದ ವಿದ್ವಾಂಸರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಪ್ರತಿಯೊಬ್ಬರ ಜೀವನದಲ್ಲಿ ಹಾಸು ಹೊಕ್ಕಾ ಗಿರುವ ಜಾನಪದಕ್ಕೆ ಹಳ್ಳಿಗಳೇ ತವರು ಮನೆ ಇದ್ದಂತೆ. ಶತಮಾನಗಳಿಂದ ಗ್ರಾಮೀಣ ಜನರು ಜಾನಪದವನ್ನು ಉಳಿಸಿಕೊಂಡು ಬಂದಿದ್ದಾರೆ. ಅದನ್ನು ಉಳಿಸಿ, ಬೆಳೆಸಲು ಕಾಂಗ್ರೆಸ್ ಸರ್ಕಾರ ಹೆಚ್ಚು ಅನುದಾನ ನೀಡಲಿದೆ. ಜಾನಪದ ಕಲಾವಿದರನ್ನು ಗೌರವಿಸಿದರೆ ಜಾನಪದಕ್ಕೆ ಗೌರವ ನೀಡಿ ದಂತೆ. ನಾವೇ ಅಧಿಕಾರಕ್ಕೆ ಬಂದ ಕೂಡಲೇ ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತೇವೆ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ಜಾನಪದ ಹೆಚ್ಚಾಗಿದೆ. ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ವೈವಿಧ್ಯಮಯವಾದ ಜಾನಪದ ಕಲೆಗಳಿವೆ. ಇದನ್ನು ಮುಂದಿನ ಪೀಳಿಗೆಗಾಗಿ ಉಳಿಸಬೇಕಾಗಿದೆ ಎಂದರು.

ಗುರುಗಳ ಸ್ಮರಿಸಿದ ಸಿದ್ದರಾಮಯ್ಯ: ತಾವು ತಮ್ಮೂರು ಸಿದ್ದರಾಮನಹುಂಡಿಯಲ್ಲಿ ವೀರಮಕ್ಕಳ ಕುಣಿತ, ಪೂಜಾ ಕುಣಿತ ಇತ್ಯಾದಿ ಜಾನಪದ ಕಲೆಗಳನ್ನು ಕಲಿತ ಬಗ್ಗೆ ವಿಶ್ಲೇಷಿಸಿದರು. ತಾವು ಸೇರಿದಂತೆ 30 ಮಂದಿಗೆ ವೀರಮಕ್ಕಳ ಕುಣಿತವನ್ನು ಕಲಿಸಿದವರು ನಮ್ಮ ಗುರುಗಳಾದ ನಂಜೇಗೌಡರು. ಅವರೇ ನಮಗೆ ಮರಳಿನಲ್ಲಿ ಅಕ್ಷರಾಭ್ಯಾಸ ಮಾಡಿಸಿದರು. ಅವರಿಲ್ಲದಿದ್ದರೆ ನಾನು ಶಾಲೆಗೆ ಸೇರುತ್ತಿರಲಿಲ್ಲ. ಮುಖ್ಯಮಂತ್ರಿಯಾಗುತ್ತಿರಲಿಲ್ಲ ಎಂದು ತಮ್ಮ ಗುರುಗಳನ್ನು ಸ್ಮರಿಸಿದರು.

ಜೀವನದಲ್ಲಿ ವೀರಮಕ್ಕಳ ಕುಣಿತ ಕಲಿಸಿದ ನಂಜೇಗೌಡ, ಶಾಲೆಗೆ ಸೇರಿಸಿದ ರಾಜಪ್ಪ, ರಾಜಕಾರಣದ ದಾರಿ ತೋರಿದ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಇವರೆಲ್ಲರೂ ನಮ್ಮ ಗುರುಗಳು. ಪರಂಪರೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ತಿಳಿಸಿದರು.

ಜಾನಪದ ಕಲೆ ಕಲಿಸುವವರೇ ಕಡಿಮೆಯಾಗಿದ್ದಾರೆ: ಜಾನಪದವನ್ನು ಕಲಿಯುವವರು ಮೊದಲಿನಂತೆ ಹಳ್ಳಿಗಳಲ್ಲಿ ಯಾರೂ ಇಲ್ಲ. ಕಲಿಸುವವರೂ ಸಿಗುತ್ತಿಲ್ಲ. ಹೀಗಾಗಿ, ಓದಿನ ಜೊತೆಗೆ ಇಷ್ಟದ ಕಲೆಯನ್ನು ಕಲಿಯಲು ಮುಂದಾಗುವಂತೆ ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು, ತೋಟೇಗೌಡ ಸಿದ್ದನಕೊಪ್ಪಲು ಅವರ 'ಸೃಷ್ಟಿ', ಮೋಹನ್ ಪಾಳೇಗಾರ ಅವರ 'ಮದರಂಗಿ ಜಾನಪದ ಕಥೆಗಳು' ಹಾಗೂ ವೆಂಕಟಗಿರಿ ದಾವುಗೋಡ್ಲು ಅವರ 'ಅಪರೂಪದ ಒಡವೆ' ಕೃತಿಗಳನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಾನಪದ ಪರಿಷತ್ ಅಧ್ಯಕ್ಷ ಡಾ.ಎಸ್. ಬಾಲಾಜಿ, ಜಿಲ್ಲಾ ಘಟಕದ ಅಧ್ಯಕ್ಷ ಕ್ಯಾತನಹಳ್ಳಿ ಎಚ್.ಪ್ರಕಾಶ್, ಕುರುಬರ ಸಂಘದ ತಾಲೂಕು ಅಧ್ಯಕ್ಷ ಎಂ.ಬಿ. ಆನಂದ್, ಪದಾಧಿಕಾರಿಗಳಾದ ಡಾ.ಕನಕ ತಾರ, ವಿಠಲ್ ಪೆರುಮನೆ, ಡಾ.ಕಾವೇರಿ ಪ್ರಕಾಶ್, ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ ಉಪಸ್ಥಿತರಿದ್ದರು.

ಜಾನಪದ ಪ್ರಪಂಚ ಪ್ರಶಸ್ತಿ ಪುರಸ್ಕೃತರು

ಪ್ರೊ. ಅಂಬಳಿಕೆ ಹಿರಿಯಣ್ಣ (ಶಿವಮೊಗ್ಗ)., ಪ್ರೊ.ನಂಜಯ್ಯ ಹೊಂಗನೂರು (ಮೈಸೂರು), ಡಾ.ಸಿ.ಬಿ.ಹೊನ್ನು ಸಿದ್ಧಾರ್ಥ (ಬೆಂಗಳೂರು ನಗರ), ಡಾ.ಕುರುವ ಬಸವರಾಜ್ (ರಾಮನಗರ). ಡಾ.ಚಲುವರಾಜು (ವಿಜಯನಗರ), ಕಂಸಾಳೆ ಮಾದೇವ (ಮೈಸೂರು), ಸೋಬಾನೆ ಕೃಷ್ಣೇಗೌಡ (ಮಂಡ್ಯ), ತಾರಾಬಾಯಿ (ಕಲಬುರಗಿ), ನಂದಿಧ್ವಜ ಮಹಾದೇವಪ್ಪ (ಮೈಸೂರು), ಬಸವರಾಜ್ (ಚಾಮರಾಜನಗರ), ಬಸವರಾಜ್ ನೆಲದಾಳ್ (ರಾಯಚೂರು), ಮೌಲಾಸಾಬ ನಾನಾಸಾಬರ ಜಹಗೀರದಾರ (ವಿಜಯಪುರ), ಸುಳ್ಳಿಮಾಡ ಗೌರಿ ನಂಜಪ್ಪ (ಕೊಡಗು), ಕನರಾಡಿ ವಾದಿರಾರಿ ಭಟ್ (ಉಡುಪಿ), ಜಾಲಮರ ಸುಬ್ರಾಯ (ಚಿಕ್ಕಮಗಳೂರು) ದೊಡ್ಡಕ್ಕ (ತುಮಕೂರು), ಮುನಿವೆಂಕಟಮ್ಮ (ಕೋಲಾರ), ಮಲ್ಲೇಶಪ್ಪ ಬಸವಣ್ಣೆಪ್ಪ ಜೋಗಿ (ಉತ್ತರ ಕನ್ನಡ), ಭೀಮಶಿ ಘಂಟಿ ಸಾ.ಶಿರೂರ (ಬಾಗಲಕೋಟೆ), ಸುರೇಶ್ ಶೆಟ್ಟಿ ಅಯ್ಯಾಡಿ (ಮಹಾರಾಷ್ಟ್ರ)

ಕೋಲಾರದಲ್ಲಿ ಕಾಂಗ್ರೆಸ್ ಸ್ಪರ್ಧಿಯೇ ಅಲ್ಲ

— ತೋಟಗಾರಿಕೆ ಸಚಿವ ಮುನಿರತ್ನ —

ಮೈಸೂರು, ಜ.27(ಜಿಎ)– ಕೋಲಾರ ಜಿಲ್ಲೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಮಾತ್ರ ಸ್ಪರ್ಧೆ ಇರೋದು. ಕಾಂಗ್ರೆಸ್ ನಮಗೆ ಸ್ಪರ್ಧಿಯೇ ಅಲ್ಲ ಎಂದು ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಶಾಸಕ ಮುನಿರತ್ನ ತಿಳಿಸಿದ್ದಾರೆ.



ಖಾಸಗಿ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

ಇತ್ತೀಚೆಗೆ ಸಚಿವ ಮುನಿರತ್ನ ಕೋಲಾರದ ಖಾಸಗಿ ರೆಸಾರ್ಟ್‌ನಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೋಲಾರಮ್ಮನ ಹೆಸರಿನಲ್ಲಿ ಆಣೆ ಪ್ರಮಾಣ ಮಾಡಿಸಿದ್ದ ವಿಡಿಯೋ ಎಲ್ಲೆಡೆ ವೈರಲ್ ಆಗಿತ್ತು. ಇದರ ಬಗ್ಗೆ ಪ್ರಸ್ತಾಪಿಸಿ ಮಾತನಾಡಿದ ಅವರು ಪಕ್ಷದ ಪರವಾಗಿ ಕೆಲಸ ಮಾಡುವಂತೆ ಆಣೆ ಪ್ರಮಾಣ ಮಾಡಿಸ ಲಾಗಿದೆ ಅಷ್ಟೇ ಎಂದರು.


ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಗೊಂದಲದ ಏರ್ಪಟ್ಟಿತ್ತು ಹಾಗಾಗಿ ಟಿಕೆಟ್ ಆಕಾಂಕ್ಷಿಗಳನ್ನು ಒಂದುಗೂಡಿಸಿ ಒಂದು ವೇಳೆ ಟಿಕೆಟ್ ಕೈತಪ್ಪಿ ಹೋದರೆ ಬಂಡಾಯ ಏಳದೆ ಪಕ್ಷದ ಹಿತದೃಷ್ಟಿಯಿಂದ ಹೈಕಮಾಂಡ್ ಯಾರಿಗೆ ಟಿಕೆಟ್ ಕೊಟ್ಟರೂ ಅವರ ಪರ ಕೆಲಸ ಮಾಡಬೇಕೆಂದು ಪಕ್ಷದ ಮುಖಂಡರಿಗೆ ಹಾಗೂ ಕಾರ್ಯಕರ್ತಗೆ ಆಣೆ ಪ್ರಮಾಣ ಮಾಡಿಸಲಾಗಿದೆ ಎಂದು ಅವರು ವಿವರಿಸಿದರು.

ಬೇರೆ ಪಕ್ಷಗಳಿಗೆ ಹೋಗುತ್ತಾರೆ ಎಂಬ ಭಯದಿಂದ ಪ್ರಮಾಣ ಮಾಡಿಸಲಾಯಿತಂತೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಯಾರೂ ಬಿಜೆಪಿ ಬಿಟ್ಟು ಹೋಗುವ ಯೋಚನೆಯೇ ಇಲ್ಲ. ಆದರೆ, ನಮ್ಮ ಜೊತೆಯಲ್ಲಿರುವವರು ಹೋಗುತ್ತಾರೆ ಎಂದು ಬೇರೆ ಪಕ್ಷದವರಿಗೆ ಭಯ ಮೂಡಿದೆ ಎಂದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೋಲಾರದಿಂದ ಸ್ಪರ್ಧಿಸುತ್ತಾರೆಂಬ ಉದ್ದೇಶದಿಂದ ಹೀಗೆ ಮಾಡಲಾಯಿತಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕೋಲಾರದಲ್ಲಿ ಚುನಾವಣೆ ಸ್ಪರ್ಧೆ ಇರುವುದು ಬಿಜೆಪಿ ಮತ್ತು ಜೆಡಿಎಸ್ ನಡುವೇ ಮಾತ್ರ. ಕಾಂಗ್ರೆಸ್ ನಮಗೆ ಸ್ಪರ್ಧಿಯೇ ಅಲ್ಲ. ಎಂದು ತಿಳಿಸಿದರು.

ಮೈಸೂರು ಮೃಗಾಲಯದಲ್ಲಿ ತಾಯಿಯೊಂದಿಗೆ ಸ್ವಚ್ಛಂದವಾಗಿರುವ ಸಿಂಹದ ಮರಿಗಳ ಕಾಣ ಬನ್ನಿ...!

ಮೈಸೂರು,ಜ.27(ಎಂಟಿವೈ)– ಮೈಸೂರು ಮೃಗಾಲಯದಲ್ಲಿ ಐದು ತಿಂಗಳ ಹಿಂದೆ ಜನಿಸಿದ್ದ ಮೂರು ಸಿಂಹದ ಮರಿಗಳ ವೀಕ್ಷಣೆಗೆ ಈಗ ಅವಕಾಶ ಮಾಡಿಕೊಡಲಾಗಿದೆ.



ಮೈಸೂರು ಮೃಗಾಲಯದಲ್ಲಿನ 'ನಿರ್ಭಯಾ' ಸಿಂಹಿಣಿಗೆ 2022ರ ಆ.5ರಂದು ಎರಡು ಗಂಡು ಹಾಗೂ ಒಂದು ಹೆಣ್ಣು ಮರಿ ಜನಿಸಿದ್ದವು. ಕಳೆದ ಐದು ತಿಂಗಳಿಂದ ಸುರಕ್ಷತೆ ದೃಷ್ಟಿಯಿಂದ ತಾಯಿಯೊಂದಿಗೆ ಮರಿಗಳನ್ನು ವಿಶೇಷ ಬೋನ್‌ನಲ್ಲಿ ಪಾಲನೆ–ಪೋಷಣೆ ಮಾಡಲಾಗುತ್ತಿತ್ತು. ಪುಟ್ಟಮರಿಗಳು ಜನರ ಕಂಡರೆ ವಿಚಲಿತಗೊಳ್ಳುವುದರಿಂದ ಅವುಗಳ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದೆಂದು ಎಚ್ಚರಿಕಾ ವಿಧಾನ ಅನುಸರಿಸಲಾಗಿತ್ತು.


ಗಣರಾಜ್ಯೋತ್ಸವದ ವಿಶೇಷವಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಗುರುವಾರ ಮೃಗಾಲಯಕ್ಕೆ ಭೇಟಿ ನೀಡಿದ್ದರಲ್ಲದೆ, ಇಂತಹ ವಿಶೇಷ ಸಂದರ್ಭದಲ್ಲಿ ತಾಯಿಯೊಂದಿಗೆ ಈ ಮೂರು ಮರಿಗಳ ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಿದರು.

ಬೋನ್‌ನಿಂದ ಹೊರಬಂದು ತಾಯಿಯೊಂದಿಗೆ ಸ್ವಚ್ಛಂದವಾಗಿ ಮೂರು ಮರಿಗಳು ವಿಶೇಷ ಹಾವ–ಭಾವದಿಂದ ವಿಹರಿಸುವುದನ್ನು ಕಂಡು ಪ್ರವಾಸಿಗರು ಸಂಭ್ರಮಿಸಿದರು.



ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


'ಜೀನ್ ವೃತ್ತಾಂತ ಹಾಗೂ ಜೀನ್ ಥೆರಪಿ' ಪುಸ್ತಕ ಬಿಡುಗಡೆ



ಮೈಸೂರು, ಜ.27(ಜಿಎ)– ನಗರದ ಜೆ.ಎಲ್.ಬಿ. ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜ್ಞಾನ ಲೇಖಕ ಸಾತನೂರು ದೇವರಾಜ್ ಅವರ 'ಜೀನ್ ವೃತ್ತಾಂತ ಹಾಗೂ ಜೀನ್ ಥೆರಪಿ' ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿದ ಅವರು, ಪುಸ್ತಕವನ್ನು ಬಹಳಷ್ಟು ಸ್ಪಷ್ಟವಾಗಿ ಬರೆದಿದ್ದು, ಸಾಮಾನ್ಯ ಜನರೂ ಓದಬಹುದಾಗಿದೆ. ವಿಜ್ಞಾನ ಇಲ್ಲದೆ ಪ್ರಪಂಚವಿಲ್ಲ. ವಿಜ್ಞಾನದ ಬಗ್ಗೆ ತಿಳಿದುಕೊಂಡರೆ, ಸಾಕಷ್ಟು ಕಾಯಿಲೆಗಳಿಗೆ ಉಪಶಮನ ದೊರೆಯಲಿದೆ. ಕ್ಯಾನ್ಸರ್ ರೋಗವನ್ನು ಅರ್ಥ ಮಾಡಿಕೊಳ್ಳುವಷ್ಟು ಬೆಳೆದಿಲ್ಲ. ಆದರೆ, ಜೀನ್ ಥೆರಪಿಯಿಂದ ಉಪಶಮನ ಸಾಧ್ಯವಿದೆ. ಪುಸ್ತಕದಲ್ಲಿ ಹೊಸದಾದ ವಿಷಯಗಳ ಬಗ್ಗೆ ಜನರಿಗೂ ತಿಳಿಸುವ ಪ್ರಯತ್ನವಾಗಿದೆ. ಸಾತನೂರು ದೇವರಾಜ್ ಎಲೆಮರೆ ಕಾಯಿಯಂತೆ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಹಾಗೂ ಜಾನಪದ ವಿದ್ವಾಂಸ ಡಾ.ರಾಮೇಗೌಡ, ಸ್ಪಂದನ ಸಾಂಸ್ಕೃತಿಕ ಪರಿಷತ್ತು ಅಧ್ಯಕ್ಷ ಸತೀಶ್ ಜವರೇಗೌಡ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಪ್ರಾಧ್ಯಾಪಕ ಡಾ.ಪ್ರಸನ್ನ ಸಂತೆ ಕಡೂರು, ಮಹಾರಾಣಿ ಸಪಪೂ ಕಾಲೇಜು ಉಪನ್ಯಾಸಕ ಡಾ.ಎ.ಎನ್. ಸಂತೋಷ್, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ಡಿ.ಎನ್.ಲೋಕಪ್ಪ, ಮಹಿಮಾ ಪ್ರಕಾಶನ ಪ್ರಕಾಶಕ ಕೆ.ವಿ.ಶ್ರೀನಿವಾಸ್ ಉಪಸ್ಥಿತರಿದ್ದರು.



ಬೂತ್ ವಿಜಯ ಸಂಕಲ್ಪ ಕಾರ್ಯಕ್ರಮದ ನಿಮಿತ್ತ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ. ಹೇಮಂತ ಕುಮಾರಗೌಡ ನೇತೃತ್ವದಲ್ಲಿ ಶುಕ್ರವಾರ ಇಲವಾಲ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಬಿಜೆಪಿ ಸರಕಾರದ ಸಾಧನೆಗಳನ್ನು ತಿಳಿಸಲಾಯಿತು. ಈ ವೇಳೆ ಮುಡಾ ಮಾಜಿ ಸದಸ್ಯ ಟಿ.ರಮೇಶ್, ಇಲವಾಲ ಶಕ್ತಿ ಕೇಂದ್ರದ ಅಧ್ಯಕ್ಷ ಬಸವರಾಜ, ಎಪಿಎಂಸಿ ಸದಸ್ಯ ರವಿ, ಕಾರ್ಯದರ್ಶಿ ವೀರಭದ್ರ, ವಿನ್ಸೆಂಟ್ ಕುಮಾರ, ಯಶೋಧಮ್ಮ, ಸೀಗಹಳ್ಳಿ ರವಿ, ಮುಂತಾದವರು ಭಾಗವಹಿಸಿದ್ದರು.

ಮೈಸೂರು ರೈಲ್ವೆ ವಿಭಾಗಕ್ಕೆ ಮೂರನೇ ತ್ರೈಮಾಸಿಕದಲ್ಲಿ ಶೇ.3ರಷ್ಟು ಅಧಿಕ ಆದಾಯ

- ಈ ಅವಧಿಯಲ್ಲಿ 886 ಕೋಟಿ ರೂ. ಆದಾಯ ಸಂಗ್ರಹ : ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರವಾಲ್
- ಕಳೆದ ಡಿಸೆಂಬರ್‌ನಲ್ಲಿ ಸರಕು ಸಾಗಾಣೆಯಿಂದ ದಾಖಲೆಯ 108.60 ಕೋಟಿ ಸಂಗ್ರಹ

ಮೈಸೂರು,ಜ.27(ಎಂಟಿವೈ)– ಪ್ರಸಕ್ತ ಸಾಲಿನ 3ನೇ ತ್ರೈಮಾಸಿಕ ಅಂತ್ಯದವರೆಗೆ ಮೈಸೂರು ರೈಲ್ವೆ ವಿಭಾಗ ಅತ್ಯುತ್ತಮ ಪ್ರಗತಿ ಸಾಧಿಸಿದ್ದು, 2022ರ ಡಿಸೆಂಬರ್ ಅಂತ್ಯದವರೆಗೆ 886 ಕೋಟಿ ರೂ. ಆದಾಯ ಸಂಗ್ರಹವಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಶೇ. 3ರಷ್ಟು ಆದಾಯ ಹೆಚ್ಚಾಗಿದೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರವಾಲ್ ತಿಳಿಸಿದ್ದಾರೆ.

ಮೈಸೂರು ವಿಭಾಗದ ವತಿಯಿಂದ ನಗರದ ರೈಲ್ವೆ ಕ್ರೀಡಾ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ 74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರಕು ಸಾಗಣೆ ವಿಭಾಗದಲ್ಲಿ 557.34 ಕೋಟಿ ರೂ. ಆದಾಯದೊಂದಿಗೆ 6.53 ಮಿಲಿಯನ್ ಟನ್ ಸರಕನ್ನು ಸಾಗಾಣೆ ಮಾಡಿದ್ದು, ಇದು ಹಿಂದಿನ ವರ್ಷಕ್ಕೆ (504.71 ಕೋಟಿ ರೂ. ಆದಾಯ ಮತ್ತು 6.49 ಮೆಟ್ರಿಕ್ ಟನ್ ಲೋಡಿಂಗ್) ಹೋಲಿಸಿದರೆ ಕ್ರಮವಾಗಿ ಶೇ.10, ಶೇ.1ರಷ್ಟು ಹೆಚ್ಚಾಗಿದೆ. ಮೈಸೂರು ವಿಭಾಗವು 30.93



ಕೋಟಿ ರೂ. ಇತರ ಮೂಲಗಳಿಂದ ಆದಾಯ ಗಳಿಸಿದ್ದು, ಹಣಕಾಸು ಇಲಾಖೆ ಆಂತರಿಕ ತಪಾಸಣೆಯ ಸಮಯದಲ್ಲಿ ತೋರಿಸಿದ ದಕ್ಷತೆಯಿಂದಾಗಿ 9 ತಿಂಗಳಿನಲ್ಲಿ 37.81 ಕೋಟಿ ರೂ. ಉಳಿತಾಯವಾಗಿದೆ. ಮೈಸೂರು ವಿಭಾಗದ ಇತಿಹಾಸದಲ್ಲಿ ಮೊದಲ ಬಾರಿಗೆ ಒಂದು ತಿಂಗಳಿನಲ್ಲಿ ಸರಕು ಸಾಗಾಣೆಯಲ್ಲಿ 100 ಕೋಟಿ ರೂ. ಗಳಿಕೆ ದಾಟಿದ್ದು, 108.60 ಕೋಟಿ ರೂ. ಸಾಗಣೆ 2022ರ ಡಿಸೆಂಬರ್‌ನಲ್ಲಿ ಸಾಧ್ಯವಾಗಿದೆ ಎಂದರು.

ರೈಲ್ವೆಯು ಪ್ರಯಾಣಿಕರ ಸೌಕರ್ಯ ಮತ್ತು ಸುರಕ್ಷತೆಗೆ ಆದ್ಯತೆ ನೀಡಿದ್ದು, ಮೈಸೂರು ವಿಭಾಗದ ವ್ಯಾಪ್ತಿಯ ರೈಲಿನಲ್ಲಿ ಕಳೆದ ಡಿಸೆಂಬರ್‌ವರೆಗೆ 23.61 ಮಿಲಿಯನ್ ಜನರು ಪ್ರಯಾಣಿಸಿದ್ದಾರೆ. ರೈಲುಗಳ ಸಮಯ ಪಾಲನೆಯ ಕಾರ್ಯಕ್ಷಮತೆ ಉತ್ತಮವಾಗಿದ್ದು, ಮೇಲ್, ಎಕ್ಸ್‌ಪ್ರೆಸ್ ರೈಲುಗಳು ಶೇ.98.7ಕ್ಕಿಂತ ಹೆಚ್ಚು ಸಮಯ ಪಾಲನೆಯೊಂದಿಗೆ ಸಂಚರಿಸುವುದರೊಂದಿಗೆ ಗಮನಾರ್ಹ ಸುಧಾರಣೆ ಕಂಡಿದೆ ಎಂದು ತಿಳಿಸಿದರು.

ಪ್ರಯಾಣಿಕರ ಅನುಕೂಲಕ್ಕಾಗಿ 20 ನಿಲ್ದಾಣಗಳಲ್ಲಿ ಸ್ವಯಂ ಚಾಲಿತ ಘೋಷಣಾ ವ್ಯವಸ್ಥೆ ಪ್ರಾರಂಭಿಸಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ 35 ನಿಲ್ದಾಣಗಳಲ್ಲಿ ಎರಡೂ ಕಡೆಯ ಎಲ್‌ಇಡಿ ಜಿಪಿಎಸ್ ಗಡಿಯಾರ ಅಳವಡಿಸಲಾಗಿದೆ. ಕಾರ್ಯಾಚರಣೆಯ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಶೂನ್ಯ ಅಪಘಾತಗೊಳಿಸಲು ಎಲ್ಲಾ ಹಂತಗಳಲ್ಲಿ ಸುರಕ್ಷತಾ ನಿಯಮಾವಳಿ ಪಾಲಿಸಲು ಕಟಿಬದ್ಧವಾಗಿದೆ. ರೈಲ್ವೆ ಮೇಲ್ಸೇತುವೆ, ಕೆಳಸೇತುವೆ ನಿರ್ಮಿಸುವ ಮೂಲಕ ವಿಭಾಗದ ವ್ಯಾಪ್ತಿಯಲ್ಲಿರುವ ಐದು ಲೆವೆಲ್ ಕ್ರಾಸಿಂಗ್ ತೆಗೆದುಹಾಕಲಾಗಿದೆ ಎಂದು ತಿಳಿಸಿದರು.

ವಿಭಾಗದ ಹಳಿಗಳಲ್ಲಿ ವೇಗವನ್ನು ಹೆಚ್ಚಿಸುವ ಪ್ರಯತ್ನದಲ್ಲಿ 119 ಕಿ.ಮೀ.ಗಳಷ್ಟು ಹಳಿಯಲ್ಲಿ ಗರಿಷ್ಠ ವೇಗವನ್ನು ಗಂಟೆಗೆ 110 ಕಿ.ಮೀ.ಗೆ ಏರಿಸಲಾಗಿದೆ. ಚಿಕ್ಕ ಜಾಜೂರು–ರಾಯದುರ್ಗ, ಹಾಸನ–ಸಕಲೇಶಪುರ ನಡುವಿನ 172 ಕಿಮೀಗಳಷ್ಟು ಲೂಪ್‌ಲೈನ್‌ನಲ್ಲಿ ವೇಗವನ್ನು 15 ಕಿ.ಮೀ.ನಿಂದ 30 ಕಿ.ಮೀ.ಗೆ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ವೇಗದ, ಆರ್ಥಿಕ ಸಹಕಾರಿ, ಪರಿಸರ ಪೂರಕ ಪ್ರಯಾಣಕ್ಕಾಗಿ ರೈಲ್ವೆಯು ವೇಗದ ವಿದ್ಯುದೀಕರಣ ಯೋಜನೆಗಳಿಗೆ ಬದ್ಧವಾಗಿದೆ. ಹೊಸದುರ್ಗ–ಬೀರೂರು, ಚಿಕ್ಕ ಜಾಜೂರು–ತೋಳಹುಣಸೆ, ಮೈಸೂರು–ಚಾಮರಾಜನಗರ, ಬೀರೂರು–ಅರಸೀಕೆರೆ–ಸಂಪಿಗೆರೋಡ್ ಮತ್ತು ಬೀರೂರು–ಮಸರಹಳ್ಳಿ ಭಾಗಗಳ ನಡುವೆ ಸುಮಾರು 275 ಕಿ.ಮೀ.ಗಳಷ್ಟು ವಿದ್ಯುದೀಕರಣ ಪೂರ್ಣಗೊಂಡಿದೆ ವಿಭಾಗದಲ್ಲಿನ ಇತರ ವಿದ್ಯುದೀಕರಣ ಯೋಜನೆಗಳು ಪ್ರಗತಿಯಲ್ಲಿವೆ. ಡಿಸೆಂಬರ್ 2023ರೊಳಗೆ ಎಲ್ಲ ಬ್ರಾಡ್‌ಗೇಜ್ ಮಾರ್ಗಗಳನ್ನು ಸಂಪೂರ್ಣವಾಗಿ ವಿದ್ಯುದೀಕರಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ರೈಲ್ವೆ ಇಲಾಖೆಯ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ.ಮಂಜುನಾಥ್ ಕನಮಡಿ ಸೇರಿದಂತೆ ಇನ್ನಿತರರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ವೈಟರ್ಸ್, ಕ್ಲೀನರ್ಸ್, ನಾರ್ತ್ ಇಂಡಿಯನ್ ಕುಕ್, ಸೂಪರ್‌ವೈಸರ್ ಮೈಸೂರಿನ ಪ್ರತಿಷ್ಠಿತ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ.
7019883387

PAY 6 LAKHS & BOOK 30X40 / 30X50 SITE (80% LOAN)
ತಕ್ಷಣ ಮನೆ ಕಟ್ಟಲು ಯೋಗ್ಯ ಸೈಟುಗಳು ನಮ್ಮ ಬಡಾವಣೆಗಳಲ್ಲಿ ಲಭ್ಯವಿದೆ. ಟಿನರ್ಸಪುರ ಮುಖ್ಯರಸ್ತೆ (ಚಿಕ್ಕಳ್ಳಿ) ಮತ್ತು ಪೊಲೀಸ್ ಲೇಔಟ್, 3ನೇ ಹಂತ ನಂತರ, ಬೆಲೆ 25 ಲಕ್ಷ / 35 ಲಕ್ಷ, Broker Excuse
7892445689

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED TVs Doorstep Service
Mob: 9886226672

ಮಾರುವವರು – ಕೊಳ್ಳುವವರು
18x40 - 20x30
30x40 - 40x60 - 50x80
ಎಲ್ಲಾ ಅಳತೆಯ ಹೊಸ ಮನೆ ಹಳೆ ಮನೆ, ಸೈಟ್ – ಮೈಸೂರು ನಗರದ ಎಲ್ಲಾ ಬಡಾವಣೆಗಳಲ್ಲಿ ಮಾರುವವರು – ಕೊಳ್ಳುವವರು ಸಂಪರ್ಕಿಸಿ.
8618495118

2 BHK APPROVED MUDA 30x40 NEW HOUSE FOR SALE
Near St. Joseph's School, Ilwala
8217851695

ಬೇಕಾಗಿದ್ದಾರೆ
ಓಮಿನಿ ಕಾರ್ ಡ್ರೈವರ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ
ಶಿವರಾಮ್ ಆರ್ಟ್ ಸೂರ್ಯ ಬೇಕರಿ ಹತ್ತಿರ, ಹೆಬ್ಬಾಳ್
9731305656

SITES FOR SALE
ಕೇಶವಮೂರ್ತಿ ಬಡಾವಣೆ
30x40, 30x50 MUDA APPROVED
Sq.feet 2800/-
SK DEVELOPER & PROPERTIES, Office: JP nagar Ringroad, Mysore.
8453531221

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed.
ವಿವಾಹ ನೋಂದಣಿಗೆ ಕರೆ ಮಾಡಿ (2nd Marriage also)
9164743059

MUDA SITE FOR SALE
40x60 East Facing Site Kuvempunagar, Mysore
50x80 Site Near Andolana Circle, Mysore
9900464111

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕ್‌ಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿರುವ ಅಡಕನಹಳ್ಳಿ ಮತ್ತು ಕಡಕೊಳ ಇಂಡಸ್ಟ್ರಿಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9740324112 / 9035269781
0821-4852002 / 2303459

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Ankethana Road, Kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಆಫೀಸ್ ಬಾಯ್, ಕಲೆಕ್ಷನ್ ಎಕ್ಸಿಕ್ಯೂಟಿವ್. ಮೈಸೂರಿನ ನಿವಾಸಿ ಆಗಿರಬೇಕು. ಸಂಪರ್ಕಿಸಿ
7349672310

FOR SALE
1) 30x40 30x50 sites in Defence apartment Near Kote Road
2) 28 Guntas Land in Varkodu Bannur and TNP Road Near
3) 17/60 3 BHK Kamakshi Hospital near Saraswathi Puram
4) 40x60 KC layout
5) 30x40 Duplex house Srirampura
90359 90359 / 95386 90359

SC ಆದಿ ಕರ್ನಾಟಕ (ಬಲಗೈ)
BE, M.Tech, MBBS, MS, MD, BAMS, M.Sc, M.Com, MBA, MCA, MA, Ph.d, B.Sc, BCA, B.Com, B.A, B.Ed.
ವಧು ವರರಿಗೆ ಸಂಪರ್ಕಿಸಿ: "ನವಿಲೂರು ರಂಗಸ್ವಾಮಿ" ಮೈಸೂರು ಸಿಟಿ, ವಧು ವರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು.
8711974172

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿದ್ದು ಚಿಕ್ಕ ಸಲಕರಣೆಗಳ ಹೊಸ ಟ್ರಿಕ್ಸ್ ಪ್ರಯೋಗ. PG ವ್ಯವಸ್ಥೆಯೂ ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute
Mob.: 9986926101

NUETECH SOLAR WATER HEATER

ವಿ.ಐ ನೀರಿನ ಸಮಸ್ಯೆಗೆ ಹಾಗೂ ದೀರ್ಘ ಕಾಲದ ಬಾಳಿಕೆಗಾಗಿ ಹಾಗೂ 10 ವರ್ಷ ವಾರಂಟಿ.
Company Super Stockist USHA KIRAN AGENCY
9844069190


ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಸ್ಥಳ: ಬನ್ನಿಮಂಟಪ, ಮೈಸೂರು.
ಸಂಬಳ: 10,000 – 15,000.
Ph: 0821-2491755

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

SITE CUM CONSTRUCTION
60x30 Site and Construction with Latest modern amenities.
Total Cost Rs. 1.15 Crores
Cost inclusive of
1) Site, 2) Registration,
3) 10 Squares of Construction,
4) Solar, 5) UPS
9242170927

ಬೇಕಾಗಿದ್ದಾರೆ
ಹೋಟೆಲ್‌ಗೆ ರೂಮ್ ಬಾಯ್ಸ್ ಬೇಕಾಗಿದ್ದಾರೆ. ವಿಜಯನಗರ 1ನೇ ಹಂತ. ಊಟ, ವಸತಿ, ಉಚಿತ
ಸಂಬಳ: 12,000/–
9886758911


Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಹನ ಮಾಂತ್ರಿಕ ಪಂ| ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ.: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ವ್ಯಾಪಾರ, ಉದ್ಯೋಗ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಸ್ಥಳ: ಹೋಟೆಲ್ ಗೋವರ್ಧನ ಹತ್ತಿರ, ಮೈಸೂರು.

2 BHK APPROVED MUDA 30x40 NEW HOUSE FOR SALE
Near St. Joseph's School, Ilwala
8217851695

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಹೋಮ ಮಾಂತ್ರಿಕ ಅಥರ್ವಣ ವೇದ ಪ್ರಯೋಗದಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ವಿವಾಹ, ಉದ್ಯೋಗ, ವ್ಯಾಪಾರ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ.
ಬಾರಾಮುಖ ಪಕ್ಕ, ಟಿಬೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ, ಸಬರ್ಬನ್ ಬಸ್ ಸ್ಟ್ಯಾಂಡ್, ಮೈಸೂರು.

ಜಮೀನು ಬೇಕಾಗಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ ಹಾಗೂ ಹಂಪಾಪುರ ಹೋಬಳಿ. 1 ಎಕರೆ ಯಿಂದ 5 ಎಕರೆ ವರೆಗೆ ಜಮೀನು ಬೇಕಾಗಿದೆ. ಸಂಪರ್ಕಿಸಿ:
9663793666, 9945661696

ಬೇಕಾಗಿದ್ದಾರೆ
DTP / ಡಿಜಿಟಲ್ ಬೋರ್ಡ್ ಕಂಪ್ಯೂಟರ್ ಡಿಸೈನರ್
ಮಹಿಳೆ ಬೇಕಾಗಿದ್ದಾರೆ. ಕನ್ನಡ, ಹಿಂದಿ ಮಾತನಾಡುವವರು, ಶಿವರಾಮ್ ಆರ್ಟ್ ಸೂರ್ಯ ಬೇಕರಿ ಹತ್ತಿರ, ಹೆಬ್ಬಾಳ್
9731305656

ಬೇಕಾಗಿದ್ದಾರೆ
ಮೈಸೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ ಫ್ರೆಶ್ ಫ್ರೋಜನ್ ಕಂಪನಿಯಲ್ಲಿ ಕೆಲಸ ನಿರ್ವಹಿಸಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
1. ಕೋಲ್ಡ್ ರೂಮ್ / ಕೋಲ್ಡ್‌ಚೈನ್ ಇನ್‌ಚಾರ್ಜ್ (1 Year Experience)
2. ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ (1 Year Experience)
3. ಫೀಲ್ಡ್ ಎಕ್ಸಿಕ್ಯೂಟಿವ್ಸ್
8105863950 / 9980429367

ನಮಗೆ ಸಾಲ ಬೇಕಾಗಿದೆ
Need finance against property 5 Cr.
Contact:
Mob: 8618572064

Job Opening / Requirement
For Transport Co., Manager, Office Staffs, Goods vehicle drivers and sales persons, loaders. Eligibility PUC and above with good English, computer knowledge with experience in the field preferred. Salary: Rs. 15K to 25K. T&C Apply. Contact:
Mob: 9945026767

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಲ್
ಮೊ.: 9731839596
ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಕಲಹ, ಸಂತಾನ, ವ್ಯಾಪಾರ, ಉದ್ಯೋಗ ಸಮಸ್ಯೆಗಳಿಗೆ ಪರಿಹಾರ. ಹೊಸ ಬಿ.ಸಿ. ಆಫೀಸ್ ಎದುರು, ಬಿಲ್ಲಾಗಿಗಾಡಿ ರಸ್ತೆ, ಮೈಸೂರು.

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಹಾಗೂ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಶಿಕ್ಷಕರ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

SITE FOR SALE
30x40 South face, D. Ravishankar Layout, Near Christ Public School, Mysore.
Brokers Excuse
Mob: 9448335448

ಬಾಡಿಗೆಗಿದೆ
ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ಹುಂಡಾಯ್ ಕಾರ್ ಶೋರೂಂ ಪಕ್ಕ ಇರುವ ಓಪನ್ ಸ್ಪೇಸ್ 15x50 ಅಡಿಗಳು ಅವಶ್ಯಕತೆಗೆ ಅನುಕೂಲವಾಗಿ ನಿರ್ಮಿಸಲಾಗಿದೆ. ಸಂಪರ್ಕಿಸಿ:
8105494550
9538608440

FOR SALE
New Apartment Flat 1100 Sq.ft. 2 BHK, North Face Car Parking and lift facility available, M Block, Near Shanthi Sagar Complex Kuvempunagar, Mysuru. For More Details Contact:
9449601309

ಬೇಕಾಗಿದ್ದಾರೆ
ಸೆಕ್ಯೂರಿಟಿ ಕೆಲಸ ಮಾಡಲು ಅನುಭವವುಳ್ಳ ಪುರುಷ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ESI + PF ಹಾಗೂ ಆಕರ್ಷಕ ವೇತನ. 12 ಗಂಟೆಗಳ ಪಾಳಿ, ಕೆಲಸದ ಸಮಯದಲ್ಲಿ ಊಟದ ವ್ಯವಸ್ಥೆ ಇರುತ್ತದೆ, ತಕ್ಷಣ ಸಂಪರ್ಕಿಸಿ. ನಂಜನಗೂಡು, ಚಿಕ್ಕಯ್ಯನ ಛತ್ರದ ಬಳಿ ಇರುವ ಕೈಗಾರಿಕಾ ಪ್ರದೇಶ.
9060075860, 8618971363

SITE SALE
40x60 site sale Suvarna Nagar, Bogadi Gaddige Road (Near Rainbow School).
Call: 9880273834

ಮಿಲನ–ವೀರಶೈವ ಲಿಂಗಾಯತ
ವಧು–ವರರ ವಿವಾಹ ಸಲಹೆಗಳು (on line) ನಮ್ಮಲ್ಲಿ 21 ರಿಂದ 42 ವರ್ಷದ ವಧು ಮತ್ತು ವರಗಳ ಮಾಹಿತಿಯನ್ನು ಹೊಂದಿದ್ದೇವೆ. 1st & 2nd marriage ನ ಮಾಹಿತಿ ಹೊಂದಿದ್ದೇವೆ.
ಫೋ.: 95351-11195

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 9108566022

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬೇಕಾಗಿದ್ದಾರೆ
ಯಾದವಗಿರಿ ಮತ್ತು ಗಂಗೋತ್ರಿ ವಿಭಾಗದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,000/– ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9880727819

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 8000 ದಿಂದ 10 ಸಾವಿರದವರೆಗೆ (ಅನುಭವದ ಆಧಾರದ ಮೇಲೆ), ಸಮಯ ಬೆಳಿಗ್ಗೆ 09.30 ರಿಂದ ರಾತ್ರಿ 9.00 ರವರೆಗೆ. ಸ್ಥಳ ಹೆಬ್ಬಾಳ್ ಹಾಗೂ ಅಗ್ರಹಾರ. ಸಂಪರ್ಕಿಸಿ:
9986322444 / 9986311444

ಬೇಕಾಗಿದ್ದಾರೆ
ಡಿ.ಜೆ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುವೆಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000/-
Ph.9380142144
ಶಿವರಾಂಪೇಟೆ, ಮೈಸೂರು

ನಿರ್ಮಲ ಸರ್ವೀಸ್ ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

HOUSE RENT AVAILABLE
ಮನೆ ಬಾಡಿಗೆಗೆ ಇದೆ
H.No. 172, Nadana Halli, Ragi Mill Street, Raja Shekar Hospital, Behind 3 bedroom, North Face.
7975023201 / 7815812948

ಮೈಸೂರು ಮ್ಯಾರೇಜ್ ಬ್ಯೂರೋ
ವೀರಶೈವ ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ಅರಸು, ನಾಯಕ, ಆದಿ ಕರ್ನಾಟಕ, ದೇವಾಂಗ, ಮಡಿವಾಳ, ತಮಿಳು ಮೊದಲಿಯಾರ್, ಬಲಿಜ, ವಿಶ್ವಕರ್ಮ, ಇನ್ನು ಎಲ್ಲಾ ಜಾತಿಯ ವಧು ವರರಿಗೆ ಸಂಪರ್ಕಿಸಿ:
ಡಾ.ಗುರೂಜಿ
9448229184
7899625268

40x60 ಸೈಟು @ Rs. 52.50 ಲಕ್ಷ
MUDA Approved Layout
ತಕ್ಷಣ ಮನೆ ಕಟ್ಟಬಹುದು. ಇಲವಾಲ ಬಸ್ಸು ನಿಲ್ದಾಣ ಹಿಂಭಾಗ ಹುಣಸೂರು ರೋಡ್, ಮೈಸೂರು.
9538583377

ಸೈಟು ಮಾರಾಟಕ್ಕಿದೆ
ಹಿನಕಲ್ ಫ್ಲೈ ಓವರ್ ಮತ್ತು ರಿಂಗ್ ರೋಡ್ ಹತ್ತಿರ ಮಾನಸ ಅಪಾರ್ಟ್‌ಮೆಂಟ್ ಪಕ್ಕ
55x51, 11 B ಖಾತಾ, ರೆವಿನ್ಯೂ ಸೈಟ್
9945657218

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ 90% ಲೋನ್ ಮಾಡಿಸಿ. 20x30, 2BHK ಮನೆ Construction ಮಾಡಿಕೊಡುತ್ತೇವೆ. ಹಾಲನಹಳ್ಳಿ, Signal ಪೊಲೀಸ್ ಲೇಔಟ್.
9620528490

SITE FOR SALE
JnanaBharathi Layout, Dadadahalli, MUDA Khata,
1) 30x40, East Facing, 24 Lakhs
2) 29x40, South East Corner, 26 Lakhs.
Contact Owner :
9342123373

40x60 ಸೈಟು @ Rs. 34 ಲಕ್ಷ
MUDA Approved Layout
ತಕ್ಷಣ ಸೊಂದಣಿ / ಬ್ಯಾಂಕ್ ಲೋನ್ ಲಭ್ಯ, ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ, ಚಾಮುಂಡಿ ಬೆಟ್ಟದ ಹಿಂಭಾಗ.
9538583377

ಶಿರಿಡಿ ವಿಮಾನ ಪ್ರವಾಸ
09–02–2023 ಶಿರಿಡಿ ಪ್ರವಾಸ 3 ಜ್ಯೋತಿರ್ಲಿಂಗದೊಂದಿಗೆ, ಶನಿಸಿಂಗಣಾಪುರ, ಗೃಷ್ಣೇಶ್ವರ, ಜ್ಯೋತಿರ್ಲಿಂಗ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ, ಬುಕ್ಕಿಂಗ್ ಕೊನೆಯ ದಿನಾಂಕ: 31/01/2023. ಮೈತ್ರಿ ಟ್ರಾವೆಲ್ಸ್
9482421499
8660756131

HOUSE FOR RENT
Commercial Space Ground Floor Residential (2 BHK) 1st Floor on Mahadevapura Main Road, Near Indian Bank, Udayagiri.
7760973609 / 9148777052

ಬೇಕಾಗಿದ್ದಾರೆ
ಮಾರ್ವೆಲಸ್ ಬ್ಯೂಟಿ ಪಾರ್ಲರ್‌ಗೆ ಹುಡುಗಿಯರು ಬೇಕಾಗಿದ್ದಾರೆ.
Marvelous Beauty Parlour
K.D.Road, Vijayanagar 1st Stage. Contact:
7899910101

ಸೈಟು ಮಾರಾಟಕ್ಕಿದೆ
30x50 ಪೂರ್ವ ಮರಕೂಡು ಹತ್ತಿರ
30x40 ಪೂರ್ವ ಮರಕೂಡು ಹತ್ತಿರ
40x60 ವರುಣ ಹತ್ತಿರ
ಸಂಪರ್ಕಿಸಿ:
7795267359

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
23/2:– ದೆಹಲಿ, ವೈಷ್ಣೋದೇವಿ, ಅಮೃತಸರ್, ಧರ್ಮಶಾಲಾ, ಚಂಡೀಗಢ ಇತ್ಯಾದಿ.
8/2:– ಕಾಶಿ, ಗಂಗಾ, ಬುದ್ಧ ಗಂಗಾ, ಪ್ರಯಾಗ್‌ರಾಜ್, ಅಯೋಧ್ಯೆ.
11/2:– ಪುರಿ ಜಗನ್ನಾಥ್, ಕೊನಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ್, ಚಂದ್ರಭಾಗ ಬೀಚ್.
9/3:– ನೇಪಾಳ ಮುಕ್ತಿನಾಥ್, ಪಶುಪತಿನಾಥ್.
9591017782
9964527782

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಸಸ್ಯಹಾರಿ ಹೋಟೆಲ್ ಒಂದಕ್ಕೆ
* ಕಾಫಿ & ಟೀ ಭಟ್ಟರು – 2
* ಕೌಂಟರ್ ಬಾಯ್ – 4
* ರುಬ್ಬುವವರು – 2
9945059645

ಡಿ.ಇಡಿ ಅಥವಾ ಟಿ.ಸಿ.ಎಚ್ ತರಬೇತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ
ಕಳಸ್ತವಾಡಿ, ಸಿದ್ದಲಿಂಗಪುರ ಪೋಸ್ಟ್, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ. ಸಂಪರ್ಕಿಸಿ:
9916778412
9880348677

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ಪರಿತ್ಯಕ್ತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಸಂಬಳ: 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ)
7760043596

SHOP FOR RENT
ಬಾಡಿಗೆಗೆ ದೊರೆಯುತ್ತದೆ
1) Tea Shop
2) Men's Parlour - Shop
3) Women Parlour - Shop
4) Maruthi Van
9611263045

APARTMENT FOR SALE
Spacious, 2 BHK, Chamarajapuram, Excellent Location with Car Parking, Clear Title, 52 Lakhs, Negotiable, Borkers Excuse. Contact:
8971495997 / 9844539729

ಓಂ ಶ್ರೀ ಮಲೆಮಾದೇಶ್ವರ ಸ್ವಾಮಿ ಜ್ಯೋತಿಷ್ಯ ಕೇಂದ್ರ
ಕೇರಳ ಮತ್ತು ಕೊಳ್ಳೇಗಾಲದ ನಂಬರ್ ಒನ್ ಗುರೂಜಿ ಶ್ರೀ ಎಸ್.ಎಸ್.ರಾವ್ ಅವರು ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ವ್ಯಾಪಾರ, ಉದ್ಯೋಗ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
9880415389

2 BHK APPROVED MUDA 30x40 NEW HOUSE FOR SALE
Near St. Joseph's School, Ilwala
8217851695

SITE FOR SALE
30x40 Site for Sale North Facing, at Lalithadripura Shree Shreesha Hill View Phase 3, 800 Mtr from Ring Road.
9620349543

ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)
BE/MBA/M.Tech/MD/MS/Phd ಮುಂತಾದ India/USA/UK/Australia / Germany ಯ ವಧು –ವರರ ಮಾಹಿತಿಗಾಗಿ ಸಂಪರ್ಕಿಸಿ, ಜಯನಗರ, ಮೈಸೂರು. web: http:// www.sapthapadhimatrimony.com
9663199511

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ಸೌಲಭ್ಯದೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಟಿ.ಎ. 15,200–86000.
9740733021 / 9535028750

ಸೈಟುಗಳು ಮಾರಾಟಕ್ಕಿವೆ
20x30, 30x40, 40x60
No Brokarage
ನೇರ ಡೆಲವಪರ್
Bank ಸಾಲದೊಂದಿಗೆ
9060507585
7795081234

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯೋಗದಾರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time - Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary - PF - ESI, Age above 30 years.
9886512889
9008799156

ಮಂಡಿ ನೋವು
ಮಂಡಿನೋವು, ಸೊಂಟನೋವು ಮತ್ತು ಬೆನ್ನು ನೋವು ಎಷ್ಟೇ ಹಳೆಯದಾದರೂ ಹಾಗೂ ಎಷ್ಟೇ ಚಾಸ್ತಿಇದ್ದರೆ 100% ಆಯುರ್ವೇದ ಚಿಕಿತ್ಸೆಗಾಗಿ ಸಂಪರ್ಕಿಸಿ. ಯಾವುದೇ ಅಡ್ಡಪರಿಣಾಮ ಇರುವುದಿಲ್ಲ.
6361740552

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮೈಸೂರು ಮಿತ್ರ

ತಿ.ನರಸೀಪುರದಲ್ಲಿ ನೂತನ ಬಿಜೆಪಿ ಕಚೇರಿ ಉದ್ಘಾಟನೆ

ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ಮತ್ತೆ ಅಧಿಕಾರ

ಮಾಜಿ ಶಾಸಕ ಡಾ.ಎನ್.ಎಲ್.ಭಾರತೀಶಂಕರ್ ವಿಶ್ವಾಸ



ತಿ.ನರಸೀಪುರ, ಜ.27– ಭಾರತೀಯ ಜನತಾ ಪಕ್ಷ ವಿಜಯ ಸಂಕಲ್ಪ ಅಭಿಯಾನದ ಮೂಲಕ ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸುತ್ತಿದ್ದು, ಮುಂಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರ ಹಿಡಿಯಲಿದೆ ಎಂದು ಮಾಜಿ ಶಾಸಕ ಡಾ.ಎನ್.ಎಲ್.ಭಾರತೀಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ನೂತನ ಬಿಜೆಪಿ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಜನರ ವಿಶ್ವಾಸಗಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದರೂ, ವಿರೋಧ ಪಕ್ಷದವರು ಅಪಪ್ರಚಾರ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಜನಪರ ಕಾರ್ಯಕ್ರಮ ಜಾರಿಗೊಳಿಸಿ ಪ್ರತಿಯೊಬ್ಬರಿಗೂ ಸೌಲಭ್ಯ ಸಿಗುವಂತೆ ಮಾಡಿದ್ದಾರೆ. ವಿಜಯ ಸಂಕಲ್ಪ ಅಭಿಯಾನದ ಮೂಲಕ ಪ್ರತಿ ಮನೆ ಮನೆಗೆ ತೆರಳಿ ಸರ್ಕಾರದ ಸಾಧನೆಗಳನ್ನು ಕಾರ್ಯಕರ್ತರು ತಿಳಿಸಬೇಕು ಎಂದರು.

ಕ್ಷೇತ್ರದ 227 ಬೂತ್‌ಗಳಲ್ಲೂ ವಿಜಯ ಸಂಕಲ್ಪ ಅಭಿಯಾನದ ಮೂಲಕ ಪಕ್ಷ ಸಂಘಟಿಸಲಾಗುತ್ತಿದೆ. ಕಾರ್ಯಕರ್ತರು ಸರ್ಕಾರದ ಯೋಜನೆಗಳನ್ನು ತಿಳಿಸಬೇಕು. 2023ರ ಚುನಾವಣೆಯಲ್ಲಿ ತಿ.ನರಸೀಪುರದಿಂದ ಬಿಜೆಪಿ ಶಾಸಕರ ಆಯ್ಕೆ ಮಾಡಲು ಎಲ್ಲರೂ ಸಂಕಲ್ಪ ಮಾಡಬೇಕಿದೆ ಎಂದರು.

ಕಾಂಗ್ರೆಸ್ಸಿಗರ ಹಗಲು ಗನಸು: ಕಾಂಗ್ರೆಸ್ ಬಿಜೆಪಿಯ 40% ಭ್ರಷ್ಟಾಚಾರವನ್ನು ಮುಂಬರುವ ಚುನಾವಣೆಯಲ್ಲಿ ಜನರಿಗೆ ತಿಳಿಸಿ ಗೆಲ್ಲುವ ತಯಾರಿಯಲ್ಲಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಭಾರತೀ ಶಂಕರ್, ಕಾಂಗ್ರೆಸ್‌ನವರು ಹಗಲುಗನಸು ಕಾಣುತ್ತಿದ್ದಾರೆ. ಭ್ರಷ್ಟಾಚಾರದ ಮೂಲವೇ ಕಾಂಗ್ರೆಸ್ ಪಕ್ಷ. ಬಿಜೆಪಿಗೆ ಭ್ರಷ್ಟಾಚಾರದ ಪಟ್ಟ ಕಟ್ಟಲು ಮುಂದಾಗಿದೆ. ಬಿಜೆಪಿ ಬಗ್ಗೆ ಮಾತನಾಡುವ ನೈತಿಕ ಹಕ್ಕು ಕಾಂಗ್ರೆಸ್‌ಗೆ ಇಲ್ಲ ಎಂದು ಕಿಡಿಕಾರಿದರು.

ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ: ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ಕ್ಷೇತ್ರದಲ್ಲಿ ಬಿಜೆಪಿ ಸಂಘಟಿಸಲು ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪೇಜ್ ಪ್ರಮುಖ್, ವಾಟ್ಸಪ್ ಗ್ರೂಪ್‌ಗಳನ್ನು ರಚಿಸಬೇಕು. ವಿಜಯ ಸಂಕಲ್ಪ ಅಭಿಯಾನ ಜ.29ವರೆಗೆ ನಡೆಯಲಿದ್ದು, ಕಾರ್ಯಕರ್ತರು ಪಕ್ಷ ಸಂಘಟಿಸಬೇಕು. 2ನೇ ಹಂತದಲ್ಲಿ 5 ಅಂಶಗಳ ಕಾರ್ಯಕ್ರಮ ಆಯೋಜಿಸಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳ ಕರಪತ್ರವನ್ನು ಮನೆ ಮನೆಗೆ ತಲುಪಿಸುವುದು. ಪಕ್ಷದ ಚಿಹ್ನೆಯ ಸ್ಟಿಕ್ಕರ್ ವಿತರಣೆ, ಈ ಹಿಂದಿನ ಪಕ್ಷದ ಸದಸ್ಯತ್ವ 3 ವರ್ಷ ಅವಧಿ ಮುಗಿದಿದ್ದು, ಮತ್ತೊಮ್ಮೆ ಮಿಸ್ಡ್ ಕಾಲ್ ಕೊಡುವ ಮೂಲಕ ಸದಸ್ಯತ್ವ ನೋಂದಣಿ ಮಾಡಬೇಕಿದೆ. ಅದೇ ರೀತಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಂಪರ್ಕ, ಸರ್ಕಾರದ ಸಾಧನೆಗಳ ಗೋಡೆಬರಹ ಮತ್ತು ಡಿಜಿಟಲ್ ಬರಹ ಕೂಡ ಬರೆಯುವ ಜೊತೆಗೆ, ತಿಂಗಳ ಕೊನೆ ಭಾನುವಾರ ಪ್ರಧಾನಮಂತ್ರಿಗಳ 'ಮನ್ ಕೀ ಬಾತ್ ಕಾರ್ಯಕ್ರಮವನ್ನು ಪ್ರತಿ ಬೂತ್‌ಗಳಲ್ಲಿ ಕಾರ್ಯಕರ್ತರು ಸಾರ್ವಜನಿಕರೊಂದಿಗೆ ವೀಕ್ಷಿಸಬೇಕು ಎಂದರು.

ಬಣ್ಣ ಮತ್ತು ಅರಗು ನಿಗಮದ ಮಾಜಿ ಅಧ್ಯಕ್ಷ ಫಣೀಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್, ಮಡವಾಡಿ ಮಹೇಶ್, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಕರೋಹಟ್ಟಿ ಮಹದೇವಯ್ಯ, ವಿಸ್ತಾರಕ ವಿನೋದ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ಪಿಎಸಿಸಿ ಅಧ್ಯಕ್ಷ ಬಿ.ವೀರಭದ್ರಪ್ಪ, ಹದಿನಾರು ಮಲ್ಲಿಕಾರ್ಜುನ, ಜಿಲ್ಲಾ ಕಾರ್ಯದರ್ಶಿ ವೆಂಕಟರಮಣಶೆಟ್ಟಿ, ಪ್ರಧಾನ ಕಾರ್ಯದರ್ಶಿ ಸಿದ್ದಮಲ್ಲಪ್ಪ ಅನಿಲ್ ಕುಮಾರ್, ಡಾ.ಮಲ್ಲಿಕಾರ್ಜುನ್, ಕರೋಹಟ್ಟಿ ಬಸವರಾಜು, ಶಿವಕುಮಾರ್, ದಯಾನಂದ ಪಟೇಲ್, ತಿರುಮಕೂಡಲು ವಾಸು, ಕುರುಬೂರು ಮಂಜುನಾಥ್, ಚೌಹಳ್ಳಿ ಸಿದ್ದರಾಜು, ಗೂಳಿ ಮಹೇಶ್, ಕಾರ್ಯದರ್ಶಿ ನಂದನ್ ಕುಮಾರ್, ಎಸ್.ಅರವಿಂದ್, ಎಸ್‌ಬಿಟಿ ಸುರೇಶ್ ಸೇರಿದಂತೆ ಕಾರ್ಯಕರ್ತರು, ಬೂತ್ ಅಧ್ಯಕ್ಷರು ಹಾಜರಿದ್ದರು.

ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಕೊನೆ ನೆಂಟ!

ರಾಜ್ಯದಲ್ಲಿ ಕಾಂಗ್ರೆಸ್‌ಗೆ ನಾಯಕತ್ವವಿಲ್ಲ. ಈಗ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಜೈಲಿಗೆ ಹೋಗಿ ಬಂದು ಬೇಲ್ ಮೇಲೆ ಓಡಾಡಿಕೊಂಡಿರುವಾತ. ಮತ್ತೆ ಜೈಲಿಗೆ ಹೋಗಲು ಸಿದ್ಧವಾಗಿರುವ ಅವನ ಅಧ್ಯಕ್ಷಗಿರಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಾರದು. ಇನ್ನು ಸಿದ್ದರಾಮಯ್ಯ ರಾಜ್ಯದ 224 ಕ್ಷೇತ್ರಗಳನ್ನೂ ಗೆಲ್ಲಿಸಿ ಬಿಡುತ್ತೇನೆಂದು ಬೊಗಳೆ ಬಿಡುತ್ತಿದ್ದು, ಸ್ವತಃ ತನ್ನ ಸ್ವಂತ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಒಮ್ಮೆ ವರುಣಾ, ಮತ್ತೊಮ್ಮೆ ಕೋಲಾರ, ಮಗದೊಮ್ಮೆ ಹೈಕಮಾಂಡ್ ಹೇಳಿದ ಕಡೆ ನಿಲ್ಲುತ್ತೇನೆಂದು ಹೇಳುವ ಮೂಲಕ ಸ್ವಂತ ಕ್ಷೇತ್ರವನ್ನು ಘೋಷಣೆ ಮಾಡಿಕೊಳ್ಳುವ ತಾಕತ್ತಾಗಲೀ, ಧಮ್ಮಾಗಲಿ ಆತನಿಗೂ ಇಲ್ಲ ಎಂದು ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ಆತನ ನಾಯಕತ್ವಕ್ಕೆ ಬೆಲೆ ಇಲ್ಲದಂತಾಗಿದೆ. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಎಂದೋ ಅವನತಿ ಹೊಂದಿದ್ದು, ಸಿದ್ದರಾಮಯ್ಯ ಈಗ ಪಕ್ಷಕ್ಕೆ ವಲಸೆ ಬಂದಿರುವ ಕೊನೆಯ ನೆಂಟ. **–ಸಿ.ರಮೇಶ್,**

ಮಾಜಿ ವಿಧಾನಪರಿಷತ್ ಸದಸ್ಯ

ಸಧೃಡ ಭಾರತ ನಿರ್ಮಾಣಕ್ಕೆ ಶ್ರಮಿಸಲು ಕರೆ



ಹುಣಸೂರು, ಜ.27– ಸಂವಿಧಾನ ನಮಗೆ ನೀಡಿರುವ ಹಕ್ಕು, ಕರ್ತವ್ಯಗಳನ್ನು ಪಾಲಿಸುವ ಮೂಲಕ ಸಧೃಡ ಭಾರತ ನಿರ್ಮಾಣಕ್ಕೆ ಎಲ್ಲರೂ ಶ್ರಮಿಸೋಣ ಎಂದು ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಕರೆ ನೀಡಿದರು.

74ನೇ ಗಣರಾಜ್ಯೋತ್ಸವ ಅಂಗವಾಗಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ವಿವಿಧತೆಯಲ್ಲಿ ಏಕತೆ ನಮ್ಮ ದೇಶದ ವಿಶೇಷತೆಯಾಗಿದೆ. ಸಂವಿಧಾನ ಸಮಾನತೆ, ಭ್ರಾತೃತ್ವ ಮತ್ತು ದೇಶಪ್ರೇಮ ತಿಳಿಸಿದೆ. ಸಂವಿಧಾನ ರಕ್ಷಿಸುವ ಮತ್ತು ಪಾಲಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಹಲವು ವೈರುಧ್ಯಗಳು ನಮ್ಮ ನಡುವೆ ಭಿನ್ನಾಭಿಪ್ರಾಯ ತಂದರೂ ದೇಶದ ಏಕತೆಗಾಗಿ ನಾವೆಲ್ಲರೂ ಒಂದಾಗಿ ಬಾಳುವುದನ್ನು ಸಂವಿಧಾನ ಕಲಿಸುತ್ತದೆ. ಅದರಂತೆ ಸರ್ವರ ಕಲ್ಯಾಣಕ್ಕಾಗಿ ಒಂದಾಗಿ ದುಡಿಯೋಣ ಎಂದರು.

ಮೈಸೂರು ವಿವಿ ಸಹಾಯಕ ಪ್ರಾಧ್ಯಾಪಕ ಬಿಪಿನ್ ನಾಗರಾಜ್, ಸಂವಿಧಾನ ಯಥಾವತ್ ಜಾರಿಯಿಂದ ಮಾತ್ರ ದೇಶದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಸಂವಿಧಾನದ ಮಹತ್ವವನ್ನು ವಿದ್ಯಾರ್ಥಿ ದಿಸೆಯಿಂದಲೇ ಮಕ್ಕಳಿಗೆ ತಿಳಿಸುವ ಅಗತ್ಯ ಇದೆ. ಶಾಸಕನಾಗಿ ನಾನು ಕಳೆದ 2–3 ವರ್ಷಗಳಿಂದ ಸಂವಿಧಾನ ಕೈಪಿಡಿಯನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಕಾರ್ಯ ನಡೆಸಿದ್ದು, ಈ ನಿಟ್ಟಿನಲ್ಲಿ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಬೇಕಿದೆ ಎಂದರು.

ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಮಾತನಾಡಿದರು. ನಗರ ಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಡಿವೈಎಸ್‌ಪಿ ಮಹೇಶ್, ತಹಸೀಲ್ದಾರ್ ಡಾ.ಎಸ್.ಯು. ಅಶೋಕ್, ತಾಪಂ ಆಡಳಿತಾಧಿಕಾರಿ ಎಸ್.ಇ.ನಂದಾ, ಹುಡಾ ಅಧ್ಯಕ್ಷ ಗಣೇಶ್ ಕುಮಾರ ಸ್ವಾಮಿ, ಮುಖಂಡರಾದ ನಾಗರಾಜ ಮಲ್ಲಾಡಿ, ನಗರಸಭಾ ಸದಸ್ಯರು ಇತರರಿದ್ದರು.

ಚುನಾವಣೆ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನಿಶ್ಚಿತ

ಮಡಿವಾಳರ ಜಾಗೃತ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ



ನಂಜನಗೂಡು, ಜ.27– ಚುನಾವಣೆ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನಿಶ್ಚಿತವಾಗಿದ್ದು, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದಿರುವ ಮಡಿವಾಳ ಸಮುದಾಯದ ಶ್ರೇಯೋಭಿವೃದ್ಧಿಗೆ ಮುಂಬರುವ ದಿನಗಳಲ್ಲಿ ಅಗತ್ಯ ನೆರವು ನೀಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಭರವಸೆ ನೀಡಿದರು.

ತಾಲೂಕಿನ ಕುಪ್ಪರವಳ್ಳಿ ಗ್ರಾಮದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಮಡಿವಾಳರ ಸಂಘದಿಂದ ಆಯೋಜಿಸಿದ್ದ ಮಡಿವಾಳರ ಜಾಗೃತ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್‌ನಿಂದ ಮಡಿವಾಳ ಜನಾಂಗಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡಲಾಗುವುದು. ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಮಡಿವಾಳ ಸಮುದಾಯದ ಜನರ ಬೇಡಿಕೆಯಂತೆ ಓರ್ವ ಸದಸ್ಯರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿಸಲಾಗುವುದು. ಇನ್ನು ಮಡಿವಾಳ ಸಮುದಾಯದವರು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ. ಆದರೆ ಯಾವುದೇ ಸಮುದಾಯವನ್ನು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರ್ಪಡೆ ಮಾಡುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೆ ಮಾತ್ರ ಹೀಗಾಗಿ ಈ ಬಗ್ಗೆ ಮುಂಬರುವ ದಿನಗಳಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದರು.

ರಾಜ್ಯ ಮಡಿವಾಳ ಸಂಘದ ಗೌರವಾಧ್ಯಕ್ಷ ಕೆ.ಎಸ್.ರವಿಕುಮಾರ್ ಮಾತನಾಡಿ, ಮಡಿವಾಳ ಜನಾಂಗದವರು ಪ್ರಗತಿ ಸಾಧಿಸುವ ಸಲುವಾಗಿ ಸಂಘಟಿತರಾಗಬೇಕಿದೆ. ಇನ್ನು ರಾಜಕೀಯವಾಗಿ ತೀರಾ ಹಿಂದುಳಿದಿರುವ ಮಡಿವಾಳ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವಂತೆ ಮಾಜಿ ಸಿಎಂ ಸಿದ್ದರಾಮಯ್ಯಗೆ ಮನವಿ ಸಲ್ಲಿಸಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮಡಿವಾಳರ ಸಂಘದ ರಾಜ್ಯಾಧ್ಯಕ್ಷ ನಂಜಪ್ಪ, ಗೋಪಿಕೃಷ್ಣ, ಎಂ.ರಾಮಯ್ಯ, ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಅಮರ್‌ನಾಥ್, ಮಹದೇವು, ಸಂತೋಷ್, ತಾಲೂಕು ಮಡಿ ವಾಳ ಸಂಘದ ಅಧ್ಯಕ್ಷ ಪ್ರಸನ್ನ ಕುಮಾರ್, ಟಿ.ನರಸೀಪುರ ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಜಯರಾಂ, ಶಿವಣ್ಣ, ಮಾದರಾಜು, ಮಹದೇವ್ರು, ಬಸವರಾಜು, ಕಾರ್ಯದರ್ಶಿ ಬಸವರಾಜು ಮತ್ತಿತರರಿದ್ದರು.

ಅಂಬೇಡ್ಕರ್‌ರಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬುನಾದಿ



ಹೆಚ್.ಡಿ.ಕೋಟೆ, ಜ.27–ಡಾ.ಬಿ.ಆರ್. ಅಂಬೇಡ್ಕರ್ ದೇಶಕ್ಕೆ ಬೃಹತ್ ಸಂವಿಧಾನ ನೀಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬುನಾದಿ ಹಾಕಿದ್ದಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ 74ನೇ ಗಣರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಲವು ಧರ್ಮ, ಸಂಸ್ಕೃತಿಯಿಂದ ಕೂಡಿರುವ ದೇಶ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾನತೆ ಹಾಗೂ ಏಕತೆ ಸಾರುತ್ತಿದೆ ಎಂದರು.

ಇಂದು ನಾನು ಶಾಸಕನಾಗಿ ಆಯ್ಕೆಯಾಗಲು ಸಂವಿಧಾನ ಕಾರಣ. ಸಂವಿಧಾನ ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಡಾ.ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಳ್ಳಬೇಕು. ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆ ಆಗದಂತೆ ರಕ್ಷಣೆ ಮಾಡಬೇಕು ಎಂದರು.

ಮುಖ್ಯ ಭಾಷಣಕಾರ ಸಾಹಿತಿ ಡಾ.ಕಿರಣ್ ಮಾತನಾಡಿದರು. ಇದಕ್ಕೂ ಮುನ್ನಾ ತಹಸೀಲ್ದಾರ್ ರತ್ನಾಂಬಿಕಾ ತಾಲೂಕು ಆಡಳಿತಸೌಧದ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕುಸ್ತಿಯಲ್ಲಿ ಪದಕ ಪಡೆದ ಪಟ್ಟಣದ ವಡ್ಡರಗುಡಿ ನಾಗೇಶ್ ಹಾಗೂ ರಾಷ್ಟ್ರ ಮಟ್ಟದ ಬಾಲ್ ಬ್ಯಾಡ್ಮಿಂಟನ್‌ಗೆ ಆಯ್ಕೆಯಾದ ಬೀಚನಹಳ್ಳಿ ಶಾಲಾ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭಾ ಅಧ್ಯಕ್ಷೆ ಅನಿತಾ, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಶಾಂತಮ್ಮ ಕನ್ನಡ ಪ್ರಮೋದ್, ಇಓ ರಾಜೇಶ್ ಜೆರಾಲ್ಡ್, ಗ್ರೇಡ್–2 ತಹಸೀಲ್ದಾರ್ ಸಣ್ಣ ರಾಮಪ್ಪ, ಸಿಪಿಐ ಬಸವರಾಜು, ಡಾ.ಕಿರಣ್, ಬಸವರಾಜು, ಬಿಇಓ ಉದಯ್ ಕುಮಾರ್, ಸರ್ವೆ ಎಡಿ ಜಗನ್ನಾಥ್, ಪುರಸಭಾ ಸಿಇಓ ಸುರೇಶ್, ಎಇಇ ಬೋರಯ್ಯ, ನಾಗರಾಜು, ರಾಮಪ್ರಸಾದ್, ನಾರಾಯಣಸ್ವಾಮಿ, ಆಶಾ, ಶಶಿಕಲಾ, ರಂಗಸ್ವಾಮಿ, ರಾಮೇಗೌಡ, ಡಾ.ಪೂರ್ಣನಂದ ಇದ್ದರು.

ದೇಶ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ: ಸಾರಾ



ಕೆ.ಆರ್.ನಗರ, ಜ.27– ಸಂವಿಧಾನದ ಆಶಯದಂತೆ ಭ್ರಷ್ಟಾಚಾರ ರಹಿತ, ಜಾತ್ಯತೀತ ಮನೋಭಾವದ ಸಮಾಜ ಕಟ್ಟುವ ಮೂಲಕ ದೇಶ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

ಪಟ್ಟಣದ ಡಾ.ರಾಜ್ ಸಾಂಸ್ಕೃತಿಕ ಬಾನಂಗಳದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ 74ನೇ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಭಾರತದ ಭವಿಷ್ಯಕ್ಕಾಗಿ ಸಮಗ್ರ ಸಂವಿಧಾನ ರಚಿಸಿ ಅದನ್ನು ಅಂಗೀಕರಿಸಿದ ದಿನವಾದ ಇಂದು ಭಾರತೀಯರಾದ ನಮ್ಮಗಳ ಪಾಲಿಗೆ ಅವಿಸ್ಮರಣೀಯ. ಒಂದು ಕಡೆ ಬಾಬಾ ಸಾಹೇಬರು ರಚಿಸಿದ ಸಂವಿಧಾನ ಜಾರಿಗೆ ಬಂದ ಸಂಭ್ರಮವಾದರೇ ಮತ್ತೊಂದೆಡೆ ವೀರ ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣ ಅವರನ್ನು ನೇಣಿಗೇರಿಸಿದ ದುಃಖದ ದಿನ ಎಂದರು.

ಧ್ವಜಾರೋಹಣ ನೆರವೇರಿಸಿ ನಾಡಹಬ್ಬಗಳ ಸಮಿತಿ ಅಧ್ಯಕ್ಷ ತಹಸೀಲ್ದಾರ್ ಎಸ್. ಸಂತೋಷ್ ಗಣರಾಜ್ಯೋತ್ಸವ ಸಂದೇಶ ನೀಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಪುಟ್ಟಸಿದ್ದಶೆಟ್ಟಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಪಟ್ಟಣದ ಪ್ರಸೂತಿ ತಜ್ಞೆ ಡಾ.ಭವಾನಿ, ನಿವೃತ್ತ ಬ್ಯಾಂಕ್ ಅಧಿಕಾರಿ ಸೋಮಯಾಜಿ, ನಿವೃತ್ತ ಶಿಕ್ಷಕ ಮಂಚೇಗೌಡ, ಮುಖ್ಯಶಿಕ್ಷಕ ಎಂ.ಕೆ.ರಮೇಶ್, ಪಶುವೈದ್ಯ ಡಾ.ರಾಮು, ಖಜಾನೆ ಸಿಬ್ಬಂದಿ ರಘು, ಕಂದಾಯ ಇಲಾಖೆ ನೌಕರ ಮಹದೇವಶೆಟ್ಟಿ, ಪೌರ ಕಾರ್ಮಿಕರಾದ ಪದ್ಮಮ್ಮ, ಆಶಾ ಕಾರ್ಯಕರ್ತೆ ಎ.ಎನ್. ಸುಜಾತಬಾಯಿ, ಎಂ.ರೂಪಾ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಪುರಸಭಾ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಜಾವೀದ್ ಪಾಷಾ, ಮುಖ್ಯಾಧಿಕಾರಿ ಡಾ.ಜಯಣ್ಣ, ತಾಪಂ ಇಓ ಹೆಚ್.ಕೆ.ಸತೀಶ್, ಬಿಇಓ ಟಿ.ಎನ್.ಗಾಯಿತ್ರಿ, ಪಶುಪಾಲನಾ ಇಲಾಖೆ ಎಡಿ ಡಾ.ಮಂಜುನಾಥ್, ಟಿಎಸ್‌ಡಬ್ಲ್ಯೂ ಎಸ್.ಎಂ.ಅಶೋಕ್‌ಕುಮಾರ್, ಟಿಹೆಚ್‌ಓ ಡಾ.ಕೆ.ಆರ್.ಮಹೇಂದ್ರಪ್ಪ, ಕೃಷಿ ಇಲಾಖೆ ಎಡಿ ಎಂ.ಎಸ್.ಗುರುಪ್ರಸಾದ್, ವಲಯ ಅರಣ್ಯಾಧಿಕಾರಿ ರಶ್ಮಿ, ಕಂದಾಯ ಇಲಾಖೆ ನೌಕರರಾದ ಎಸ್.ಮಹೇಶ್, ಸಣ್ಣಸ್ವಾಮಿ, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಮುಖಂಡರಾದ ನಾಗರಾಜ್, ವಿಜಯ್ ಇನ್ನಿತರರಿದ್ದರು.

ಸರಗೂರಿನಲ್ಲಿ ಅದ್ಧೂರಿ ಗಣರಾಜ್ಯೋತ್ಸವ

ಸರಗೂರು, ಜ.27– ತಾಲೂಕಿನ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜು, ಸರ್ಕಾರೇತರ ಕಚೇರಿಗಳು ಸೇರಿದಂತೆ ಸಂಘ ಸಂಸ್ಥೆಗಳಿಂದ 74ನೇ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಆ ಮೂಲಕ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರನ್ನು ಸ್ಮರಿಸಲಾಯಿತು.

ಸಂವಿಧಾನದ ಆಶಯಕ್ಕೆ ಒತ್ತು: ತಾಲೂಕು ಆಡಳಿತದಿಂದ ನಡೆದ ಗಣರಾಜೋತ್ಸವದಲ್ಲಿ ವಕೀಲ ರವಿಶಂಕರ್ ಮಾತ ನಾಡಿ, ಭವ್ಯ ಭಾರತದ ಪ್ರಜೆಗಳು ಸಂವಿಧಾನದ ಆಶಯಗಳನ್ನು ಅರ್ಥೈಸಿಕೊಳ್ಳಬೇಕು. ಸಂವಿಧಾನ ಆಶಯಗಳಂತೆ ನಡೆದುಕೊಂಡರೆ ಮಕ್ಕಳ ಭವಿಷ್ಯ ಉಜ್ವಲಗೊಳ್ಳಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಯ, ಪ್ರಜ್ಞೆ ವ್ಯಯ ಮಾಡುತ್ತಿದ್ದೇವೆ ಎಂಬ ಆತಂಕವಿದೆ. ಸಂವಿಧಾನದಡಿ ಕೇಂದ್ರ ಸರ್ಕಾರ ರಾಜ್ಯಗಳ ಮೇಲಿನ ಹಿಡಿತ ಸಾಧಿಸಿ ಆಡಳಿತ ನಡೆಸುತ್ತಿದೆ ಎಂದರು.

ತಹಶೀಲ್ದಾರ್ ಚಲುವರಾಜು ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಬೇಡ್ಕರ್‌ರನ್ನು ಎಲ್ಲರೂ ಅರ್ಥಮಾಡಿಕೊಳ್ಳಲು ಮುಂದಾಗಬೇಕು. ವಿಭಜನೆಯಾದ ದೇಶ ಒಗ್ಗೂಡಿಸಲು ವಿಶ್ವದಲ್ಲೇ ಬಹುದೊಡ್ಡ ಸಂವಿಧಾನ ರಚಿಸಿದ್ದಾರೆ. ಆ ಮೂಲಕ ಆಡಳಿತ ನಡೆಯುತ್ತಿದೆ ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಯ್, ಪಪಂ ಮುಖ್ಯಾಧಿಕಾರಿ ಕೆ.ಪಿ.ವಸಂತಕುಮಾರಿ, ಕಾಲೇಜು ಪ್ರಾಂಶುಪಾಲ ಡಾ.ಮಲ್ಲೇಶ್, ಗ್ರೇಟು–2 ತಹಸೀಲ್ದಾರ್ ಪರಶಿವಮೂರ್ತಿ, ಎಂ.ಕೆಂಡಗಣ್ಣಸ್ವಾಮಿ, ಪಪಂ ಸದಸ್ಯರಾದ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ಹೇಮಾವತಿ, ಉಮಾ, ಚೈತ್ರಾ, ನವೀನ್ ಕುಮಾರ್, ಸಣ್ಣತಾಯಮ್ಮ, ರಂಗಸ್ವಾಮಿ, ಎಸ್.ನಾರಾಯಣ್, ವರ್ತಕರ ಮಂಡಳಿ ಶ್ರೀನಿವಾಸ್, ಮುಖಂಡರಾದ ಶಿವಕುಮಾರ್, ಮಹೇಶ್, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಮಲ್ಲೇಶ್, ನಿಂಗರಾಜು, ದೈಹಿಕ ಶಿಕ್ಷಕ ನಾಗೇಶ್, ಉಪ ತಹಸೀಲ್ದಾರ್ ಸುನೀಲ್ ಇನ್ನಿತರರಿದ್ದರು.

ದೊಡ್ಡಹೆಜ್ಜೂರಲ್ಲಿ ಆಂಜನೇಯಸ್ವಾಮಿ ದೇವಾಲಯ ಲೋಕಾರ್ಪಣೆ



ಹನಗೋಡು, ಜ.27– ಸುಮಾರು 700 ವರ್ಷಗಳ ಇತಿಹಾಸವುಳ್ಳ ದೊಡ್ಡಹೆಜ್ಜೂರು ಗ್ರಾಮದ ಶ್ರೀಆಂಜನೇಯಸ್ವಾಮಿ ದೇವಾಲಯವನ್ನು ಸಾವಿರಾರು ಭಕ್ತರ ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಲಾಯಿತು.


ಶುಕ್ರವಾರ ಮುಂಜಾನೆಯೇ ಆದಿಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ ಹಾಗೂ ಗಾವಡಗೆರೆ ನಟರಾಜ ಸ್ವಾಮೀಜಿ ಸಾನಿಧ್ಯದಲ್ಲಿ ದೇವಾಲಯದ ಆವರಣದ ನವಗ್ರಹ, ಅರಳಿಕಟ್ಟೆ, ಗರುಡಗಂಭ ಹಾಗೂ ದೇವಾಲಯದ ಗೋಪುರ ಉದ್ಘಾಟನೆ ನಡೆಯಿತು. ಶಾಸಕ ಜಿ.ಟಿ. ದೇವೇಗೌಡ ಮಂಜಾನೆಯೇ ಭೇಟಿ ನೀಡಿ ದೇವರ ದರ್ಶನ ಪಡೆದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಸುತ್ತಮುತ್ತಲ 16 ಹಳ್ಳಿಗರು ಸೇರಿ ಐತಿಹ್ಯವುಳ್ಳ ಈ ದೇವಾಲಯವನ್ನು ಸುಂದರವಾಗಿ ನಿರ್ಮಿಸಿಕೊಂಡಿದ್ದು, ಅರಣ್ಯದಂಚಿನಲ್ಲಿರುವ ಈ ದೇವಾಲಯಕ್ಕೂ ನಮ್ಮ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದ್ದು, ನಮ್ಮೆಲ್ಲಾ ಶುಭ ಕಾರ್ಯಗಳು ಇಲ್ಲಿಂದಲೇ ಆರಂಭಗೊಳ್ಳುತ್ತಿರುವುದು ಸಂತಸದ ಸಂಗತಿ ಎಂದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮನಾಥಸ್ವಾಮಿ ಆರ್ಶೀವಚನ ನೀಡಿ, ಈ ಭಾಗದ ಜನರ ಆರಾಧ್ಯ ದೈವ ಶ್ರೀ ರಾಮ ಆಂಜನೇಯಸ್ವಾಮಿಗೆ ಭವ್ಯ ದೇವಾಲಯ ನಿರ್ಮಿಸಿರುವುದು ಹೆಮ್ಮೆ. ಇದೊಂದು ಯಾತ್ರಾಸ್ಥಳವಾಗಲಿದೆ ಎಂದರು.

ಗಾವಡಗೆರೆ ಮಠದ ಶ್ರೀನಟರಾಜ ಸ್ವಾಮೀಜಿ ಮಾತನಾಡಿದರು. ಈ ವೇಳೆ ದೇವಾಲಯ ಸಮಿತಿ ಅಧ್ಯಕ್ಷ ಶೇಖರೇಗೌಡ, ಗ್ರಾಪಂ ಅಧ್ಯಕ್ಷ ಸುಭಾಷ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಮುಖಂಡ ರವಿ ಮಾತನಾಡಿದರು. ಸಮಿತಿ ಪದಾಧಿಕಾರಿಗಳಾದ ರಾಮಚಂದ್ರ, ನಟರಾಜ್, ನಾಗೇಶ್, ರಾಮಕೃಷ್ಣೇಗೌಡ, ಮಹದೇವಣ್ಣ, ಮಾದೇಗೌಡ, ದೊಡ್ಡಹೆಜ್ಜೂರು ಸೊಸೈಟಿ ಅಧ್ಯಕ್ಷ ಚಂದ್ರಶೇಖರ್, ಹನಗೋಡು ಸೊಸೈಟಿ ಅಧ್ಯಕ್ಷ ಹನುಮ, ಯು.ರಾಮೇಗೌಡ, ಯು.ನಂಜಯ್ಯ, ಉದ್ಯಮಿ ಅನಿಲ್, ಕೂಸಪ್ಪ ಸೇರಿದಂತೆ ಅನೇಕರಿದ್ದರು. ಐದು ಸಾವಿರಕ್ಕೂ ಹೆಚ್ಚು ಮಂದಿ ಭಕ್ತರು ಭಾಗವಹಿಸಿದ್ದರು. ಭಕ್ತರಿಗೆ ದಾಸೋಹ ಆಯೋಜಿಸಲಾಗಿತ್ತು.

ಸಂಜೆ ಶಾಸಕ ಮಂಜುನಾಥ್ ಭೇಟಿ: ಶುಕ್ರವಾರ ಸಂಜೆ ದೊಡ್ಡಹೆಜ್ಜೂರು ಆಂಜನೇಯಸ್ವಾಮಿ ದೇವಾಲಯಕ್ಕೆ ಶಾಸಕ ಹೆಚ್.ಪಿ. ಮಂಜುನಾಥ್ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅವರು, ತಾವು ಆಂಜನೇಯಸ್ವಾಮಿ ಭಕ್ತ ನಾಗಿದ್ದು, ಈ ಸುಂದರ ದೇವಾಲಯ ತಾಲೂಕಿನ ಕೀರ್ತಿ ಹೆಚ್ಚಿಸಿದೆ. ನಮ್ಮ ಕುಟುಂಬ ಸಹ ದೇವಾಲಯ ನಿರ್ಮಾಣಕ್ಕೆ ನೆರವು ನೀಡಿದೆ. ಈ ದೇವಸ್ಥಾನ ಪುನರ್ ನಿರ್ಮಾಣಕ್ಕೆ ನೆರವಾದ ಎಲ್ಲಾ ದಾನಿಗಳನ್ನು ಅಭಿನಂದಿಸುತ್ತೇನೆ ಎಂದರು. ಈ ವೇಳೆ ದೇವಾಲಯ ಸಮಿತಿ ಅಧ್ಯಕ್ಷ ಶೇಖರೇಗೌಡ, ಕಾರ್ಯದರ್ಶಿ ನಟರಾಜ್, ಮುಖಂಡರಾದ ಕಸ್ತೂರಿ ಗೌಡ, ಗಣೇಶ್, ಶಿವಕುಮಾರ್, ರಾಜುಶಿವ ರಾಜೇಗೌಡ, ಬಸವಣ್ಣ, ಮಂಜು, ವಿಜಯ್, ಹರೀಶ್, ಗೌರಮ್ಮ ಸೇರಿದಂತೆ ಅನೇಕರಿದ್ದರು.




ಸರಗೂರಿನ ನಾಯಕ ಸಮಾಜದಿಂದ ಶ್ರೀಚಿಕ್ಕದೇವಮ್ಮನವರ 46ನೇ ಪೂಜಾ ಮಹೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ನಡೆಸಲಾಯಿತು. ಈ ವೇಳೆ ಸಮಾಜದ ಯಜಮಾನರು, ಮುಖಂಡರು ಇದ್ದಾರೆ.

ಮಾಂಗಲ್ಯ ಸರ ಕಳವು

ನಂಜನಗೂಡು, ಜ.27– ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಗೃಹಿಣಿಯ ಮಾಂಗಲ್ಯ ಸರ ಕಸಿದು ಪರಾರಿಯಾಗಿರುವ ಘಟನೆ ಶುಕ್ರವಾರ ಬೆಳಗ್ಗೆ ನಗರದ 18ನೇ ತಿರುವಿನ ಬಳಿ ನಡೆದಿದೆ.

ತಾಲೂಕಿನ ದೇಬೂರು ಗ್ರಾಮದ ನಾಗರಾಜು ಅವರ ಪತ್ನಿ ಪದ್ಮಮ್ಮ(57) ಮಾಂಗಲ್ಯ ಸರ ಕಳೆದುಕೊಂಡವರು. ಪದ್ಮಮ್ಮ ತನ್ನ ಮಗಳನ್ನು ಹೆರಿಗೆಗೆ ನಗರದ ಕೃಷ್ಣ ಆಸ್ಪತ್ರೆಗೆ ದಾಖಲಿಸಿದ್ದರು. ಶುಕ್ರವಾರ ಬೆಳಗ್ಗೆ ತಿಂಡಿ ತರಲೆಂದು ಆರ್.ಪಿ.ರಸ್ತೆ ಕಡೆ ನಡೆದುಕೊಂಡು ಬರುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಮಹಿಳೆಯ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಎಸ್‌ಐ ಚಂದ್ರು ತನಿಖೆ ಕೈಗೊಂಡಿದ್ದಾರೆ.

ಬಿ.ಎಸ್.ಸಿದ್ದೇಗೌಡ ನಿಧನ



ಹಿರೀಕ್ಯಾತನಹಳ್ಳಿ, ಜ.27– ಹುಣಸೂರು ತಾಲೂಕಿನ ಗಾವಡಗೆರೆ ರೈತ ಸೇವಾ ಸಹಕಾರ ಸಂಘದ ಮಾಜಿ ಅಧ್ಯಕ್ಷ, ಬಿಳಿಗೆರೆ ಗ್ರಾಮದ ನಿವಾಸಿ ಬಿ.ಎಸ್.ಸಿದ್ದೇಗೌಡ(80) ಶುಕ್ರವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಹಾಸನ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ.

ಕಛೇರಿ ದೂರವಾಣಿ: 08176-252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:31/2022-23
ದಿನಾಂಕ:25.01.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೋಕಿಗೆ 2022-23ನೇ ಸಾಲಿನ ವಿವೇಕ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ (1) HSN-HNP.-2022-23 VIVEKA SCHOOL BUILDING PACKAGE-15(SC) ಹೊನಪುರ ತಾ: ಮುಂಡನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲ ಕಟ್ಟಡ ನಿರ್ಮಾಣ ಹಾಗು ಬಂಡಿಶೆಟ್ಟಿಹಳ್ಳಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲ ಕಟ್ಟಡ ನಿರ್ಮಾಣ ಕಾಮಗಾರಿಗೆ ಪ್ಯಾಕೇಜ್ ಟೆಂಡರನ್ನು ಟೆಂಡರ್ ಮೊತ್ತ ರೂ 25.70 ಲಕ್ಷಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ದಿನಾಂಕ: 27.01.2023ರಿಂದ ದಿನಾಂಕ: 04.02.2023ರ ಸಂಜೆ 5.00ಘಂಟೆಯವರೆಗೆ ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು www.eproc.karnataka.gov.inನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 04.02.2023ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ: 03.02.2023ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 06.02.2023ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ-ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಕಾಮಗಾರಿಯನ್ನು ಪರಿಶಿಷ್ಟ ಜಾತಿಗೆ ಸೇರಿದ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ.. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಪ.ರಾಜ್.
ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1012/2022-23

ಮೈಸೂರು ವೆಲ್ಲಾಳ ಅಸೋಸಿಯೇಷನ್ (ರಿ),
ನಂ 76, ಮಾನಸರ ರಸ್ತೆ, ಇಂದಿರಾನಗರ, (ಇಟ್ಟಿಗೆಗೂಡು), ಮೈಸೂರು–570010

ಇದರ ಚುನಾವಣಾಧಿಕಾರಿಗಳ ಕಛೇರಿಯಿಂದ ಪ್ರಕಟಣೆ ದಿನಾಂಕ: 21.01.2023

ದಿನಾಂಕ: 29.01.2023ರ ಭಾನುವಾರದಂದು ನಡೆಯಲಿರುವ ಮೈಸೂರು ವೆಲ್ಲಾಳ ಅಸೋಸಿಯೇಷನ್ (ರಿ), ಮೈಸೂರು ಇದರ ಮುಂದಿನ 1 ವರ್ಷದ ಅವಧಿಯ ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸಿ ಸಲ್ಲಿಸಿರುವ ನಾಮಿನೇಷನ್ ಅರ್ಜಿಗಳನ್ನು ವಾಪಸ್ ಪಡೆಯಲು ಇಂದು ಅಂತಿಮ ದಿನವಾಗಿದ್ದು, ವಾಪಸಾತಿ ನಂತರ ಬಾಕಿ ಉಳಿದಿರುವ ಅಭ್ಯರ್ಥಿಗಳು ಸಂಘದ ಬೈಲಾ ರೀತ್ಯಾ ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಗೆ ಸಮನಾಗಿರುವುದರಿಂದ, ಈ ಕೆಳಕಂಡ ಅಭ್ಯರ್ಥಿಗಳು ಸಂಘದ ಮುಂದಿನ 1 ವರ್ಷದ ಅವಧಿಯ ಆಡಳಿತ ಮಂಡಳಿ ನಿರ್ದೇಶಕರುಗಳ ಸ್ಥಾನಕ್ಕೆ ನಿಯಮಾನುಸಾರ ಅವಿರೋಧವಾಗಿ ಚುನಾಯಿತರಾಗಿರುತ್ತಾರೆಂದು, ಚುನಾವಣಾಧಿಕಾರಿಯಾದ ನಾನು ಈ ಮೂಲಕ ಘೋಷಿಸುತ್ತೇನೆ.

1. ಕೇಶವನ್.ಎನ್ 2. ಮದನ್.ಎಂ.ಕೆ 3. ವಿ.ಸೋಮು 4. ಸಂತೋಷ್ ಕುಮಾರ್.ಜಿ 5. ಜಿ.ಹರೀಶ್ ಕುಮಾರ್, 6. ತಿಲಕ್.ಬಿ, 7. ಮಂಜುನಾಥ್.ಎನ್ 8. ಬಾಲಸುಬ್ರಮ್ಮಣ್ಯಂ.ಪಿ, 9. ಆರ್.ಸತೀಶ್.ಕುಮಾರ್ 10. ವೆಂಕಟೇಶ್.ಎಸ್ 11.ಆರ್ .ಕುಮಾರ್, 12. ಸುಂದರಮೂರ್ತಿ, 13. ಅಶೋಕ ಕುಮಾರ್.ಎಸ್, 14. ಎಂ.ಎಸ್.ರಮೇಶಕುಮಾರ್, 15. ಡಾ. ವಿಜಯಕುಮಾರ್.ಟಿ, 16.ಜಿ.ಉಮೇಶ್

ಸ್ಥಳ: ಮೈಸೂರು, ದಿನಾಂಕ: 21.01.2023 ಸಹಿ/–(ಕಾರ್ಯದರ್ಶಿ

ನಗರಸಭಾ ಕಾರ್ಯಾಲಯ, ಹೂಟಗಳ್ಳಿ, ಮೈಸೂರು ಜಿಲ್ಲೆ
ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ,
ಹೂಟಗಳ್ಳಿ, ಮೈಸೂರು ಜಿಲ್ಲೆ – 570018
ದೂ.: 0821–2001737 itstaff_ulb_hootagalli@yahoo.com
ಸಂ:ನಸಹೂ:ಘವನಿ:06:2022–23 ದಿನಾಂಕ: 24.01.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆಯ ಸ್ವಚ್ಛಭಾರತ್ ಮಿಷನ್ ಯೋಜನೆ ಹಾಗೂ 15ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ ಕೆಲಸಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಗುತ್ತಿಗೆದಾರರು http://eproc.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿ: 13.02.2023 ಸಂಜೆ 4.30 ಗಂಟೆ. ಟೆಂಡರ್ ತೆರೆಯುವ ದಿ: 14.02.2023 ಸಂಜೆ 5.00 ಗಂಟೆ. 1) DMA/2022-23/IND14906: ಅಂದಾಜು ಮೊತ್ತ: 9.98 ಲಕ್ಷ 2) Cmc/htgl/hs/04/iec/2022-23: ಅಂದಾಜು ಮೊತ್ತ: 6.72 ಲಕ್ಷ

ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

DIPR/DDMYS/KSMCA/920/2022-23

ಸಾರ್ವಜನಿಕ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರ್ಶಾದೆಯ ಮೇರೆಗೆ, ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮ ಮನೆ ನಂ.83ರಲ್ಲಿ ವಾಸವಾಗಿರುವ ಲೇಟ್ ಮರಬಸಪ್ಪ ರವರ ಮಗ ಸುಮಾರು 50 ವರ್ಷ ವಯಸ್ಸಿನ ಶ್ರೀ ಸೋಮಣ್ಣ, (ಆಧಾರ್ ನಂ. 3829 9114 0244) ಮತ್ತು ಶ್ರೀ ಸೋಮಣ್ಣ ನವರ ಧರ್ಮಪತ್ನಿ ಸುಮಾರು 44 ವರ್ಷ ವಯಸ್ಸಿನ ಶ್ರೀಮತಿ ಹೇಮಾವತಿ (ಆಧಾರ್ ನಂ 2888 9452 8523) ಮತ್ತು ಶ್ರೀ ಸೋಮಣ್ಣ ನವರ ಮಗಳು ಹಾಗೂ ಶ್ರೀ ರಾಜೇಶ್ ಎಸ್ ರವರ ಧರ್ಮಪತ್ನಿ ಸುಮಾರು 26 ವರ್ಷ ವಯಸ್ಸಿನ ಶ್ರೀಮತಿ ಪೂರ್ಣಿಮ ಎಸ್ (ಆಧಾರ್ ನಂ 6560 1846 0218) ಮತ್ತು ಶ್ರೀ ಸೋಮಣ್ಣ ನವರ ಮಗ ಸುಮಾರು 23 ವರ್ಷ ವಯಸ್ಸಿನ ರಾಕೇಶ್ (ಆಧಾರ್ ನಂ 3162 3891 0744) ಮತ್ತು ಶ್ರೀ ಸೋಮಣ್ಣ ನವರ ಮಗಳು ಸುಮಾರು 21ವರ್ಷ ವಯಸ್ಸಿನ ಕುಸುಮ ಎಂ. (ಆಧಾರ್ ನಂ 6459 2428 9618)ರವರಿಗೂ, ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 14.09.2022 ನೊಂದಾಯಿತ ಕ್ರಯದ ಕರಾರಿನ ಪ್ರಕಾರ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಈಗಾಗಲೇ ಆ ಸಂಬಂಧ ನನ್ನ ಕಕ್ಷಿದಾರರಿಗೆ ಕೆಲವು ದಾಖಲಾತಿಗಳನ್ನು ಹಾಜರು ಮಾಡಿದ್ದು ನನ್ನ ಕಕ್ಷಿದಾರರು ಸದರಿ ಜಮೀನನ್ನು ನೊಂದಯಿತ ಕ್ರಯ ಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 5 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗ ಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನು ಸಂಬಂಧ ಕ್ರಯ ಪತ್ರವನ್ನು ಪಡೆದುಕೊಳ್ಳುತ್ತಾರೆ. ಮುಂದೆ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮದಲ್ಲಿರುವ ಸರ್ವೆ ನಂ 113/3 ರಲ್ಲಿ ಸೋಮಣ್ಣ ರವರ ಹೆಸರಿನಲ್ಲಿ ಖಾತೆಯಿರುವ ವಿಸ್ತೀರ್ಣ 1 ಎಕರೆ 04 ಗುಂಟೆ ಖುಷ್ಕಿ ಜಮೀನು.ಪೂರ್ವಕ್ಕೆ: ಸರ್ವೆ ನಂ.113ರಲ್ಲಿ ಮಾಯೀಗೌಡರವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.110/4 ರಲ್ಲಿ ಪುಟ್ಟಪ್ಪನವರ ಜಮೀನು ಮತ್ತು ಸ.ನಂ 110/3ರಲ್ಲಿ ಶಿವಕುಮಾರ್ ಅವರ ಜಮೀನು. ಉತ್ತರಕ್ಕೆ: ಸರ್ವೆ ನಂ .113ರಲ್ಲಿ ಮಾಯೀಗೌಎ ರವರ ಜಮೀನು, ದಕ್ಷಿಣಕ್ಕೆ: ಗಣತಪ್ಪನ ದೇವಮ್ಮನವರ ಜಮೀನು

Sd/- Palaksha, Bsc, LLB, Advocate
Enroll. No KAR1146/98, Chamber no 645, 1st Floor, Narayanashastri Road, Behind Shanthala Talkies, Mysore-24,
Mob: 9448075718

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಷೆಡ್ಯೂಲ್ ಪ್ರಾಪರ್ಟಿ, ಅದರ ಸಂಪೂರ್ಣ ಮಾಲೀಕರಾದ ಶ್ರೀಮತಿ ವತ್ಸಲಾ ಡೇವಿಡ್ ಮತ್ತು ಅವರ ಮಕ್ಕಳಾದ ಶ್ರೀ ವರುಣ್ ಆಂಡ್ರ್ಯೂ ಡೇವಿಡ್ ಮತ್ತು ವಿವೇಕ್ ಅಬ್ರಹಾಂ ಡೇವಿಡ್ ಅವರಿಂದ ಖರೀದಿಸಲು ಉದ್ದೇಶಿಸಿದ್ದಾರೆ, ಈ ಷೆಡ್ಯೂಲ್ ಪ್ರಾಪರ್ಟಿ, ಯಾವುದೇ ವ್ಯಕ್ತಿಗಳು/ ಘಟಕಗಳು / ಸಂಸ್ಥೆ(ಗಳು) ಅಥವಾ ಇಲ್ಲಿ ಷೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಹಕ್ಕು ಶೀರ್ಷಿಕೆ, ಅಸಕ್ತಿ ಅಥವಾ ಕ್ಲೈಮ್ ಅನ್ನು ಪ್ರತಿಪಾದಿಸುವ ಯಾರಾದರೂ ಅಥವಾ ಅದರ ಯಾವುದೇ ಭಾಗವು ಯಾವುದೇ ರೀತಿಯಲ್ಲಿ ಈ ಸಾರ್ವಜನಿಕ ಸೂಚನೆಯನ್ನು ನೀಡಿದ 15 (ಹದಿನೈದು) ದಿನಗಳಲ್ಲಿ ಅವರು ಆಧರಿಸಿದ ಮತ್ತು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಎಲ್ಲಾ ಸಾಕ್ಷ್ಯ ಪುರಾವೆಗಳೊಂದಿಗೆ ನನಗೆ ಬರೆಯಬೇಕು ಷೆಡ್ಯೂಲ್ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಇಲ್ಲಿ ಉಲ್ಲೇಖಿಸಲಾದ ಅವಧಿಯ ನಂತರ, ಮಾಡಿದ ಯಾವುದೇ ಕ್ಲೈಮ್ ಅನ್ನು ಯಾವದೇ ರೀತಿಯ ಯಾವುದೇ ಹಕ್ಕುಗಳಿಲ್ಲ ಎಂದು ತೀರ್ಮಾನಿಸುತ್ತೇವೆ ಮತ್ತು ನನ್ನ ಕ್ಲೈಂಟ್ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಮುಂದುವರಿಯುತ್ತಾರೆ. ಯಾವುದೇ ಆಧಾರರಹಿತ ಹಕ್ಕು ಅಥವಾ ಮೋಸದ ಸ್ವರೂಪದ ಹಕ್ಕುಗಳ ವಿರುದ್ಧ ಕ್ರಿಮಿನಲ್ ಕ್ರಮವನ್ನು ಪ್ರಾರಂಭಿಸಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ

ಮೈಸೂರು, ಜಯಲಕ್ಷ್ಮೀಪುರಂ, (ಪಡುವಾರಳ್ಳಿ ವಿಸ್ತರಣೆ(7ನೇ ಮುಖ್ಯರಸ್ತೆಯಲ್ಲಿರುವ 11ನೇ ಬ್ಲಾಕ್‌ನಲ್ಲಿ, ಮೈಸೂರು ನಗರ ಟ್ರಸ್ಟ್ ಬೋರ್ಡ್ ನಿಂದ ಮಂಜೂರು ಮಾಡಲ್ಪಟ್ಟ ಮತ್ತು ಮಾರಾಟವಾದ ಸೈಟ್ ನಂ .89ರ ಆಸ್ತಿಯ ಎಲ್ಲಾ ತುಂಡು ಮತ್ತು ಪಾರ್ಸೆಲ್, ಜೊತೆಗೆ ಸರಿಸುಮಾರು 1500 ಚದರ ಅಡಿ ಕಟ್ಟಡದೊಂದಿಗೆ, ಉತ್ತರದಿಂದ ದಕ್ಷಿಣಕ್ಕೆ 125ಅಡಿ, ಪೂರ್ವದಿಂದ ಪಶ್ಚಿಮಕ್ಕೆ 70 ಅಡಿ, ಒಟ್ಟಾರೆಯಾಗಿ 8750 ಚದರ ಅಡಿ) 972 2/3 ಚದರ ಗಜಗಳು (ನಲ್ಲಿ ನಿಂತಿದೆ ಮತ್ತು ಮಿತಿ ಅಳತೆಯ ಸೈಟ್: ಪೂರ್ವದಿಂದ, ಆಸ್ತಿ ಸಂಖ್ಯೆ : 90, ಪಶ್ಚಿಮದಿಂದ ಆಸ್ತಿ ಸಂಖ್ಯೆ : 88, ಉತ್ತರದಿಂದ ಆಸ್ತಿ ಸಂಖ್ಯೆ : 81, ದಕ್ಷಿಣದಿಂದ: 7ನೇ ಮುಖ್ಯರಸ್ತೆ.

ಸಹಿ/–ವಾಣಿ.ಎಂ.ಎಸ್
ವಕೀಲರು, #369, ಮಾಧವ ಭವನ,
ಜೆ.ಬಿ.ಎಲ್, ರಸ್ತೆ, ಮೈಸೂರು 570005
ಮೊ: 9448342677

ದಿನಾಂಕ: 25 ಜನವರಿ 2022
